
ವಾರ್ತಾ

# ಜನಪದ

ವಾರ್ಷಿಕ ಚಂದಾ ರೂ.25/-

ಆಗಸ್ಟ್ 2020



## ಸವಾಲುಗಳ ಒಂದು ವರ್ಷ
# ಪರಿಹಾರದ ಸ್ಪರ್ಶ

Downloaded From: www.kpscvaani.com



ಜುಲೈ 6 ರಂದು ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್‌ರವರ 34ನೇ ಪುಣ್ಯಸ್ಮರಣೆ ಪ್ರಯುಕ್ತ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಗೃಹ ಸಚಿವರಾದ ಬಸವರಾಜ ಬೊಮ್ಮಾಯಿ ಅವರು ಉಪಸ್ಥಿತರಿದ್ದರು.




ಜುಲೈ 9 ರಂದು ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಸಿದ್ಧಪಡಿಸಲಾಗುತ್ತಿರುವ 10,100 ಹಾಸಿಗೆಗಳ ಘಟಕಕ್ಕೆ ಭೇಟಿ ನೀಡಿ ಮುಖ್ಯಮಂತ್ರಿಗಳು ಪರಿಶೀಲಿಸುತ್ತಿರುವುದು. ಉಪ ಮುಖ್ಯಮಂತ್ರಿಗಳಾದ ಡಾ.ಅಶ್ವತ್ಥನಾರಾಯಣ, ಸಚಿವರಾದ ಬಸವರಾಜ ಬೊಮ್ಮಾಯಿ, ಶ್ರೀರಾಮುಲು, ಡಾ.ಕೆ.ಸುಧಾಕರ್, ಆರ್. ಅಶೋಕ್ ಉಪಸ್ಥಿತರಿದ್ದರು.

Downloaded From: www.kpscvaani.com



# ವಾರ್ತಾ ಜನಪದ

ಸಂಪುಟ-03 • ಸಂಚಿಕೆ-11 • ಆಗಸ್ಟ್ 2020


**05** ಸರ್ಕಾರ ಸಾಗಿ ಬಂದ ಒಂದು ವರ್ಷದ ನೆನಪಲ್ಲಿ....
• ಎಂ. ಸಿದ್ದರಾಜು

**11** ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪಣತೊಟ್ಟಿರುವ ಸರ್ಕಾರ
• ಪಿ.ಕೌಸಲ್ಯ

**15** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದ ರಾಜ್ಯ ಸರ್ಕಾರ
• ಉಮೇಶ್ ಕೋಲಿಗೆರೆ

**19** ಸರ್ಕಾರದಿಂದ ಉದ್ಯೋಗಾಕಾಂಕ್ಷಿಗಳಿಗಾಗಿ ಕೌಶಲ್ಯ ಸಂಪರ್ಕ ವೇದಿಕೆ
• ಸುಭಾಷಿಣಿ

**21** ಆತ್ಮ ನಿರ್ಭರತೆ ಹಾದಿಯಲ್ಲಿ ಕೋವಿಡ್ ವಿರುದ್ಧ ಕರ್ನಾಟಕದ ಸಾಧನೆ
• ಜಡಿಯಪ್ಪ ಗೆದ್ಲಗಟ್ಟಿ

**24** ಒಂದು ವರ್ಷದಲ್ಲಿ ಘಟಿಸಿದ ಸರ್ಕಾರದ ಪ್ರಮುಖ ಘಟನಾವಳಿಗಳ ದೃಶ್ಯ ಮಾಲಿಕೆ

**34** ಕೋವಿಡ್-19 ಹಾಗೂ ಮನೋ ಸಾಮಾಜಿಕ ಸವಾಲು
• ಡಾ. ಸಂಧ್ಯಾಕಾವೇರಿ ಕೆ

**36** ನೇಕಾರ ಸಮ್ಮಾನ್ ಯೋಜನೆಗೆ ಚಾಲನೆ ನೀಡಿದ ಸರ್ಕಾರ
• ಬಿ.ಜಿ.ಪೂರ್ಣಿಮ

**38** ಕೊರೊನಾ ಹತ್ತಿಕ್ಕಲು ಹಗಲಿರುಳು ಶ್ರಮಿಸುತ್ತಿರುವ ಸರ್ಕಾರ ಮತ್ತು ಕೊರೊನಾ ವಾರಿಯರ್ಸ್
• ಸುವರ್ಣ

**43** ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ....
• ಬನ್ನೂರು .ಕೆ ರಾಜು

**46** ರೋಗ ನಿರೋಧಕ ಶಕ್ತಿಗೆ ಆಹಾರವೇ ಬಲ
• ವೆಂಕಟೇಶ ಪ್ರಸಾದ್ ಬಿ.ಎಸ್

**48** ಕೋವಿಡ್ ಆಸ್ಪತ್ರೆಯಾದ ಕಂದಾಯ ಭವನ
• ಸಿ. ಆರ್. ನವೀನ್

**50** ಪದಬಂಧ-9
• ವಿದ್ಯಾ ವಿ. ಹಾಲಭಾವಿ



ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು
ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 01
Ph : 080-22028103 / 22028023
email : varthajanapada@yahoo.co.in
www.dipr.karnataka.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು - 10


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ಓದುಗರಿಂದ...




ಜುಲೈ ವಾರ್ತಾ ಜನಪದ ಸಂಚಿಕೆಯಲ್ಲಿ ನಾಗೇಶ ಹೆಗಡೆ ಅವರು ಬರೆದಿರುವ "ರೋಗಕ್ಕಿಂತ ರೋಗದ ಭಯವೇ ಭಯಾನಕ" ಲೇಖನ ಕೊರೊನಾ ಕುರಿತಂತೆ ತುಂಬಾ ಉತ್ತಮ ಮಾಹಿತಿಯನ್ನು ಒದಗಿಸಿದೆ. ಶೀರ್ಷಿಕೆಯೇ ಹೇಳುವಂತೆ ಕೊರೊನಾ ರೋಗಕ್ಕಿಂತ ಜನರಿಗೆ ರೋಗ ಭಯವೇ ಹೆಚ್ಚಾಗಿದೆ. ಹಾಗಾಗಿಯೇ ಕೆಲವು ಮಂದಿ ತಮಗೆ ಕೊರೊನಾ ಬಂದಿದೆ ಎಂದು ಗೊತ್ತಾದ ಕೂಡಲೇ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲೇಖಕರು ತಮ್ಮ ಲೇಖನದ ಮೂಲಕ ಸಾರ್ವಜನಿಕರಿಗೆ ರೋಗದ ಬಗ್ಗೆ ಇದ್ದ ಭಯವನ್ನು ಹೋಗಲಾಡಿಸಿದ್ದಾರೆ.

ಗಾಬರಿಯಾದಾಗ ನಮ್ಮ ದೇಹದ ಅನೇಕ ವ್ಯವಸ್ಥೆಗಳು ಹೇಗೆ ಕೈಕೊಡುತ್ತವೆ ಎಂಬುದನ್ನು 'ಕಾಡಿನಲ್ಲಿ ಚಿರತೆ ಬಂದಾಗ ಏನಾಗುತ್ತದೆ' ಎಂಬ ಉದಾಹರಣೆಯ ಮೂಲಕ ಎಂತವರಿಗೂ ಅರ್ಥವಾಗುವಂತೆ ಸೊಗಸಾಗಿ ಅರ್ಥೈಸಿದ್ದಾರೆ.

**–ಹನುಮೇಶ ಜವಾದಿ,** ಕೊಪ್ಪಳ

---

ದಕ್ಷಿಣ ಭಾರತದಲ್ಲೇ ತ್ಯಾಜ್ಯ ಮುಕ್ತ ನಗರ ಎಂಬ ಪಟ್ಟಕ್ಕೆ ಪಾತ್ರವಾಗಿರುವ ಮೈಸೂರು ನಗರಕ್ಕೆ ಫೈವ್ ಸ್ಟಾರ್ ಸ್ವಚ್ಛನಗರಿ ಎಂಬ ಪ್ರಶಸ್ತಿಗೆ ಭಾಜನವಾಗಿರುವುದಕ್ಕೆ ಮೈಸೂರಿನವನಾದ ನನಗೆ ಹೆಮ್ಮೆ ಎನಿಸಿತು. ಈ ಕುರಿತು ಸರ್ಕಾರದ ಪತ್ರಿಕೆಯಾದ ವಾರ್ತಾ ಜನಪದದಲ್ಲಿ ಪ್ರಕಟಿಸಿರುವುದನ್ನು ಓದಿ ಇನ್ನೂ ಹೆಚ್ಚಿನ ಸಂತೋಷವಾಯಿತು. ನಮ್ಮ ಮೈಸೂರು ನಗರ ಸ್ವಚ್ಛನಗರಿ ಎಂಬುದನ್ನು ಪದೇ ಪದೇ ಸಾಬೀತು ಪಡಿಸುತ್ತಿರುವುದು ಮೈಸೂರಿನವರಿಗೆಲ್ಲಾ ಹೆಮ್ಮೆಯ ವಿಚಾರ.

ಲೇಖಕರು ಸ್ವಚ್ಛ ನಗರಿ ಪ್ರಶಸ್ತಿಗೆ ಭಾಜನವಾಗುವುದಕ್ಕೆ ಕಾರಣಕರ್ತರಾದ ಪೌರ ಕಾರ್ಮಿಕರಿಂದ ಹಿಡಿದು ಎಲ್ಲಾ ಹಂತದವರ ಪರಿಶ್ರಮವನ್ನು ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಇದಕ್ಕಾಗಿ ದುಡಿದವರಿಗೆಲ್ಲಾ ಇನ್ನಷ್ಟು ಶ್ರದ್ಧೆಯಿಂದ ಕೆಲಸ ಮಾಡಲು ಪ್ರೋತ್ಸಾಹ ನೀಡಿದಂತಾಗುತ್ತದೆ.

**–ಗಿರಿನಾಥ್ ಎಂ.ಪಿ.** ಮೈಸೂರು

---

ಕೊರೊನಾದಿಂದ ದೇಶದಾದ್ಯಂತ ಉಂಟಾದ ಲಾಕ್‌ಡೌನ್ ಮತ್ತು ಕಾರ್ಮಿಕರ ವಲಸೆಯಿಂದ ಬಹಳಷ್ಟು ಉದ್ಯಮಗಳು ನೆಲಕಚ್ಚಿದವು. ಬಹಳಷ್ಟು ಮಂದಿ ಕೆಲಸವನ್ನು ಕಳೆದುಕೊಂಡರು. ಆದರೆ ಇಂತಹ ಸನ್ನಿವೇಶದಲ್ಲೇ ಹೊಸ ಕಸುಬನ್ನು ಕಲಿತು ಆದಾಯವನ್ನು ಹೆಚ್ಚಿಸಿಕೊಂಡಿರುವ ಮಂದಿ ಕುರಿತು ವಾರ್ತಾ ಜನಪದದಲ್ಲಿ ಪ್ರಕಟಿಸುವ ಮೂಲಕ ಕೆಲಸವಿಲ್ಲದೆ ಮುಂದೇನು ಎಂದು ತಲೆ ಮೇಲೆ ಕೈಹೊತ್ತು ಕುಳಿತುಕೊಂಡಿರುವವರಿಗೆ ಪ್ರೇರಣೆಯಾಗಲಿದೆ. ಇಂತಹ ಲೇಖನವನ್ನು ಬರೆದು ಲೇಖಕರಿಗೂ ಹಾಗೂ ಪ್ರಕಟಿಸಿದ ಸಂಪಾದಕ ಬಳಗಕ್ಕೂ ಅಭಿನಂದನೆಗಳು.

**–ಅನಂತ ಪೂಜಾರಿ,** ಭಂಟವಾಳ

---

ಸದಾ ಜನರ ಕಷ್ಟ ಸುಖಗಳ ಬಗ್ಗೆಯೇ ಯೋಚಿಸುವ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದಾಗಿನಿಂದಲೂ ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಾ ಮುನ್ನಡೆಯುತ್ತಿದ್ದಾರೆ. ಅವರು ಕಳೆದ ತಿಂಗಳು ಪೂರ್ತಿ ಸತತವಾಗಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡುವ ಜೊತೆಗೆ ಕೋವಿಡ್–19 ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳು ಮತ್ತು ಇಲಾಖೆಯಿಂದ ಹಾಕಿಕೊಳ್ಳಬೇಕಾಗಿರುವ ಯೋಜನೆಗಳ ಬಗ್ಗೆ ಕೂಲಂಕುಶವಾಗಿ ಸಭೆಯನ್ನು ನಡೆಸಿರುವುದನ್ನು ತಿಳಿದು ಆಶ್ಚರ್ಯವಾಯಿತು.

ಕೊರೊನಾ ಸಾಂಕ್ರಾಮಿಕ ರೋಗ ಪ್ರಾರಂಭವಾದಾಗಿನಿಂದ ಸುಮಾರು ಮೂರು ತಿಂಗಳಿನಿಂದ ವಿಶ್ರಾಂತಿಯನ್ನು ಪಡೆಯದೆ ಮುಖ್ಯಮಂತ್ರಿಗಳು ಸಭೆಗಳನ್ನು ನಡೆಸುತ್ತಾ ಅಧಿಕಾರಿಗಳಿಗೆ, ಸಚಿವ ಸಂಪುಟ ಸಹೋದ್ಯೋಗಿಗಳಿಗೆ ಸಲಹೆ ಸೂಚನೆಗಳನ್ನು ನೀಡುತ್ತಾ ಉತ್ತಮವಾಗಿ ಆಡಳಿತವನ್ನು ನಡೆಸುತ್ತಿದ್ದಾರೆ.

**–ಶಿವಯೋಗಾನಂದ,** ಕುಣಿಗಲ್

---

ಜುಲೈ ಸಂಚಿಕೆಯಲ್ಲಿ ಪ್ರಕಟವಾಗಿರುವ ವಾಣಿವಿಲಾಸ ಸಾಗರ ಅಣೆಕಟ್ಟು ಲೇಖನ ತುಂಬಾ ಚನ್ನಾಗಿದೆ. ಏಷಿಯಾದಲ್ಲೇ ಅತಿ ದೊಡ್ಡ ಮತ್ತು ಹಳೆಯ ಅಣೆಕಟ್ಟೆಯಾದ ಇದರ ಕುರಿತು ಲೇಖನದಲ್ಲಿ ಸಮಗ್ರ ಮಾಹಿತಿಯನ್ನು ನೀಡಲಾಗಿದೆ. ನಮ್ಮ ರಾಜ್ಯದಲ್ಲಿ ಇರುವ ಇಂತಹ ಅಪರೂಪದ ಸ್ಥಳಗಳ ಪರಿಚಯ ಮಾಡಿಸುತ್ತಿರುವ ವಾರ್ತಾ ಜನಪದ ಸಂಪಾದಕೀಯ ಮಂಡಳಿಗೆ ಧನ್ಯವಾದಗಳು.

**–ಮಂಜುಳಾದೇವಿ,** ಹಿರಿಯೂರು

---

ಲಾಕ್‌ಡೌನ್ ಅವಧಿಯಲ್ಲಿ ಕೊಪ್ಪಳ ಜಿಲ್ಲೆಯ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡುವಲ್ಲಿ ಹೇಗೆ ಸಹಾಯ ಮಾಡಿದ್ದಾರೆ, ಎಂಬ ವಿಷಯ ಕುರಿತು ಪ್ರಕಟಿಸಲಾಗಿರುವ ಲೇಖನ ಓದಿ ತುಂಬಾ ಸಂತೋಷವಾಯಿತು. ಸರ್ಕಾರಿ ಇಲಾಖೆಗಳಲ್ಲಿ ಇಂತಹ ಅಧಿಕಾರಿಗಳೂ ಇದ್ದಾರೆ ಎಂಬುದಕ್ಕೆ ಈ ಲೇಖನವೇ ಸಾಕ್ಷಿ. ಈ ಅಧಿಕಾರಿಗಳಂತೆ ಎಲ್ಲಾ ಅಧಿಕಾರಿಗಳು ಕೆಲಸ ಮಾಡಿದರೆ ಸರ್ಕಾರಕ್ಕೆ ಎಂದೂ ಕೆಟ್ಟ ಹೆಸರು ಬಾರದು.

**–ಸಿದ್ದೇಗೌಡ,** ಮಳವಳ್ಳಿ

---

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಅಥವಾ **"The Commissioner, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ರ ಸಾಗಿ ಬಂದ ಂದು ವರ್ಷದ ನೆನಪಲ್ಲಿ...



**ಇದೇ ಜುಲೈ 26 ಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಒಂದು ವರ್ಷ ತುಂಬಲಿದೆ. ಈ ಒಂದು ವರ್ಷದ ಅವಧಿಯಲ್ಲಿ, ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪನವರು ತಮ್ಮ ಕಾರ್ಯದಕ್ಷತೆಯನ್ನು ಆಡಳಿತದ ಅನುಭವವನ್ನು, ತಮ್ಮ ಮಾನವೀಯತೆಯ ಮುಖವನ್ನು ಜನತೆಯ ಮುಂದೆ ತೆರದ ಪುಸ್ತಕದಂತೆ ಇಟ್ಟಿದ್ದಾರೆ. ಪ್ರಜೆಗಳ ಸುಖ, ದುಃಖಗಳಿಗೆ ಸ್ಪಂದಿಸುವ ಮನಸ್ಸುಳ್ಳ ಹಾಗೂ ಅಗಾಧ ಅಂತಃಕರಣವುಳ್ಳ ಮನುಜ ಎಂಬುದು ಈಗಾಗಲೇ ಹಲವಾರು ಸಂದರ್ಭಗಳಲ್ಲಿ ಸಾಬೀತಾಗಿದೆ. ಸರ್ಕಾರದ ಒಂದು ವರ್ಷದ ಅವಧಿಯನ್ನು ನೆನಪು ಮಾಡಿಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.**

ಎಂ. ಸಿದ್ದರಾಜು

ಯಡಿಯೂರಪ್ಪನವರು ತಮ್ಮ ಸುಮಾರು ಐದು ದಶಕಗಳ ರಾಜಕೀಯ ಪಯಣದಲ್ಲಿ ಅಧಿಕಾರ ಅನುಭವಿಸಿದ್ದಕ್ಕಿಂತ ಜನಪರ, ಕೃಷಿಕರ, ಬಡವರ ಪರ ಹೋರಾಟದಲ್ಲಿ ಸವೆಸಿದ ವರ್ಷಗಳೇ ಹೆಚ್ಚು. 1972 ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಯಡಿಯೂರಪ್ಪ ಅವರು, ತದನಂತರದಲ್ಲಿ ರೈತರ, ಬಡವರ ಪರ ದನಿಯಾಗಿ ಕರ್ನಾಟಕದ ಜನ ಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದರೆ ಅದು ಅತಿಶಯೋಕ್ತಿ ಆಗಲಾರದು ಎಂಬುದು ನನ್ನ ವೈಯಕ್ತಿಕ ಅನಿಸಿಕೆ. ಯಡಿಯೂರಪ್ಪನವರು ಜನನಾಯಕನಾಗಿ ಬೆಳೆದು ಈ ಎತ್ತರಕ್ಕೆ ಏರಲು ಅವರಲ್ಲಿರುವ ನಾಯಕತ್ವದ ಗುಣಗಳು ಕಾರಣವೇ ಹೊರತು, ಗಾಡ್‌ಫಾದರ್‌ಗಳ ಆರ್ಶಿವಾದದ ಬಲದಿಂದಲ್ಲಾ.

ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭ ಯಾವುದೇ ಇರಲಿ, ಅದು 2007 ರಲ್ಲಿರಬಹುದು, 2008 ಹಾಗೂ 2018 ಮತ್ತು 2019 ರಲ್ಲಿರಬಹುದು. ಅವೆಲ್ಲವೂ ಬಲು ಕ್ಲಿಷ್ಟಕರವಾದ ಸಂದರ್ಭಗಳೇ ಎಂದು ವ್ಯಾಖ್ಯಾನಿಸಿದರೆ ತಪ್ಪಾಗಲಾರದು. ಸುಮಾರು 34 ವರ್ಷಗಳ ಸುದೀರ್ಘ ಹೋರಾಟದ ನಂತರ ಅಚಾನಕ್ಕಾಗಿ, ಬಿಜೆಪಿ ಪಕ್ಷಕ್ಕೆ ಮೊಟ್ಟ ಮೊದಲ ಬಾರಿಗೆ ದಕ್ಷಿಣ ಭಾರತದ ದೊಡ್ಡ ರಾಜ್ಯದಲ್ಲಿ ಅಧಿಕಾರವನ್ನು ತಂದುಕೊಟ್ಟ ಕೀರ್ತಿಯು ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಜಾತ್ಯಾತೀತ ಜನತಾದಳದ ಜೊತೆಗೆ ಸಮ್ಮಿಶ್ರ ಸರ್ಕಾರ ರಚಿಸುವ ಮೂಲಕ ಬಿಜೆಪಿಯ ಆಡಳಿತ ಪರ್ವಕ್ಕೆ ಮುನ್ನುಡಿ ಬರೆದ ಯಡಿಯೂರಪ್ಪ ಅವರು 2008 ಮತ್ತು 2019 ರಲ್ಲಿ ಪಕ್ಷದ ಸ್ವಂತ ಬಲದ ಮೇಲೆ ಆಡಳಿತ ಚುಕ್ಕಾಣಿ ಹಿಡಿದು ಅದರ ಸಾರಥ್ಯವನ್ನೂ ಸಹ ಹಿಡಿದರು.

ಯಡಿಯೂರಪ್ಪನವರಿಗೆ ಕರ್ನಾಟಕದಲ್ಲಿ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿ ಇತಿಹಾಸ ಸೃಷ್ಟಿಸಿದ ಕೀರ್ತಿಗೆ ಭಾಜನರಾದರೂ ಕೂಡ ಅವರು ದೀರ್ಘಾವಧಿಗೆ



Downloaded From: www.kpscvaani.com









ಅಧಿಕಾರ ನಡೆಸಿದ್ದು ಎರಡು ಅವಧಿಗೆ ಮಾತ್ರ. ಅದು 2008 ಮತ್ತು 2019 ರ ಅವಧಿಯಲ್ಲಿ. ಮಿಕ್ಕ ಎರಡು ಬಾರಿ ಮುಖ್ಯಮಂತ್ರಿಯಾಗಿ ಕೆಲವೇ ಕೆಲವು ದಿನಗಳಷ್ಟೇ ಅಧಿಕಾರ ಅನುಭವಿಸಿದರು.

2006 ರಲ್ಲಿ ರಚನೆಯಾದ ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಆರಂಭದಲ್ಲೇ ಅವರೊಬ್ಬ ಉತ್ತಮ ಹಾಗೂ ಭರವಸೆಯ ಆಡಳಿತಗಾರ ಎಂಬುದನ್ನು ಜನರಿಗೆ ನಿರೂಪಿಸಿದರು. ಯಡಿಯೂರಪ್ಪನವರು ಅಂದು ಜಾರಿಗೊಳಿಸಿದ ಭಾಗ್ಯಲಕ್ಷ್ಮಿ ಯೋಜನೆ, ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಣೆ, ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ, ಹೀಗೆ ಹತ್ತಾರು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಅವರೊಬ್ಬ ಹೃದಯವಂತ ಮಾನವೀಯ ಗುಣವುಳ್ಳ ಅಭಿವೃದ್ಧಿಯ ಹರಿಕಾರ ಎಂಬುದನ್ನು ತೋರಿದರು. ಯಡಿಯೂರಪ್ಪನವರು ತಮ್ಮ ಅಧಿಕಾರದ ಅವಧಿಯಲ್ಲಿ ಜಾರಿಗೊಳಿಸಿದ ಸಂಧ್ಯಾ ಸುರಕ್ಷಾ, ಸುವರ್ಣ ಭೂಮಿ, ಸುವರ್ಣ ಕಾಯಕ, ಸಾವಯುವ ಕೃಷಿ ಯೋಜನೆಗಳು ಇಂದಿಗೂ ಚಾಲ್ತಿಯಲ್ಲಿದ್ದು ಲಕ್ಷಾಂತರ ಜನರಿಗೆ ವರವಾಗಿ ಪರಿಣಮಿಸಿವೆ.

ಇದಲ್ಲದೇ ರಾಜ್ಯದಲ್ಲಿ ಪ್ರಪ್ರಥಮ ಕೃಷಿ ಆಯವ್ಯಯ ಮಂಡಿಸಿದ ಕೀರ್ತಿ ಸಹ ಯಡಿಯೂರಪ್ಪ ನವರಿಗೆ ಸಲ್ಲುತ್ತದೆ. ಶೂನ್ಯ ಬಡ್ಡಿ ದರದಲ್ಲಿ ಕೃಷಿ ಸಾಲ ವಿತರಣೆಯ ಖ್ಯಾತಿ ಸಹ ಇವರ ಸರ್ಕಾರಕ್ಕೆ ಸಲ್ಲುತ್ತದೆ. ಯಡಿಯೂರಪ್ಪನವರ ನಾಯಕತ್ವದಲ್ಲಿ ಬಿಜೆಪಿ ಪಕ್ಷ 2018 ರ ವಿಧಾನಸಭಾ ಚುನಾವಣೆಯಲ್ಲಿ 104 ಸ್ಥಾನ ಗಳಿಸಿ ಸ್ವಂತ ಶಕ್ತಿಯ ಮೇಲೆ ಅಧಿಕಾರದ ಚುಕ್ಕಾಣಿ ಹಿಡಿಯಲು ವಿಫಲವಾಯಿತು. ಆದರೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಕಾರಣದಿಂದಾಗಿ ಯಡಿಯೂರಪ್ಪ ಅವರು ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರೂ, ಬಹುಮತ ಸಾಬೀತು ಪಡಿಸಲಾಗದೆ ರಾಜೀನಾಮೆ ನೀಡಿದರು. 2019 ರಲ್ಲಿ ನಾಲ್ಕನೆಯ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದಾಗಿನಿಂದ ಒಂದಲ್ಲ ಒಂದು ಸಂಕಷ್ಟಗಳು ಎದುರಾಗುತ್ತಿದ್ದರೂ ಕೂಡ ಆತ್ಮಸ್ಥೈರ್ಯದಿಂದ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲಾ ಸಂಕಷ್ಟಗಳನ್ನು ಎದುರಿಸುತ್ತಾ, ಜನರ ಹಿತವನ್ನು ಕಾಯ್ದುಕೊಳ್ಳುತ್ತಾ, ಸರ್ಕಾರವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಅಧಿಕಾರಕ್ಕೆ ಬಂದ ಕೆಲ ದಿನಗಳಲ್ಲಿ ಯಡಿಯೂರಪ್ಪನವರು ಬಹು ಸಂಕಷ್ಟದ ದಿನಗಳನ್ನು ಎದುರಿಸಬೇಕಾಯಿತು. ರಾಜ್ಯದ 22 ಜಿಲ್ಲೆಗಳ 103 ತಾಲೂಕುಗಳು ಪ್ರವಾಹ ಪೀಡಿತವಾಗಿದ್ದವು. 18 ಜಿಲ್ಲೆಗಳ 49 ತಾಲೂಕಿನಲ್ಲಿ ಬರ ಪರಿಸ್ಥಿತಿ ಇತ್ತು. ಒಂದೆಡೆ ಇನ್ನು ರಚನೆಯಾಗದ ಮಂತ್ರಿ ಮಂಡಲ, ಇನ್ನೊಂದೆಡೆ ಪ್ರಕೃತಿ ವಿಕೋಪ.

ಆದರೂ ಯಡಿಯೂರಪ್ಪ ಅವರು ಎದೆಗುಂದದೆ, ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ, ನರೆ ಹಾಗೂ ಬರ ಪೀಡಿತ ಜನರ ಸಂಕಷ್ಟಗಳಿಗೆ ಸ್ಪಂದಿಸಿದ ರೀತಿ ಎಲ್ಲರ ಮೆಚ್ಚುಗೆಯನ್ನು ಗಳಿಸಿತು. ನೆರೆ ಸಂತ್ರಸ್ಥರ ಕುಟುಂಬಕ್ಕೆ ತಲಾ 10,000/- ರೂ.ಗಳ ನೆರವಿನ ಜತೆಗೆ ಸಾವಿಗೀಡಾದ 104 ಮಂದಿಯ ಕುಟುಂಬದವರಿಗೆ ತಲಾ 5.00 ಲಕ್ಷ ರೂಪಾಯಿಗಳ ಪರಿಹಾರ ಘೋಷಣೆ ಮಾಡಿದರು. ಇಷ್ಟಲ್ಲದೆ ಅಪಾರ ಪ್ರಮಾಣದಲ್ಲಿ ನಷ್ಟವಾಗಿದ್ದ ಕೃಷಿ ಬೆಳೆಗಳಿಗೆ ಎನ್ ಡಿಆರ್‌ಎಫ್ ನಿಯಾಮಾವಳಿಗಳಡಿಯಲ್ಲಿ ನೀಡುವ ಪರಿಹಾರದ ಜೊತೆಗೆ ಹೆಚ್ಚುವರಿಯಾಗಿ 10,000/- ರೂಪಾಯಿ ಸೇರಿಸಿ ಕೃಷಿ ಭೂಮಿ ಬೆಳೆಗೆ ಪ್ರತಿ ಹೆಕ್ಟೇರಿಗೆ 16,800/- ರೂ, ತೋಟಗಾರಿಕೆ ಬೆಳೆಗಳಿಗೆ 23,500/- ರೂ, ಶಾಶ್ವತ ನೀರಾವರಿ ಬೆಳೆಗಳಿಗೆ 28,000/- ರೂ ಹಾಗೂ ಇದೆ ಪ್ರಥಮ ಬಾರಿಗೆ ವಾಣಿಜ್ಯ ಬೆಳೆಯಾದ ಕಾಫಿಗೆ 28,000/- ರೂ. ನಂತೆ ಪರಿಹಾರ ಘೋಷಿಸಿ ಕೃಷಿಕರ ಸಂಕಷ್ಟಗಳಿಗೆ ಸ್ಪಂದಿಸಿದ ನಾಯಕರಾದರು.

ಯಡಿಯೂರಪ್ಪನವರು ರೈತರ ಹಿತಕ್ಕಾಗಿ ಪ್ರಧಾನಮಂತ್ರಿ ಕೃಷಿ



Downloaded From: www.kpscvaani.com





ಸಮ್ಮಾನ್ ನಿಧಿ ಯೋಜನೆಯಡಿ ಫಲಾನುಭವಿಗಳಿಗೆ ಕೇಂದ್ರ ಸರ್ಕಾರ ನೀಡುವ ವಾರ್ಷಿಕ 6,000 ರೂಗಳ ನೆರವಿನ ಜೊತೆಗೆ ಹೆಚ್ಚುವರಿಯಾಗಿ 4,000 ರೂ.ಗಳ ನೆರವು ನೀಡಲು ತೀರ್ಮಾನಿಸಿದರು. ನೇಕಾರ ಸಮ್ಮಾನ್ ಯೋಜನೆ, ನೇಕಾರರ ಸಾಲ ಮನ್ನಾ ಯೋಜನೆ, ಮೀನುಗಾರರಿಗೆ ಸಹಾಯ ಯೋಜನೆ ಜಾರಿಗೊಳಿಸಿ ಈ ಎಲ್ಲಾ ವರ್ಗದ ಅಭ್ಯುದಯಕ್ಕೆ ಕಾರಣರಾದರು.

ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಾಯಕತ್ವದಲ್ಲಿ ರಾಜ್ಯದ ಉನ್ನತ ನಿಯೋಗವು ಜನವರಿ 20,2020 ರಲ್ಲಿ ದಾವೋಸ್‌ನಲ್ಲಿ ಜರುಗಿದ ವಿಶ್ವ ಆರ್ಥಿಕ ವೇದಿಕೆ ದಾವೊಸ್-2020 ರಲ್ಲಿ ಭಾಗವಹಿಸಿ ರಾಜ್ಯದ ಅಭಿವೃದ್ಧಿಗೆ ಮುನ್ನುಡಿ ಬರೆದರು. 17 ವರ್ಷಗಳ ಬಳಿಕ ಕರ್ನಾಟಕದ ಮುಖ್ಯಮಂತ್ರಿಗಳು ಭಾಗಹಿಸಿದ ಮಹತ್ವದ ಸಭೆ ಇದಾಗಿತ್ತು. ವಿಶ್ವದ ಆರ್ಥಿಕ ಸಮಾವೇಶದ ಮೂರು ದಿನಗಳಲ್ಲಿ ಯಡಿಯೂರಪ್ಪನವರು ವಿಶ್ವದ ಹಲವಾರು ಉದ್ಯಮ ದಿಗ್ಗಜರೊಡನೆ ಚರ್ಚಿಸಿ ರಾಜ್ಯಕ್ಕೆ ಸಾಕಷ್ಟು ವಿದೇಶಿ ಬಂಡವಾಳ ಆಕರ್ಷಿಸಲು ಯಶಸ್ವಿಯಾದರು.





ಯಡಿಯೂರಪ್ಪನವರ ಸರ್ಕಾರ ನೆರೆ ಮತ್ತು ಬರ ಪರಿಸ್ಥಿತಿ ನಿರ್ವಹಣೆ ಮಾಡಿಕೊಂಡು, ರಾಜಕೀಯ ಅಸ್ಥಿರತೆಗೆ ಪರಿಹಾರ ಕಂಡುಕೊಂಡು ಅಭಿವೃದ್ಧಿಯ ಪಥದಲ್ಲಿ ದಾಪುಗಾಲು ಇಡುವ ಹೊಸ್ತಿಲಿಲ್ಲ, ಬರಸಿಡಿಲಿನಂತೆ ಅಪ್ಪಳಿಸಿತು ಮಹಾಮಾರಿ ಕೊರೊನಾ. ಈ ಸವಾಲನ್ನು ನಿಭಾಯಿಸಲು ಯಡಿಯೂರಪ್ಪ ಸರ್ಕಾರ ಟೊಂಕ ಕಟ್ಟಿ ಸಜ್ಜಾಯಿತು. ಇಡೀ ಮಂತ್ರಿ ಮಂಡಲವೇ ಒಟ್ಟಾಗಿ ಶ್ರಮಿಸಲು ಪಣ ತೊಟ್ಟಿತು.



ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಹಾಗೂ ಭಾದಿತರಿಗೆ ಚಿಕಿತ್ಸೆಗೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ತೆಗೆದುಕೊಂಡು ಜನ ಮೆಚ್ಚುಗೆಯನ್ನು ಗಳಿಸಿತು. ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸತತವಾಗಿ ತನ್ನ ಮಂತ್ರಿಮಂಡಲದ ಸಚಿವರೊಡನೆ, ಅಧಿಕಾರಿಗಳೊಡನೆ, ಖ್ಯಾತ ವೈದ್ಯರು ಮತ್ತು ತಜ್ಞರೊಂದಿಗೆ ಸಭೆ, ಸಮಾಲೋಚನೆ ನಡೆಸಿ ಅಗತ್ಯವಾದ ಕ್ರಮಗಳನ್ನು ತೆಗೆದುಕೊಂಡರು.



ಯಡಿಯೂರಪ್ಪನವರಿಗೆ ಈಗ 77 ವಸಂತಗಳು ತುಂಬಿವೆ. ಆದರೆ ಈಗಲೂ ಅವರಲ್ಲಿ 20 ವರ್ಷದ ತರುಣನ ಉತ್ಸಾಹವಿದೆ. ಈ ವಯಸ್ಸಿಲ್ಲೂ ಅವರದು ಜನ ಹಿತಕ್ಕಾಗಿ ದಣಿವರಿಯದ ದುಡಿಮೆ, ಒಂದಡೆ ದೇಶಾದ್ಯಂತ ಲಾಕ್‌ಡೌನ್‌ನಿಂದಾಗಿ ಕರ್ನಾಟಕದಲ್ಲೂ ವಾಣಿಜ್ಯ ವಹಿವಾಟು, ಕಾರ್ಖಾನೆಗಳು ಸ್ಥಭ್ಧವಾಗಿರುವುದರಿಂದ ಸರ್ಕಾರಕ್ಕೆ ಬರುತ್ತಿದ್ದ ವರಮಾನಕ್ಕೆ ಹೊಡೆತ ಬಿದ್ದಿದೆ.

ಮತ್ತೊಂದಡೆ ಕೊರೊನಾದಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಯ ವೆಚ್ಚ ಭರಿಸಲು ಸಂಪನ್ಮೂಲಗಳನ್ನು ಹೊಂದಿಸುವ ಅನಿವಾರ್ಯತೆ. ಸರ್ಕಾರ ಇದೆಲ್ಲವನ್ನೂ ಸಮರ್ಥವಾಗಿ ನಿರ್ವಹಣೆ ಮಾಡುತ್ತಿದೆ. ಸೋಂಕು ನಿರೀಕ್ಷೆ



Downloaded From: www.kpscvaani.com

**ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಘೋಷಿಸಿದ ಸಂದರ್ಭದಲ್ಲಿ 2272 ಕೋಟಿ ರೂಗಳ ಪ್ಯಾಕೇಜ್ ಘೋಷಣೆ ಮಾಡುವ ಮೂಲಕ ಅಸಂಘಟಿತ ವಲಯದ ಕಾರ್ಮಿಕರು, ಹೂವು, ಹಣ್ಣು, ತರಕಾರಿ ಬೆಳೆದ ರೈತರು, ನೇಕಾರರು, ಟ್ಯಾಕ್ಸಿ ಮತ್ತು ಆಟೋ ಚಾಲಕರು, ಕ್ಷೌರಿಕರು, ಮಡಿವಾಳರು ಮತ್ತು ಚರ್ಮ ಕುಶಲಕರ್ಮಿಗಳಿಗೆ ಪರಿಹಾರ ಒದಗಿಸಲಾಗಿದೆ.**











ಮೀರಿ ಹಬ್ಬುತ್ತಿದೆ. ನೂರಾರು ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆಯ ಕಡೆ ಮುಖ ಮಾಡಿದಾಗ ಸರ್ಕಾರ ಇಕ್ಕಟ್ಟಿನ ಪರಿಸ್ಥಿತಿ ಎದುರಿಸಬೇಕಾಯಿತು. ಧೃತಿಗೆಡದ ಸರ್ಕಾರ ಕೊರೊನಾ ರೋಗ ನಿಯಂತ್ರಣ ಸಾಧಿಸಲು 3,200 ಕೋಟಿ ರೂಪಾಯಿ ವೆಚ್ಚ ಮಾಡಿ ಎಲ್ಲಾ ತಯಾರಿಯನ್ನು ನಡೆಸುತ್ತಿದೆ. 10,000 ಹಾಸಿಗೆಯ ಹೊಸ ತಾತ್ಕಾಲಿಕ ಆಸ್ಪತ್ರೆ ನಿರ್ಮಾಣ ಮಾಡಿದೆ. ಖಾಸಗಿ ಆಸ್ಪತ್ರೆಯವರು ಶೇಕಡಾ 50 ರಷ್ಟು ಹಾಸಿಗೆಗಳನ್ನು ಕೊರೊನಾ ಸೋಂಕಿತರಿಗೆ ಮೀಸಲಿಡಬೇಕು ಎಂದು ಆದೇಶವನ್ನು ಹೊರಡಿಸಿದೆ. ಅದರೂ ಈ ಮಹಾಮಾರಿ ತಹಬಂದಿಗೆ ಬಂದಿಲ್ಲ. ಜುಲೈ 7 ರ ಹೊತ್ತಿಗೆ ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 25,000 ಗಡಿ ದಾಟಿ ಇನ್ನೂ ಏರು ಮುಖವಾಗೇ ಹೋಗುತ್ತಿದೆ. ಕೋವಿಡ್ ಪರಿಣಾಮವನ್ನು ಇಷ್ಟೊಂದು ಪರಿಣಾಮವಾಗಿ ನಿರ್ವಹಣೆ ಮಾಡಿದರೂ ಸರ್ಕಾರಕ್ಕೆ ಟೀಕೆಗಳು ಬಂದಿವೆ. ಅದೂ ಎಲ್ಲಡೆಯೂ ಕೇಳಿ ಬಂದಿರುವ ಹಾಗೆ ಇಲ್ಲಿಯೂ ಬಂದಿವೆ. ಎಂತಹ ಒಳ್ಳೆಯ ಕೆಲಸ ಮಾಡಿದರೂ ಟೀಕೆ ಮಾಡುವವರು ಟೀಕೆ ಮಾಡುತ್ತಲೇ ಇರುತ್ತಾರೆ. ಒಳ್ಳೆಯ ಕೆಲಸದಲ್ಲಿ ತಪ್ಪುಗಳನ್ನು ಹುಡುಕುವುದೇ ಟೀಕೆ ಮಾಡುವವರ ಸ್ವಭಾವ. ಅಲ್ಲದೆ ಯಾವುದೇ ಕಾರ್ಯಗಳಿಗೆ ಸಕಾರಾತ್ಮಕ ಮತ್ತು ನಕಾರಾತ್ಮಕ ಪ್ರತಿಕ್ರಿಯೆಗಳು ಬರುವುದು ಸಹಜ.

"ಬದಲಾಗು ನೀನು, ಬದಲಾಯಿಸು ನೀನು..... ಮನಸ್ಸಿದ್ದರೆ ಮಾರ್ಗ ಮಾನವ" ಎಂಬ ಸಂದೇಶ ನೀಡಿ ಕೋವಿಡ್ ವಿರುದ್ಧದ ಹೋರಾಟಕ್ಕೆ ಜನತೆಯನ್ನು ಅಣಿಗೊಳಿಸಿದ್ದಾರೆ. ಇದುವೆ ಯಡಿಯೂರಪ ನವರ ಕಾರ್ಯಕ್ಷಮತೆಗೆ ಸಾಕ್ಷಿ.

ಕೋವಿಡ್-19 ಸಂಕಷ್ಟದ ನಡುವೆ, ಜನತೆಗೆ ಆತ್ಮವಿಶ್ವಾಸ ತುಂಬಲು ಮುಖ್ಯಮಂತ್ರಿಗಳು ಹಲವಾರು ಪರಿಹಾರಗಳನ್ನು ಘೋಷಿಸಿದರು. ಇವುಗಳಲ್ಲಿ ಪ್ರಮುಖವಾದವು 62 ಲಕ್ಷ ಫಲಾನುಭವಿಗಳಿಗೆ ಸಮಾಜಿಕ ಭದ್ರತಾ ಪಿಂಚಣಿಗಳ ಎರಡು ತಿಂಗಳ ಮೊತ್ತವನ್ನು ಮುಂಚಿತವಾಗಿ ಬಿಡುಗಡೆ ಮಾಡುವ ನಿರ್ಧಾರ, 2018 ರಿಂದ ಬಡವರ ಬಂಧು ಯೋಜನೆಯಡಿ ಸಾಲ ಪಡೆದಿದ್ದ 21,620 ಮಂದಿ ಬೀದಿ ಬದಿ ವ್ಯಾಪಾರಿಗಳ ಸಾಲ ಮನ್ನಾ ಮತ್ತು 15.65 ಲಕ್ಷ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ತಲಾ ಒಂದು ಸಾವಿರ ರೂಪಾಯಿ ಬಿಡುಗಡೆ, ಬಿಪಿಎಲ್ ಕುಟುಂಬದವರಿಗೆ ಎರಡು ತಿಂಗಳ ಪಡಿತರ ಒಟ್ಟಿಗೆ ವಿತರಣೆ.

ಯಡಿಯೂರಪ್ಪನವರ ಹೃದಯ ವೈಶಾಲ್ಯತೆ ಜನತೆಗೆ ಅರಿವಾದುದು ಅವರು ತಮ್ಮ ಒಂದು ವರ್ಷದ ವೇತನದ ಮೊತ್ತ 24.10 ಲಕ್ಷ ರೂ.ಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಿದಾಗ. ಇಂತಹ ಉದಾರಿ ನಮ್ಮ ಮುಖ್ಯಮಂತ್ರಿಯಾಗಿದ್ದಾರೆ ಎಂದು ರಾಜ್ಯದ ಜನತೆ ಹೆಮ್ಮೆ ಪಟ್ಟರು. ಕೋವಿಡ್ -19 ಸಂಕಷ್ಟಗಳಿಗೆ ಸಿಲುಕಿದ ಹಲವರ ರಕ್ಷಣೆಗೆ ಮುಖ್ಯಮಂತ್ರಿಗಳು 22.72 ಕೋಟಿ ರೂಪಾಯಿಗಳ ಪರಿಹಾರ ಪ್ರಕಟಿಸಿದರು. ಆಟೋ ರಿಕ್ಷಾ ಚಾಲಕರು ಟ್ಯಾಕ್ಸಿ ಚಾಲಕರು, ಮಡಿವಾಳರು, ಕ್ಷೌರಿಕರು ಇವರಿಗೆ 5,000 ರೂ ಧನ ಸಹಾಯ ನೀಡುವ ಸರ್ಕಾರದ ತೀರ್ಮಾನ ಎಲ್ಲೆಡೆಯಿಂದ ಪ್ರಶಂಸೆಗೆ ಪಾತ್ರವಾಯಿತು.



Downloaded From: www.kpscvaani.com




ಕೊರೊನಾ ನಿಯಂತ್ರಣ ವಿಷಯದಲ್ಲಿ ತಂತ್ರಜ್ಞಾನ ಅಳವಡಿಸಿಕೊಂಡು ವಾರ್‌ರೂಂ ಸ್ಥಾಪಿಸಿದ ಕ್ರಮ ಹಾಗೂ ಕ್ವಾರಂಟೈನ್‌ನಲ್ಲಿರುವವರ ಮೇಲೆ ನಿಗಾ ಇಡಲು ಅಭಿವೃದ್ಧಿ ಪಡಿಸಿರುವ ಆಪ್ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮುಖ್ಯಮಂತ್ರಿಗಳ ಜತೆಗಿನ ಸಂವಾದದ ಸಂದರ್ಭದಲ್ಲಿ ಪ್ರಸ್ತಾಪಿಸಿ ಶ್ಲಾಘನೆ ವ್ಯಕ್ತಪಡಿಸಿದರು. ಅಲ್ಲದೆ ಇತರೆ ರಾಜ್ಯಗಳು ಇದನ್ನು ಅನುಸರಿಸಿ ಎಂಬ ಅಲಹೆ ನೀಡಿದರು. ಲಾಕ್‌ಡೌನ್‌ನಿಂದಾಗಿ ಎಲ್ಲಾ ದೇವಾಲಯಗಳು ಮುಚ್ಚಿದ ಕಾರಣ, ಮದುವೆ, ಸಮಾರಂಭಗಳು ನಡೆಯದೆ ಬೆಳೆದಿದ್ದ ಹೂವುಗಳು ಮಾರಾಟವಾಗದೇ ನಷ್ಟ ಉಂಟಾದ್ದರಿಂದ ಹೂವು ಬೆಳೆಗಾರರಿಗೆ ಸರ್ಕಾರ ಪ್ರತಿ ಹೆಕ್ಟೇರಿಗೆ ಗರಿಷ್ಠ 25,000/– ರೂ.ಗಳಂತೆ ಪರಿಹಾರ ಘೋಷಣೆ ಮಾಡಿತು.

ಇದಲ್ಲದೆ, ಹಣ್ಣು ತರಕಾರಿ ಬೆಳೆಗಾರರಿಗೆ, ಮೆಕ್ಕೆ ಜೋಳ ಬೆಳೆದವರಿಗೂ ಪರಿಹಾರ ಘೋಷಣೆ ಮಾಡಿದ ಮುಖ್ಯಮಂತ್ರಿಗಳು ಹಣ್ಣು ತರಕಾರಿ ಬೆಳೆದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ 15,000/– ಮೆಕ್ಕೆ ಜೋಳ ಬೆಳೆದ ಹತ್ತು ಲಕ್ಷ ರೈತರಿಗೆ ತಲಾ 5,000/–ರೂ.ಗಳ ಪರಿಹಾರ ಘೋಷಣೆ ಮಾಡಿದರು. ವಿದ್ಯುತ್ ಬಿಲ್‌ನಲ್ಲಿ ಫಿಕ್ಸಡ್ ಚಾರ್ಜ್‌ನ್ನು ಎರಡು ತಿಂಗಳ ಅವಧಿಗೆ ಅತಿ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಿಗೆ ಮನ್ನಾ ಮಾಡಲಾಯಿತು. ಒಂದು ಮಾತಿನಲ್ಲಿ ಹೇಳಬೇಕೆಂದರೆ, ಮುಖ್ಯಮಂತ್ರಿ ಯಡಿಯೂರಪ್ಪನವರು ಎಲ್ಲಾ ವರ್ಗದ ಜನತೆಯ ಕಷ್ಟಕ್ಕೆ ಮಿಡಿದರು.

ಕೋವಿಡ್–19 ವಿರುದ್ಧ ಸತತವಾಗಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಸೇವೆಯನ್ನು ಗುರುತಿಸಿ, ಅವರಿಗೆ ತಲಾ 3,000 ಪ್ರೋತ್ಸಾಹಧನ ನೀಡಲು 12 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಯಡಿಯೂರಪ್ಪನವರು ನೇಕಾರರ ಸಂಕಷ್ಟಗಳಿಗೆ ಸ್ಪಂದಿಸಿದ್ದಾರೆ. ಅಲ್ಲದೆ ನೇಕಾರರಿಗೆ ನೆರವಾಗಲು ಸರ್ಕಾರ 109 ಕೋಟಿ ರೂಪಾಯಿಗಳ ನೇಕಾರರ ಸಾಲ ಮನ್ನಾ ಯೋಜನೆಯನ್ನು ಘೋಷಿಸಿದ್ದಾರೆ.

ನೇಕಾರರ ಸಮ್ಮಾನ್ ಯೋಜನೆಯಡಿ ರಾಜ್ಯದಲ್ಲಿರುವ 54,000 ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ 2,000 ರೂ.ಗಳಂತೆ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವ ಕೆಲಸವನ್ನು ಸರ್ಕಾರ ಜುಲೈನಲ್ಲಿ ಪ್ರಾರಂಭಿಸಿದೆ. 19,744 ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮಾಡಲಿದೆ. ಈ ಯೋಜನೆಗೆ ವಾರ್ಷಿಕ 10.96 ಕೋಟಿ ವೆಚ್ಚ ಆಗಲಿದೆ. ವಿದ್ಯುತ್ ಮಗ್ಗ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 1.25 ಲಕ್ಷ ಕೂಲಿ ಕಾರ್ಮಿಕರಿಗೂ ಒಂದು ಬಾರಿಯ ಪರಿಹಾರ ಧನವಾಗಿ 2,000 ರೂ.ಗಳನ್ನು ವಿತರಿಸಲಾಗುತ್ತಿದ್ದು, ಅರ್ಹ 8897 ಅರ್ಜಿದಾರರಿಗೆ ನೇರ ನಗದು ವರ್ಗಾವಣೆಯಾಗಿದೆ.

ಸರ್ವರಿಗೂ ಹಿತ, ಎಲ್ಲಾ ವರ್ಗದ ಜನರಿಗೂ ಸೌಲಭ್ಯಗಳು ಸಿಗಬೇಕು ಎಂಬ ಮಂತ್ರಕ್ಕೆ ಕಟುಬದ್ಧವಾದ ಆಡಳಿತ ನಡೆಸಿದ ಯಡಿಯೂರಪ್ಪ ಅವರು ರೈತರನ್ನು ಸಧೃಡರನ್ನಾಗಿಸಲು ಸಹಕಾರ ಸಂಘಗಳಲ್ಲಿ ಪಡೆದ ಒಂದು ಲಕ್ಷದವರೆಗಿನ ಸಾಲ ಮನ್ನಾ ಮಾಡಿದರು. ಅದಕ್ಕಾಗಿ 2.85 ಲಕ್ಷ ರೈತರಿಗೆ 2,000 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಹಾಗೆಯೇ ರಾಜ್ಯದ ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ 3.00 ಲಕ್ಷ ರೈತರಿಗೆ 1763.60 ಕೋಟಿ ರೂ.ಗಳ ಬೆಳೆ ಸಾಲ ವಿತರಿಸಿದೆ. ಈ ಅವಧಿಯಲ್ಲಿ 6.92 ಲಕ್ಷ ರೈತರಿಗೆ ರೂ.249 ಕೋಟಿಗಳ ಬಡ್ಡಿ ಸಹಾಯ ಧನವನ್ನು ರೈತರ ಪರವಾಗಿ ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ. ನಗರ ಪ್ರದೇಶದ ಬೀದಿ ಬದಿ ವ್ಯಾಪಾರಿಗಳಿಗೆ ಸಹಕಾರ ಬ್ಯಾಂಕ್‌ಗಳ ಮೂಲಕ ಕಿರು ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬಡವರ ಬಂಧು ಯೋಜನೆಯಡಿ 1758 ಫಲಾನುಭವಿಗಳಿಗೆ 18 ಕೋಟಿ ರೂಪಾಯಿ ಸಾಲ ವಿತರಿಸಲಾಗಿದೆ.

ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಹೀಗೆ ಹತ್ತಾರು ಜನಪರ ಯೋಜನೆಗಳನ್ನು ತಮ್ಮ ಆಯವ್ಯಯದಲ್ಲಿ ಘೋಷಣೆ ಮಾಡಿದರು. ಆಯವ್ಯಯ ಮಂಡನೆ ಆಗಿ ಸದನದಲ್ಲಿ ಚರ್ಚಿಸುತ್ತಿರುವ ಹೊತ್ತಲ್ಲೇ ಕೊರೊನಾ ಸಾಂಕ್ರಾಮಿಕ ಹಬ್ಬುವುದನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಲಾಕ್‌ಡೌನ್ ಘೋಷಿಸಿತು. ವಿಧಾನಸಭೆಯನ್ನು ಮುಂದೂಡಿ ಚರ್ಚೆಯನ್ನು ಮೊಟಕುಗೊಳಿಸಿ, ಆಯವ್ಯಯವನ್ನು ಮಂಜೂರು ಮಾಡುವ ಅನಿವಾರ್ಯತೆ ಸರ್ಕಾರ ಮತ್ತು ಪ್ರತಿ ಪಕ್ಷಗಳಿಗೆ ಎದುರಾಯಿತು.

ಯಡಿಯೂರಪ್ಪನವರೇನೊ 2.83 ಲಕ್ಷ ರೂಪಾಯಿಗಳ ಬೃಹತ್ ಆಯವ್ಯಯ ಮಂಡಿಸಿದರು. ಲಾಕ್‌ಡೌನ್ ಸರ್ಕಾರದ ಲೆಕ್ಕಾಚಾರವನ್ನು ಬುಡಮೇಲು ಮಾಡಿದೆ. ಲಾಕ್‌ಡೌನ್‌ನಿಂದಾಗಿ ಬೊಕ್ಕಸಕ್ಕೆ ಬರಬೇಕಾದ ಆದಾಯ ನಿರೀಕ್ಷಿತ ಮಟ್ಟದಲ್ಲಿ ಸಂದಾಯವಾಗಲಿಲ್ಲಾ. ಕಳೆದ ಒಂದು ತಿಂಗಳಿಂದ ಲಾಕ್‌ಡೌನ್ ಸಡಲಿಕೆ ಆದರೂ, ವಾಣಿಜ್ಯ ಚಟುವಟಿಕೆಗಳು, ಉತ್ಪಾದನಾ ವಲಯ, ಐಟಿ, ಬಿಟಿ ವಲಯ, ಸೇವಾ ಕ್ಷೇತ್ರ, ಅಥಿತ್ಯ ಕ್ಷೇತ್ರ ಮೊದಲಿನಂತೆ ಚಟುವಟಿಕೆಗೆ ಮರಳಲು ಇನ್ನೂ ಸಮಯ ಬೇಕಿದೆ. 2020 ರ ಏಪ್ರಿಲ್, ಮೇ, ಮತ್ತು ಜೂನ್ ತ್ರೈಮಾಸಿಕದಲ್ಲಿ ಸರ್ಕಾರಕ್ಕೆ ಹರಿದು ಬಂದ ತೆರಿಗೆ ಆದಾಯ ಗಮನಿಸಿದರೆ, ಸಂಪನ್ಮೂಲ ಕೊರತೆ ಉಂಟಾಗಿದೆ. ಇಂತಹ



Downloaded From: www.kpscvaani.com









ಸಂಕಷ್ಟದ ಪರಿಸ್ಥಿತಿಯಲ್ಲೂ ಜನರ ಹಿತ ಕಾಪಾಡಲು ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಮುಂದುವರೆಸುತ್ತಾ ಸಾಗಿದೆ. 2019 ರ ಏಪ್ರಿಲ್, ಮೇ, ಜೂನ್ ತ್ರೈಮಾಸಿಕದಲ್ಲಿ 21,072 ಕೋಟಿ ರೂ ವಾಣಿಜ್ಯ ತೆರಿಗೆ ಸಂದಾಯವಾಗಿದ್ದರೆ, 2020ರ ಅವಧಿಯಲ್ಲಿ ಹರಿದು ಬಂದುದ್ದು 13,245 ಕೋಟಿ ರೂಪಾಯಿಗಳು. ಹಾಗೆಯೇ ಅಬಕಾರಿ ಇಲಾಖೆಯಲ್ಲಿ ಕಳೆದ ಬಾರಿ ಇದೇ ತ್ರೈಮಾಸಿಕದಲ್ಲಿ 5760 ವಸೂಲಾಗಿದ್ದರೆ, ಪ್ರಸಕ್ತ ವರ್ಷದ ಇದೆ ತ್ರೈಮಾಸಿಕದಲ್ಲಿ 3846.76 ಕೋಟಿ ಸಂಗ್ರಹವಾಗಿದೆ. ಮೋಟಾರು ವಾಹನ, ಮುದ್ರಾಂಕ ನೋಂದಣಿಯಲ್ಲೂ ಆದಾಯ ಕಡಿಮೆ ಆಗಿದೆ.

ಮುಂದಿನ ದಿನಗಳಲ್ಲಿ ಆರ್ಥಿಕ ವಲಯ ಚೇತರಿಕೆ ಕಾಣಬಹುದು ಎಂಬ ಆಶಾಭಾವನೆಯೊಂದಿಗೆ ಸರ್ಕಾರವಿದೆ. ಹಾಗೆಯೇ ಆಗಲಿ ಎಂಬುದು ಎಲ್ಲರ ಆಶಯ ಕೂಡ.ಕೋವಿಡ್–19 ರ ಹಿನ್ನೆಲೆಯಲ್ಲಿ 2020–21 ನೇ ಸಾಲಿಗೆ 3524 ಕೋಟಿ ರೂ.ಗಳಷ್ಟು ಕಡಿಮೆ ರಾಜಸ್ವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಸಂಗ್ರಹವಾಗಬಹುದೆಂಬ ಅಂದಾಜಿದೆ. ಕೈಗೆಟುಕುವ ದರಗಳ ಮನೆಗಳ ಖರೀದಿ ಪ್ರೋತ್ಸಾಹಿಸಲು ರೂ.20.00 ಲಕ್ಷ ಮೌಲ್ಯದ ಅಪಾರ್ಟ್‌ಮೆಂಟ್ ನೋಂದಣಿಗೆ ಮುದ್ರಾಂಕ ಶುಲ್ಕ ಶೇ 5 ರಿಂದ 3ಕ್ಕೆ ಇಳಿಸಲಾಗಿದೆ. ಅಬಕಾರ ತೆರಿಗೆಯನ್ನು ಏರಿಕೆ ಮಾಡಿ, ಆದಾಯ ಹೆಚ್ಚಿಸುವ ಪ್ರಯತ್ನ ಸಹ ನಡೆದಿದೆ.

ಕೋವಿಡ್–19 ನಿಂದ ಆರ್ಥಿಕ ಸಮಸ್ಯೆ ಎದುರಾಗಿದ್ದರೂ ಕೂಡ ವಿದ್ಯಾರ್ಥಿ ವೇತನ ಸ್ಥಗಿತಗೊಳಿಸಿದಂತೆ ಮುಖ್ಯಮಂತ್ರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕಳೆದ ಒಂದು ತಿಂಗಳಲ್ಲಿ ನಾಡಿನ ಜನತೆಯನ್ನು ಕೊರೊನಾ ಸಂಕಷ್ಟದಿಂದ ಪಾರು ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕು, ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಬೇಕಿರುವ ಯೋಜನೆಗಳ ಕುರಿತು ತಿಳಿಯಲು ನಿತ್ಯವೂ ವಿವಿಧ ಇಲಾಖೆಗಳ ಸಚಿವರು, ಅಧಿಕಾರಿಗಳು ಮತ್ತು ವಿಷಯ ತಜ್ಞರ ಜೊತೆ ಪರಿಶೀಲನಾ ಸಭೆ ನಡೆಸುತ್ತಿದ್ದಾರೆ. ನಾನು ಎಂದಿಗೂ ಜನರ ಸುಭೀಕ್ಷೆಯನ್ನು ಬಯಸುವಂತಹ ಮುಖ್ಯಮಂತ್ರಿ ಎಂದು ಅವರು ಈಗಾಗಲೇ ಸಾಬೀತು ಮಾಡಿದ್ದಾರೆ.

ಯಡಿಯೂರಪ್ಪ ಅವರು ಬಿಜೆಪಿ ಪಕ್ಷಕ್ಕೆ ಸದಾ ರಾಜಕೀಯವಾಗಿ ಶಕ್ತಿ ತುಂಬಿದವರು. ಉತ್ತರ ಕರ್ನಾಟಕದ ಮೇಲೆ ಅವರಿಗೆ ಅಪಾರ ಮಮತೆ. ಹಾಗಾಗಿ ಆ ಭಾಗದ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಹಮ್ಮಿಕೊಂಡರು. ಹಾಗಂತ ಮುಖ್ಯಮಂತ್ರಿಗಳು ದಕ್ಷಿಣ ಕರ್ನಾಟಕದ ಭಾಗಗಳನ್ನು ನಿರ್ಲಕ್ಷಿಸಿದ್ದಾರೆ ಎಂದು ಭಾವಿಸಬೇಕಾಗಿಲ್ಲ. ಯಡಿಯೂರಪ್ಪ ಅವರು ಇಡೀ ಅಖಂಡ ಕರ್ನಾಟಕದ ಮುಖ್ಯಮಂತ್ರಿ. ಸೆಪ್ಟೆಂಬರ್–17, 2019 ರಂದು ಕನ್ನಡ ನಾಡಿನ ಜನತೆ ಅದರಲ್ಲೂ ಕಲ್ಯಾಣ ಕರ್ನಾಟಕ ಜನತೆ ಹೆಮ್ಮೆ ಪಡುವ ದಿನ, ಅಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಹೈದರಾಬಾದ್ ಕರ್ನಾಟಕವನ್ನು **"ಕಲ್ಯಾಣ ಕರ್ನಾಟಕ"** ಎಂದು ಮರು ನಾಮಕರಣ ಮಾಡಿದರು.

ಯಡಿಯೂರಪ್ಪನವರು 2006ರಲ್ಲಿ ಉಪಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಸರ್ಕಾರವು ಅಧಿಕೃತವಾಗಿ ಆಚರಿಸಿತ್ತು, ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು.

ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಇನ್ನೂ ಮೂರು ವರ್ಷಗಳ ಕಾಲ ರಾಜ್ಯದ ಆಡಳಿತ ನಡೆಸಲಿದೆ. ಕೋವಿಡ್ ಸಾಂಕ್ರಾಮಿಕ ರೋಗ ರಾಜ್ಯದಿಂದ ತೊಲಗಲಿ, ಜನರು ನೆಮ್ಮದಿಯಿಂದ ಬಾಳ್ವೆ ನಡೆಸಲು, ಕರ್ನಾಟಕವು **"ಕಲ್ಯಾಣ ಕರ್ನಾಟಕ"** ಆಗಿ ದೇಶಕ್ಕೆ ಮಾದರಿ ರಾಜ್ಯವಾಗಲಿ ಎಂದು ಆಶಿಸೋಣ.



Downloaded From: www.kpscvaani.com

# ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪಣತೊಟ್ಟಿರುವ ಸರ್ಕಾರ...

ಅಜ್ಞಾನ, ಅನಕ್ಷರತೆ, ಬಡತನ, ಅನಾರೋಗ್ಯ, ಅಪೌಷ್ಠಿಕತೆ
ಇವೆಲ್ಲವುಗಳಿಂದ ವಿಮೋಚನೆ ಪಡೆಯಲು ಸಾಧ್ಯವಾಗಬೇಕಾದರೆ

ಪಿ.ಕೌಸಲ್ಯ





Downloaded From: www.kpscvaani.com






**ಉ**ತ್ತರ ಕರ್ನಾಟಕ ಪ್ರದೇಶದಲ್ಲಿ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡುವ ಮೂಲಕ ಅಲ್ಲಿನ ಜನರ ಸಮಗ್ರ ಕಲ್ಯಾಣ ಮಾಡುವ ಸಂಕಲ್ಪವನ್ನು ಹೊಂದಿದ್ದ ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ ಒಂದೇ ತಿಂಗಳಿನಲ್ಲಿ ಹೈದ್ರಾಬಾದ್ ಕರ್ನಾಟಕದ ಜನತೆಗೆ ಮಹತ್ತರವಾದ ಕೊಡುಗೆಯನ್ನು ನೀಡಿದರು. ಆ ಕೊಡುಗೆಯೆಂದರೆ ಸೆಪ್ಟೆಂಬರ್ 17 ರಂದು ಹೈದ್ರಾಬಾದ್ ಕರ್ನಾಟಕವನ್ನು "ಕಲ್ಯಾಣ ಕರ್ನಾಟಕ" ಎಂದು ಮರು ನಾಮಕರಣ ಮಾಡಿದ್ದು.

ಭಾರತಕ್ಕೆ 1947ನೇ ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರಕಿದ್ದರೂ, ಹೈದ್ರಾಬಾದ್ ಕರ್ನಾಟಕದ ಸ್ವಾತಂತ್ರ್ಯ ಮಾತ್ರ ಮರೀಚಿಕೆಯಾಗಿತ್ತು. ನಿಜಾಮರು ಭಾರತ ಒಕ್ಕೂಟದಿಂದ ಪ್ರತ್ಯೇಕವಾಗಿ ಉಳಿಯಲು ನಿರ್ಧರಿಸಿದ್ದು, 1947–48ರಲ್ಲಿ ಹೈದ್ರಾಬಾದ್ ನಿಜಾಮ್ ಮೀರ್ ಉಸ್ಮಾನ್ ಅಲಿ ಖಾನ್ ಬಹದ್ದೂರರನ್ನು ತನ್ನ ಕೈಗೊಂಬೆಯಾಗಿರಿಸಿಕೊಂಡಿದ್ದ ರಜಾಕಾರರ ನಾಯಕ ಖಾಸಿಮ್ ರಜ್ವಿ ಅವರ ಹಿಂಸೆ ಈ ಭಾಗದಲ್ಲಿ ವ್ಯಾಪಕವಾಗಿತ್ತು. ಆದ್ದರಿಂದ ಹೈದ್ರಾಬಾದ್ ಆಕ್ಷನ್ ಕಾರ್ಯಾಚರಣೆ ಮೂಲಕ ನಿಜಾಮರ ಶರಣಾಗತಿಗೊಳಿಸಿ ಅಂದಿನ ಗೃಹ ಮಂತ್ರಿ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರ ಸಮಕ್ಷಮದಲ್ಲಿ 1948ರ ಸೆಪ್ಟೆಂಬರ್ 17 ರಂದು ಹೈದ್ರಬಾದ್ ಕರ್ನಾಟಕ ಪ್ರಾಂತ್ಯವನ್ನು ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನಗೊಳಿಸಲು ಒಪ್ಪಿ ಸಹಿ ಹಾಕಿದರು. ಅಂದಿಗೆ ಹೈದ್ರಾಬಾದ್ ಕರ್ನಾಟಕ ಪ್ರಾಂತ್ಯ ವಿಮೋಚನೆಯಾಯಿತು. ಅಂದಿಗೆ ನಿಜಾಂ ಆಡಳಿತ ಕೊನೆಗೊಂಡಿದ್ದು ಇತಿಹಾಸ ಪುಟಗಳಲ್ಲಿ ದಾಖಲಿಸಲಾಗಿದೆ.

**ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಿ, ಸಮಗ್ರ ಕರ್ನಾಟಕದ ಅಭಿವೃದ್ಧಿ ಸಾಧನೆ ಸರ್ಕಾರದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನದ ಪರಿಚ್ಛೇದ 371 (ಜೆ) ಅನ್ವಯ ವಿಶೇಷ ಸ್ಥಾನಮಾನ ಪಡೆದಿರುವ ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಯಿತು. ಅಲ್ಲದೆ ಈ ಭಾಗದ ಸಮಗ್ರ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲು ಪೂರಕವಾಗಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಲಾಗಿದೆ.**

ಬಹು ಹಿಂದಿನಿಂದಲೂ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಹಾಗೂ ಸೆಪ್ಟೆಂಬರ್–17 ಹೈದ್ರಾಬಾದ್–ಕರ್ನಾಟಕ ವಿಮೋಚನಾ ದಿನಾಚರಣೆ ಎಂದು ಈ ಭಾಗದಲ್ಲಿ ಎರಡು ಬಾರಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಗುತ್ತಿತ್ತು. ಆದರೆ ಮುಖ್ಯಮಂತ್ರಿಗಳವರ ಬಹುದಿನದ ಆಸೆ ಹಾಗೂ ಅಲ್ಲಿರುವ ಜನತೆಯ ಮೇಲಿನ ಅಪಾರ ಪ್ರೀತಿಯಿಂದ ಸೆಪ್ಟೆಂಬರ್ 17 ರಂದು ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯನ್ನಾಗಿ ಆಚರಿಸುವ ಮೂಲಕ ಐತಿಹಾಸಿಕ ಕ್ಷಣಕ್ಕೆ ಮುನ್ನುಡಿ ಬರೆದರು.

2006ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ ಸರ್ಕಾರದಿಂದ ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ಅಧಿಕೃತವಾಗಿ ಆಚರಿಸಲಾಯಿತು. ನಂತರ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ತಪ್ಪದೇ ಈ ಕಾರ್ಯಕ್ರಮದಲ್ಲಿ ಪ್ರತಿ ವರ್ಷ ಭಾಗವಹಿಸುತ್ತಾ ಬಂದಿರುವುದು ಕಲ್ಯಾಣ ಕರ್ನಾಟಕ ಜನರ ಮೇಲೆ ಅವರಿಗಿರುವ ಅಪಾರವಾದ ಒಲವನ್ನು ತೋರಿಸುತ್ತದೆ.

ಹೈದ್ರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರುನಾಮಕರಣ ಮಾಡುವುದಷ್ಟೇ ಅಲ್ಲ. ಈ ಭಾಗದ ಸಮಗ್ರ ಅಭಿವೃದ್ಧಿ, ಜನಕಲ್ಯಾಣ ಮತ್ತು ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡುವುದು ಅವರ ಮತ್ತು ಸರ್ಕಾರದ ಉದ್ದೇಶವಾಗಿತ್ತು. ಹಾಗಾಗಿ ಅದೇ ದಿನದಂದು 38.17 ಕೋಟಿ ರೂ ವೆಚ್ಚದ ಸವಲತ್ತುಗಳ ವಿತರಣೆ ಹಾಗೂ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಅಂದು ನಡೆದ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಕಲ್ಯಾಣ ನಾಡಿನ ಸಮೃದ್ಧ ಇತಿಹಾಸವನ್ನು ಪಠ್ಯ ಪುಸ್ತಕದಲ್ಲಿ ಸೇರಿಸಲು ಮತ್ತು ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸಮಗ್ರ ಅಧ್ಯಯನ ಪೀಠ ಸ್ಥಾಪಿಸಲಾಗುವುದೆಂದು ಮುಖ್ಯಮಂತ್ರಿಗಳು ತಿಳಿಸಿದರು. ಇದು ಆ ಭಾಗದ ಶೈಕ್ಷಣಿಕ ಕ್ಷೇತ್ರಕ್ಕೆ ಅತ್ಯುತ್ತಮ ಕೊಡುಗೆಯಾಗಲಿದೆ.

ಈ ಭಾಗದ ಬಹು ವರ್ಷಗಳ ಬೇಡಿಕೆಯಾಗಿದ್ದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಕಲಬುರಗಿ ಪೀಠಕ್ಕೆ ಚಾಲನೆ ನೀಡಿದ್ದು, ಇದರಿಂದ ಸರ್ಕಾರಿ ನೌಕರರಿಗೆ ನ್ಯಾಯ ದೊರೆತಂತಾಯಿತು. ಕಲ್ಯಾಣ ಕರ್ನಾಟಕ 371 (ಜೆ) ಕಲಂಗೆ ಸಂಬಂಧಿಸಿದ ವಿಶೇಷ ಕೋಶದ ಕಚೇರಿ ಪ್ರಸ್ತುತ



Downloaded From: www.kpscvaani.com




### ಉತ್ತರ ಕರ್ನಾಟಕದಲ್ಲಿ ಮೊಟ್ಟ ಮೊದಲ ಇನ್ವೆಸ್ಟ್ ಕರ್ನಾಟಕ

ಬೆಂಗಳೂರನ್ನು ಹೊರತುಪಡಿಸಿ 2 ಮತ್ತು 3ನೇ ಹಂತದ ನಗರಗಳಲ್ಲಿ ಉದ್ದಿಮೆಗಳನ್ನು ಸ್ಥಾಪಿಸುವ ಮೂಲಕ ಅಭಿವೃದ್ಧಿಯಲ್ಲಿ ಸಮತೋಲನ ಕಾಪಾಡುವ ಹಾಗೂ ಉದ್ಯಮಗಳು ಒಂದೇ ಕಡೆ ಕೇಂದ್ರಿತವಾಗಬಾರದು ಎಂಬ ನಿಟ್ಟಿನಲ್ಲಿ ಸರ್ಕಾರವು ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ 2020ನೇ ಫೆಬ್ರವರಿ 14ರಂದು ಮೊಟ್ಟ ಮೊದಲ ಇನ್ವೆಸ್ಟ್ ಕರ್ನಾಟಕ-2020 ಸಮಾವೇಶ ಹಮ್ಮಿಕೊಂಡು ಹೊಸ ಇತಿಹಾಸ ನಿರ್ಮಿಸಿತು.

ಈ ಸಮಾವೇಶದಲ್ಲಿ 51 ಕಂಪನಿಗಳೊಂದಿಗೆ ಸುಮಾರು 72 ಸಾವಿರ ಕೋಟಿ ರೂ.ಗಳ ಬಂಡವಾಳ ಹೂಡಿಕೆ ಹಾಗೂ ಸುಮಾರು 90 ಸಾವಿರ ಉದ್ಯೋಗ ಸೃಷ್ಟಿಯ ಒಡಂಬಡಿಕೆಗಳಿಗೆ ಸಹಿ ಮಾಡಲಾಯಿತು. ನಿರೀಕ್ಷೆಗೂ ಮೀರಿ ಸ್ಪಂದನೆ ದೊರೆತಿದ್ದು ಸಮಾವೇಶದ ಉದ್ದೇಶ ಔಚಿತ್ಯ ಪೂರ್ಣವಾಯಿತು.

ಬೆಂಗಳೂರಿನಲ್ಲಿದ್ದು, ಅದರ ಪ್ರಾದೇಶಿಕ ಕಚೇರಿಯನ್ನು ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರವನ್ನು ಕಲಬುರಗಿಯಲ್ಲಿ ತೆರೆಯಲು ಉದ್ದೇಶಿಸಲಾಗಿದೆ.

ಈ ಭಾಗದಲ್ಲಿ ಅಪೌಷ್ಟಿಕತೆ ನಿವಾರಣೆ ಮತ್ತು ಶಿಕ್ಷಣ ಫಲಿತಾಂಶ ಉತ್ತಮಗೊಳಿಸಲು ಹೆಚ್ಚಿನ ಒತ್ತು ನೀಡುವ ಜೊತೆಗೆ ಕಲಬುರಗಿ ವಿಶ್ವವಿದ್ಯಾನಿಲಯದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡಲಾಯಿತು.

ಕಲ್ಯಾಣ ಕರ್ನಾಟಕ ಭಾಗದ 21 ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದ್ದು, ಕಲಬುರಗಿಗೆ ಶೀಘ್ರವೇ ವಿಮಾನ ಸೇವೆ ಪ್ರಾರಂಭಿಸಲಾಗುವುದು. ಇದರಿಂದ ಪ್ರವಾಸೋದ್ಯಮ,

**2019ರ ನವೆಂಬರ್ 22ರಂದು ಕಲಬುರಗಿಯಲ್ಲಿ ವಿಮಾನ ನಿಲ್ದಾಣವನ್ನು ಲೋಕಾರ್ಪಣೆಗೊಳಿಸುವ ಮೂಲಕ ವಿಮಾನಯಾನ ಸಂಪರ್ಕದಿಂದ ಮರೀಚಿಕೆಯಾಗಿದ್ದ ಕಲ್ಯಾಣ ಕರ್ನಾಟಕ ಪ್ರದೇಶವನ್ನು ರಾಜ್ಯದ ದಕ್ಷಿಣ, ಕರಾವಳಿ, ವಾಯುವ್ಯ ಭಾಗ ಸೇರಿದಂತೆ ದೇಶದ ವಿಮಾನಯಾನ ಸಾರಿಗೆ ಸಂಪರ್ಕಕ್ಕೆ ಸೇರ್ಪಡೆಗೊಳಿಸಿದರು. ಇದು ಈ ಭಾಗದ ಶರವೇಗದ ಅಭಿವೃದ್ಧಿಗೆ ಮೈಲಿಗಲ್ಲು ಎಂದೇ ಬಿಂಬಿಸಲಾಗಿದ್ದು, ನಾಲ್ಕು ದಶಕಗಳ ಕನಸು ನನಸಾಗಿಸಿದ ಕೀರ್ತಿ ಮುಖ್ಯಮಂತ್ರಿಗಳಿಗೆ ಸಲ್ಲುತ್ತದೆ.**

ವಾಣಿಜ್ಯೋದ್ಯಮ ಮತ್ತು ರಫ್ತು ಉದ್ಯಮಗಳ ಬೆಳವಣಿಗೆಗೆ ಪ್ರಯೋಜನವಾಗಲಿದೆ ಎಂದು ಮುಖ್ಯಮಂತ್ರಿಗಳು ಅಂದು ಅಲ್ಲಿನ ಜನತೆಗೆ ಭರವಸೆ ನೀಡಿದರು. ಭರವಸೆ ನೀಡಿದಂತೆ ಎರಡು ತಿಂಗಳಲ್ಲೇ ಕಲಬುರಗಿಗೆ ಲೋಹದ ಹಕ್ಕಿ ಹಾರಾಟವನ್ನು ಆರಂಭಿಸಿದವು.

### ಲೋಹದ ಹಕ್ಕಿಗಳ ಹಾರಾಟ

ರಾಜ್ಯದ ಬಿಸಿಲ ನಾಡೆಂದೇ ಪ್ರಸಿದ್ಧವಾದ ಕಲಬುರಗಿಯ ಗಗನದಲ್ಲಿ ಲೋಹದ ಹಕ್ಕಿಗಳ ನಾಗರಿಕ ವಿಮಾನ ಯಾನ ಆರಂಭವಾಗಿದ್ದರಿಂದ ಭವಿಷ್ಯದಲ್ಲಿ ಹೆಚ್ಚಿನ ಸಾಧನೆಗೆ ರೆಕ್ಕೆಗಳು ಬಂದಂತಾಯಿತು. ಇದರಿಂದಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೈಗಾರಿಕೆ, ವಾಣಿಜ್ಯೋದ್ಯಮ, ಪ್ರವಾಸೋದ್ಯಮ, ಹೂಡಿಕೆ, ಉದ್ಯೋಗ ಸೃಷ್ಟಿಗೆ ವಿಫುಲ ಅವಕಾಶಗಳು ದೊರೆತು ಆ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಹೊಸ ಆಯಾಮ ದೊರೆಯಿತು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 2019ರ ನವೆಂಬರ್ 22ರಂದು ಕಲಬುರಗಿಯಲ್ಲಿ ವಿಮಾನ ನಿಲ್ದಾಣವನ್ನು ಲೋಕಾರ್ಪಣೆಗೊಳಿಸುವ ಮೂಲಕ ವಿಮಾನಯಾನ ಸಂಪರ್ಕದಿಂದ ಮರೀಚಿಕೆಯಾಗಿದ್ದ ಕಲ್ಯಾಣ ಕರ್ನಾಟಕ ಪ್ರದೇಶವನ್ನು ರಾಜ್ಯದ ದಕ್ಷಿಣ, ಕರಾವಳಿ, ವಾಯುವ್ಯ ಭಾಗ ಸೇರಿದಂತೆ ದೇಶದ ವಿಮಾನಯಾನ ಸಾರಿಗೆ ಸಂಪರ್ಕಕ್ಕೆ ಸೇರ್ಪಡೆಗೊಳಿಸಿದರು. ಇದು ಈ ಭಾಗದ ಶರವೇಗದ ಅಭಿವೃದ್ಧಿಗೆ ಮೈಲಿಗಲ್ಲು ಎಂದೇ ಬಿಂಬಿಸಲಾಗಿದ್ದು, ನಾಲ್ಕು ದಶಕಗಳ ಕನಸು ನನಸಾಗಿಸಿದ ಕೀರ್ತಿ ಮುಖ್ಯಮಂತ್ರಿಗಳಿಗೆ ಸಲ್ಲುತ್ತದೆ.

ರಾಜ್ಯ ಸರ್ಕಾರವು 181 ಕೋಟಿ ರೂ. ವೆಚ್ಚದಲ್ಲಿ ಕಲಬುರಗಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಿದ್ದು, ಇದರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 58.52 ಕೋಟಿ ರೂ. ಅನುದಾನ ನೀಡುವುದರ ಮೂಲಕ ಹಿಂದುಳಿದ ಪ್ರದೇಶದ ಅಭಿವೃದ್ಧಿಯ ಬದಲಾವಣೆಗೆ ಕೈ ಜೋಡಿಸಿದೆ.



Downloaded From: www.kpscvaani.com





ಬೆಂಗಳೂರು ಹೊರತುಪಡಿಸಿದರೆ ಕಲಬುರಗಿ ವಿಮಾನ ನಿಲ್ದಾಣ ರಾಜ್ಯದ 2ನೇ ಮತ್ತು ರಾಷ್ಟ್ರದ 10ನೇ ಅತಿ ದೊಡ್ಡ ರನ್‌ವೇ ಆಗಿದೆ. ಕಲಬುರಗಿ ಹಸಿರು ವಿಮಾನ ನಿಲ್ದಾಣದ ಭವಿಷ್ಯದ ದೃಷ್ಟಿಯಿಂದ ಜೆಟ್ ಸೇರಿದಂತೆ ಏರ್ ಬಸ್‌ನಂತಹ ಬೃಹತ್ ವಿಮಾನಗಳು ಸಹ ಇಲ್ಲಿ ಬಂದಿಳಿಯಲು ಅನುಕೂಲವಾಗುವಂತೆ 3.175 ಕಿ.ಮೀ. ಉದ್ದದ ರನ್‌ವೇಯನ್ನು ಸಿದ್ಧಪಡಿಸಲಾಗಿದೆ. ರಾಜ್ಯದ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಮೈಸೂರು ಸೇರಿದಂತೆ ನಾಗರಿಕ ವಿಮಾನ ಸಂಚಾರ ಕಾರ್ಯಾಚರಣೆ ಮಾಡುತ್ತಿರುವ ಕಲಬುರಗಿ 6ನೇ ವಿಮಾನ ನಿಲ್ದಾಣವಾಗಿದೆ.

ಕಲಬುರಗಿ ವಿಭಾಗೀಯ ಕೇಂದ್ರದಿಂದ ಬೆಂಗಳೂರು, ಹೈದ್ರಾಬಾದ್, ಮುಂಬೈ ಹಾಗೂ ನವದೆಹಲಿಗೆ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ರಸ್ತೆ, ರೈಲು ಸಾರಿಗೆ ಬಿಟ್ಟರೆ ಬೇರೆ ಮಾರ್ಗವಿರಲಿಲ್ಲ. ಕಲಬುರಗಿಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯಾಗಿದ್ದರಿಂದ ಸಾರ್ವಜನಿಕರ ಪ್ರಯಾಣಕ್ಕೆ ಮತ್ತೊಂದು ಮಾರ್ಗ ದೊರೆತಂತಾಗಿದೆ. ವಾಣಿಜ್ಯ ಕಾರ್ಯಾಚರಣೆಯ ಹೊಸ ಶಖೆ ಆರಂಭವಾದಂತ್ತಾಗಿದೆ.

ಸಾರಿಗೆ ನೆಪವೊಡ್ಡಿ ಈ ಭಾಗದಲ್ಲಿ ಬಂಡವಾಳ ಹೂಡಲು ಹಾಗೂ ಕೈಗಾರಿಕೆಗಳ ಸ್ಥಾಪನೆಗೆ ಹಿಂದೇಟು ಹಾಕುತ್ತಿದ್ದ ಕಾಲದಲ್ಲಿ ಇಲ್ಲಿ ವಿಮಾನ ನಿಲ್ದಾಣ ಸ್ಥಾಪನೆಯಾಗಿದ್ದರಿಂದ ದೇಶ-ವಿದೇಶಗಳ ಕೈಗಾರಿಕೋದ್ಯಮಿಗಳು ಬಂಡವಾಳ ಹೂಡಲು ಕಲಬುರಗಿಯತ್ತ ಮುಖ ಮಾಡಿ ನಿಂತಿವೆ, ಇದರಿಂದ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸಹ ಹೆಚ್ಚಲಿವೆ.

ಕಲ್ಯಾಣ ಕರ್ನಾಟಕವು ಸೂಫಿ ಶರಣ-ಸಂತರ ನಾಡಾಗಿದ್ದು, ಪ್ರವಾಸೋದ್ಯಮಕ್ಕೆ ಗಗನಯಾನವು ಬೂಸ್ಟ್ ನೀಡುವುದಲ್ಲದೆ ತಲಾ ಆದಾಯ ವೃದ್ಧಿಯಾಗುವ ಆಶಾಭಾವನೆ ಸಾರ್ವಜನಿಕರಲ್ಲಿ ಹೊಮ್ಮಿದೆ. ಕಲ್ಯಾಣ ಪ್ರದೇಶವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಬದಲಾವಣೆ ಕಂಡು ನಿಜ ಅರ್ಥದಲ್ಲಿ "ಜನರ ಕಲ್ಯಾಣ" ವಾಗಲಿದೆ ಎಂಬ ಆಶಾಭಾವನೆ ಆ ಭಾಗದ ಜನರಲ್ಲಿ ಮೂಡಿದೆ.

ಶೇ. 30 ರಷ್ಟು ತೊಗರಿ ಬೆಳೆದು ತೊಗರಿಯ ಕಣಜವಾಗಿರುವ ಈ ಪ್ರದೇಶದ ಬೆಳೆ ತೊಗರಿ ರಫ್ತಿಗೆ ಗಗನ ಸಂಚಾರ ಅನುಕೂಲವಾಗುವುದರಿಂದ ರೈತರಲ್ಲಿ ಸಂತಸ ಉಂಟು ಮಾಡಿದೆ. ಕಲಬುರಗಿಯು ವಿಶ್ವದಾದ್ಯಂತ ಸಿಮೆಂಟ್ ರಫ್ತಿನಿಂದಲೇ ಗಮನ ಸೆಳೆದಿರುವ ಪ್ರದೇಶವಾಗಿದ್ದು, ಉದ್ಯಮಿಗಳಲ್ಲಿ ತಮ್ಮ ಭವಿಷ್ಯದ ಕನಸು ನನಸಾಗಲಿದೆ ಎಂಬ ನಂಬಿಕೆಗೆ ಚಿಗುರೊಡೆದಿದೆ.

ರಾಜ್ಯದ ಇತರೆ ಐದು ವಿಮಾನ ನಿಲ್ದಾಣಗಳೂ ಕ್ರಮೇಣವಾಗಿ ಅಭಿವೃದ್ಧಿಗೊಂಡರೆ ಕಲಬುರಗಿ ವಿಮಾನ ನಿಲ್ದಾಣ ಮಾತ್ರ ಆರಂಭದಲ್ಲಿಯೇ ಸಕಲ ವ್ಯವಸ್ಥೆಯೊಂದಿಗೆ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಂಡಿರುವುದು ತುಂಬಾ ವಿಶೇಷವಾಗಿದ್ದು ಸರ್ಕಾರಕ್ಕೆ ಈ ಭಾಗದ ಜನರ ಮೇಲಿನ ವಿಶೇಷ ಕಾಳಜಿಯೇ ಇದಕ್ಕೆ ಕಾರಣವಾಗಿದೆ. ಅಲ್ಲದೆ ವಿಜಯಪುರದಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣವನ್ನು ಕೂಡ ಇನ್ನೊಂದು ವರ್ಷದಲ್ಲಿ ಪೂರ್ಣಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿದೆ.

ವಿಮಾನ ಹಾರಾಟದಿಂದ ವಾಯು ಸಾರಿಗೆಯನ್ನು ಆರಂಭಿಸಿದ ಮೇಲೆ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಉದ್ಯೋಗವನ್ನು ಸೃಜಿಸುವುದಕ್ಕಾಗಿ ಮುಖ್ಯಮಂತ್ರಿಗಳು ಮೊಟ್ಟ ಮೊದಲ ಬಾರಿಗೆ ಉತ್ತರ ಕರ್ನಾಟಕಲ್ಲಿ ಇನ್ವೆಸ್ಟ್ ಕರ್ನಾಟಕ-2020 ಸಮಾವೇಶವನ್ನು ಹಮ್ಮಿಕೊಂಡರು.

ಹುಬ್ಬಳ್ಳಿ-ಧಾರವಾಡ ಭೂ ಪ್ರದೇಶ ದೇಶಿಯ ಮತ್ತು ಜಾಗತಿಕ ಬಂಡವಾಳ ಹೂಡಿಕೆಗೆ ಸೂಕ್ತ ಸ್ಥಳವಾಗಿದ್ದು, ಇಲ್ಲಿ ಸಕಲ ಮೂಲ ಸೌಕರ್ಯ, ನುರಿತ ಮಾನವ ಸಂಪನ್ಮೂಲದ ಲಭ್ಯತೆ ಇದೆ. ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ರಾಜ್ಯದಲ್ಲಿ ಪಾರದರ್ಶಕ ಆಡಳಿತ ವ್ಯವಸ್ಥೆ ಇದ್ದು, ಇದರ ಲಾಭವನ್ನು ಪಡೆಯಲು ಹೂಡಿಕೆದಾರರು ಮುಂದಾಗಬೇಕೆಂದು ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಮನವಿ ಮಾಡಿದರು.

ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೋದ್ಯಮ ಬೆಳವಣಿಗೆಯ ದೃಷ್ಟಿಯಿಂದ ಉತ್ತರ ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಮುಖ್ಯವಾಗಿ ಹುಬ್ಬಳ್ಳಿಯಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಬಳ್ಳಾರಿಯಲ್ಲಿ ಟೆಕ್ಸ್‌ಟೈಲ್ ಕ್ಲಸ್ಟರ್, ಕೊಪ್ಪಳದಲ್ಲಿ ಕರಕುಶಲ ಆಟಿಕೆಗಳ ಕ್ಲಷ್ಟರ್, ಕಲಬುರಗಿಯಲ್ಲಿ ಸೌರ ವಿದ್ಯುತ್ ಸರಕುಗಳ ಕ್ಲಸ್ಟರ್‌ಗಳು ಸಧ್ಯದಲ್ಲೇ ಸ್ಥಾಪನೆಗೊಳ್ಳಲಿವೆ.

ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದ ಪ್ರದೇಶವು ಹೂಡಿಕೆಗೆ ಅತ್ಯಂತ ವಿಫುಲ ಹಾಗೂ ಪ್ರಶಸ್ತವಾದ ವಾತಾವರಣವನ್ನು ಹೊಂದಿರುವುದರಿಂದ ಇನ್ನು ಒಂದು ವರ್ಷಗಳಲ್ಲಿ ಸರ್ಕಾರದ ಮುಂದಾಲೋಚನೆಯಿಂದ ಖಂಡಿತವಾಗಿ ಅಭೂತಪೂರ್ವ ಬದಲಾವಣೆಗಳನ್ನು ಕಾಣಲಿದೆ.



Downloaded From: www.kpscvaani.com




# ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದ ರಾಜ್ಯ ಸರ್ಕಾರ

**ತಜ್ಞರ ಎಚ್ಚರಿಕೆಯ ನಡುವೆಯೇ ರಾಜ್ಯ ಸರ್ಕಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸುವ ದೃಢ ನಿಶ್ಚಯವನ್ನು ಮಾಡಿ, ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಮುಂಜಾಗೃತಾ ಕ್ರಮಗಳನ್ನು ಕೈಗೊಂಡು, ಯಶಸ್ವಿಯಾಗಿ ಪರೀಕ್ಷೆಯನ್ನು ನಡೆಸುವ ಮೂಲಕ ದೇಶಕ್ಕೆ ಮಾದರಿಯಾಗಿದೆ.**

ಉಮೇಶ್ ಕೋಲಿಗೆರೆ

**ಕೋ**ವಿಡ್-19 ಹಾವಳಿಗೆ ಜಗತ್ತೆ ಹೆದರಿ ಕಂಗಾಲಾಗಿ ಕುಳಿತಿರುವಾಗ ಕರ್ನಾಟಕದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವುದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಘೋಷಣೆ ಮಾಡಿ, ಇಡೀ ದೇಶವೇ ಒಮ್ಮೆ ರಾಜ್ಯದತ್ತ ತಿರುಗಿ ನೋಡುವಂತೆ ಮಾಡಿದರು.

ಪರೀಕ್ಷೆ ನಡೆಸುವ ನಿರ್ಧಾರ ಅತಾರ್ಕಿಕ, ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುವ ಉದ್ಧಟತನ ಪ್ರಯೋಗ, ಸಚಿವರು ತಮ್ಮ ಪ್ರತಿಷ್ಠೆಗಾಗಿ ಮಕ್ಕಳ ಜೀವವನ್ನು ಪಣಕ್ಕೆ ಒಡ್ಡುತ್ತಿದ್ದಾರೆ... ಹೀಗೆ ನಾನಾ ರೀತಿಯ ವ್ಯಾಖ್ಯಾನಗಳು ಕೇಳಿ ಬಂದಿದ್ದವು. ಪರೀಕ್ಷೆಯ ಅಂಕಗಳು ಮತ್ತು ಮಕ್ಕಳ ಪ್ರಾಣದ ನಡುವೆ ಸರ್ಕಾರದ ಆಯ್ಕೆ ಯಾವುದು ಎಂಬಷ್ಟರ ಮಟ್ಟಿನ ಗಂಭೀರ ಚರ್ಚೆಗಳು ನಡೆದವು. ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಅಭಿಯಾನಗಳೇ ನಡೆದು ಹೋದವು.

ಮೊದಲು ಮಾರ್ಚ್ 27ರಿಂದ ಏಪ್ರಿಲ್ 9ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲು ದಿನಾಂಕ ಘೋಷಣೆ ಮಾಡಿದಾಗ ಕರ್ನಾಟದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಅರವತ್ತರ ಆಸುಪಾಸಿನಲ್ಲಿತ್ತು. ಮಾರ್ಚ್ 27ರಂದು ಏಳು ಮಂದಿ ಸೋಂಕಿತರು ಪತ್ತೆಯಾಗಿದ್ದರು. ಒಟ್ಟು 62 ಮಂದಿಗೆ ಸೋಂಕು ತಗುಲಿತ್ತು. ಮೂರು ಮಂದಿ ಸಾವನ್ನಪ್ಪಿದ್ದರು. ಆ ಸಂದರ್ಭದಲ್ಲಿ ಕೋವಿಡ್ ಸೋಂಕಿನ ಕುರಿತು ಯಾರಿಗೂ ಸ್ಪಷ್ಟತೆ ಇರಲಿಲ್ಲ. ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ಗೊಂದಲಗಳಿದ್ದವು. ಹಾಗಾಗಿ ಅನಿವಾರ್ಯವಾಗಿ ಪರೀಕ್ಷೆಯನ್ನು ಮುಂದೂಡಲಾಯಿತು.

ಅನಂತರ ಜೂನ್ 25ರಿಂದ ಜುಲೈ 3ರವರೆಗೆ ಪರೀಕ್ಷೆ ನಡೆಸುವುದಾಗಿ ಪರಿಷ್ಕೃತ ದಿನಾಂಕ ಘೋಷಣೆ ಮಾಡಿದಾಗ ಸೋಂಕಿನ ಪ್ರಸರಣ ಅಪಾಯದ ಮಟ್ಟ ಮೀರಿತ್ತು. ಪರೀಕ್ಷೆ ಆರಂಭದ ದಿನವಾದ ಜೂನ್ 25ರಂದು ರಾಜ್ಯದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 10,560, ಅಂದು ಪತ್ತೆಯಾದ ಹೊಸ ಪ್ರಕರಣಗಳ ಸಂಖ್ಯೆ 442, ಒಟ್ಟು ಸಾವಿನ ಸಂಖ್ಯೆ 174. ಅಂತಹ ವಿಷಮ ಪರಿಸ್ಥಿತಿಯಲ್ಲಿ ಮಕ್ಕಳನ್ನು ಕೂರಿಸಿ ಪರೀಕ್ಷೆ ಬರೆಸುವುದೆಂದರೆ ಅದಕ್ಕೆ ಎಂಟೆದೆಯ ಧೈರ್ಯವೇ ಬೇಕು.

ಸಚಿವ ಸುರೇಶ್ ಕುಮಾರ್ ಅವರು ನೋಡಲು ಸರಳವಾಗಿದ್ದರೂ, ನಿರ್ಧಾರ ತೆಗೆದುಕೊಳ್ಳುವಲ್ಲಿ ವಜ್ರದಪಿ ಕಠಿಣಂ ಎಂಬಂತೆ ಗಟ್ಟಿ ನಿಲುವು ಪ್ರದರ್ಶಿಸುತ್ತಾರೆ. ನಾನಾ ದಿಕ್ಕುಗಳಿಂದ



Downloaded From: www.kpscvaani.com

ಕೇಳಿ ಬರುತ್ತಿದ್ದ ಟೀಕೆಗಳಿಗೆ ಕಿವಿಗೊಡದೆ ದೃಢಚಿತ್ತದಲ್ಲಿ ಪರೀಕ್ಷೆ ನಡೆಸಿಯೇ ಸಿದ್ಧ ಎಂಬ ತೀರ್ಮಾನಕ್ಕೆ ಬಂದಿದ್ದರು. ಹಾಗಾಗಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಅಧಿಕಾರಿಗಳು ಮತ್ತು ಶಿಕ್ಷಕರುಗಳೊಂದಿಗೆ ನಿರಂತರವಾಗಿ ಚರ್ಚೆಗಳನ್ನು ನಡೆಸಿದರು. ನಿರ್ದಿಷ್ಟ ಗುರಿ, ಅದನ್ನು ತಲುಪಲು ಬೇಕಾದ ಪೂರ್ವ ಸಿದ್ಧತೆ, ಅವಿರತ ಶ್ರಮ ಮತ್ತು ಸಂಘಟನಾತ್ಮಕ ಶಕ್ತಿ ಇದ್ದರೆ ಯಾವುದು ಕಷ್ಟವಲ್ಲ ಎಂಬುದನ್ನು ದೇಶಕ್ಕೆ ತೋರಿಸಿಕೊಟ್ಟರು. ಶಿಕ್ಷಕರು, ಅಧಿಕಾರಿಗಳು, ಪೋಷಕರು ಮತ್ತು ಮಕ್ಕಳು ನೀಡಿದ ಸಹಕಾರವೇ ಈ ಯಶಸ್ಸಿಗೆ ಕಾರಣ.

ಭಾರತದ ರಾಜ್ಯಗಳ ಪೈಕಿ ಕೇರಳ, ಕೇಂದ್ರಾಡಳಿತ ಪ್ರದೇಶವಾದ ಲಕ್ಷದೀಪ ಸೇರಿ ಕೆಲವು ರಾಜ್ಯಗಳಷ್ಟೇ ಪರೀಕ್ಷೆ ನಡೆಸುವ ದುಸ್ಸಾಹಸಕ್ಕೆ ಕೈ ಹಾಕಿದವು. ಕೆಲವು ರಾಜ್ಯಗಳು ಪೂರ್ತಿ ಪರೀಕ್ಷೆ ನಡೆಸದೆ ಒಂದೆರಡು ವಿಷಯಗಳನ್ನು ಬರೆಸಿ ಉಳಿದ ಪರೀಕ್ಷೆಗಳನ್ನು ಬರ್ಕಾಸ್ತ್ ಮಾಡಿದ್ದವು. ಒಂದೆರಡು ವಿಷಯಗಳಲ್ಲಿ ಬರೆದ ಉತ್ತರ ಹಾಗೂ ಹಿಂದಿನ ಕಲಿಕಾ ಸಾಮರ್ಥ್ಯ ಆಧರಿಸಿ ಫಲಿತಾಂಶವನ್ನೂ ಪ್ರಕಟಿಸಿದವು. ಕರ್ನಾಟಕದಲ್ಲೂ ಅದೇ ರೀತಿ ಮಾಡಬೇಕು ಎಂಬ ಒತ್ತಾಯಗಳು ಕೇಳಿ ಬಂತು.

ಪರೀಕ್ಷೆಯ ದಿನಾಂಕ ಪ್ರಕಟಗೊಂಡಾಗ ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸಲ್ಲಿಕೆಯಾದವು. ಪರೀಕ್ಷೆಯನ್ನು ಕೈ ಬಿಡಲು ಸರ್ಕಾರಕ್ಕೆ ಸೂಚಿಸುವಂತೆ ಮನವಿ ಮಾಡಲಾಗಿತ್ತು. ಆದರೆ ನ್ಯಾಯಾಲಯ ಸರ್ಕಾರದ ವಾದಕ್ಕೆ ಬೆಂಬಲ ಸೂಚಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ತಿರಸ್ಕರಿಸಿತ್ತು. ಅನಂತರ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು. ಅಲ್ಲಿಯೂ ಸರ್ಕಾರದ ವಾದಕ್ಕೆ ಪುರಸ್ಕಾರ ದೊರೆಯಿತು. ಇದರಿಂದ ಪರೀಕ್ಷೆ ನಡೆಸಲು ಸರ್ಕಾರಕ್ಕಿದ್ದ ಅಡೆತಡೆಗಳು ನಿವಾರಣೆಯಾದವು.

ಸುಮಾರು 8.48 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಅಷ್ಟು ಮಂದಿಯ ಸುರಕ್ಷತೆ ಜವಾಬ್ದಾರಿ ಸಚಿವ ಸುರೇಶ್ ಕುಮಾರ್ ಅವರ ಹೆಗಲ ಮೇಲೆ ಬಿತ್ತು. ಸ್ವಲ್ಪ ವ್ಯತ್ಯಾಸಗಳಾದರೂ ಸರ್ಕಾರದ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಗಳಿತ್ತು. ಸಚಿವರು ರಾಜ್ಯದ ಉದ್ದಗಲಕ್ಕೂ ಪ್ರವಾಸ ನಡೆಸಿದರು. ಪರೀಕ್ಷೆ ನಡೆಸುವ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರ ಜೊತೆ ಸಂವಾದ ನಡೆಸಿದರು. ಬಹುತೇಕರು ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಆದರೆ ಮಕ್ಕಳ ಸುರಕ್ಷತೆಯ ಬಗ್ಗೆಯೂ ಆತಂಕ ವ್ಯಕ್ತಪಡಿಸಿದ್ದರು. ಅಲ್ಲಿಗೆ ಪರೀಕ್ಷೆ ನಡೆಸಬೇಕು ಎಂಬ ಸರ್ಕಾರದ ನಿಲುವಿಗೆ ಜನ ಬೆಂಬಲ ಇದೆ ಎಂಬುದು ಖಚಿತವಾಗಿತ್ತು.

ವರ್ಷ ಪೂರ್ತಿ ಓದಿ ಪರೀಕ್ಷೆ ತಯಾರಿ ನಡೆಸಿದ ವಿದ್ಯಾರ್ಥಿಗಳು ಮುಂದಿನ ಭವಿಷ್ಯದ ಸವಾಲಿಗೆ ಎದೆಯೊಡ್ಡಲು ಸಿದ್ಧರಾಗಿದ್ದರು. ಒಂದು ವೇಳೆ ಪರೀಕ್ಷೆ ನಡೆಸದೆ ಎಲ್ಲರನ್ನೂ ಉತ್ತೀರ್ಣಗೊಳಿಸಿದರೆ ಭವಿಷ್ಯದ ಮಹತ್ವದ ಘಟ್ಟವಾದ ಎಸ್‌ಎಸ್‌ಎಲ್‌ಸಿಯಲ್ಲೇ ಮುಗ್ಗರಿಸಿದಂತಾಗುತ್ತದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಮುಂದಿನ ವ್ಯಾಸಂಗದತ್ತ ಹೆಜ್ಜೆ ಇಡುವಾಗ ಅಳತೆ ತಪ್ಪುತ್ತದೆ ಎಂಬುದು ಸಚಿವ ಸುರೇಶ್ ಕುಮಾರ್ ಅವರ ನಿಲುವಾಗಿತ್ತು. ಪರೀಕ್ಷೆಯೆಂಬ ಮಾನದಂಡ ಹೊರತು ಪಡಿಸಿ ಉಳಿದ್ಯಾವ ಆಯ್ಕೆಗಳು ಅಸಮರ್ಪಕ



ಎನಿಸಿದ್ದವು. ಒಂದರಿಂದ ಒಂಬತ್ತನೆ ತರಗತಿವರೆಗೆ ಪರೀಕ್ಷೆ ನಡೆಸದೆ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಲಾಗಿತ್ತು. ಆದರೆ ಎಸ್‌ಎಸ್‌ಎಲ್‌ಸಿಯಲ್ಲಿ ಆ ನಿರ್ಧಾರ ತೆಗೆದುಕೊಳ್ಳದೆ ಪರೀಕ್ಷೆ ನಡೆಸಿದರೆ ಮಾತ್ರ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂಬ ಆಲೋಚನೆಗೆ ಪೋಷಕರು ಮತ್ತು ವಿದ್ಯಾರ್ಥಿಗಳು ಧ್ವನಿಗೂಡಿಸಿದರು.

ಪರೀಕ್ಷೆ ನಡೆಸುವುದೇನೋ ಸರಿ. ಆದರೆ ಕೋವಿಡ್–19 ಸಾಂಕ್ರಾಮಿಕ ಕಾಲದಲ್ಲಿ ಸುರಕ್ಷತೆ ಹೇಗೆ ಎಂಬ ಪ್ರಶ್ನೆ ದೊಡ್ಡದಾಗಿ ಸರ್ಕಾರದ ಮುಂದಿತ್ತು. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದಾಗ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಸೇರಿದಂತೆ ಸಂಪುಟದ ಎಲ್ಲಾ ಸಚಿವರು ಸುರೇಶ್ ಕುಮಾರ್ ಅವರ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದರು. ಕೂಡಲೇ ಪರೀಕ್ಷಾ ಪೂರ್ವ ತಯಾರಿ ಆರಂಭಿಸಿದ ಸಚಿವರು ಮೊದಲಿಗೆ ಆರೋಗ್ಯ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಸಮಗ್ರ ಮಾರ್ಗಸೂಚಿ ಸೂತ್ರಗಳನ್ನು ಸಿದ್ಧಪಡಿಸಿದರು.

ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಮುಂಭಾಗದಲ್ಲೇ ಆರೋಗ್ಯ ತಪಾಸಣೆ ನಡೆಸಬೇಕು. ಅದಕ್ಕಾಗಿ ಹಿರಿಯ ಆರೋಗ್ಯ ಸಹಾಯಕರು ಮತ್ತು ಆಶಾ ಕಾರ್ಯಕರ್ತರನ್ನು ನಿಯೋಜಿಸಲು ನಿರ್ಧರಿಸಲಾಯಿತು. ಮಕ್ಕಳಿಗೆ ಕೆಮ್ಮು, ನೆಗಡಿ, ಶೀತ, ಚಳಿಜ್ವರದಂತಹ ಲಕ್ಷಣಗಳಿದ್ದರೆ ಕೂಡಲೇ ಅವರಿಗೆ ಚಿಕಿತ್ಸೆಯ ವ್ಯವಸ್ಥೆ ಮಾಡಲು ತುರ್ತು ವಾಹನಗಳನ್ನು ಪರೀಕ್ಷಾ ಕೇಂದ್ರದ ಬಳಿಯೇ ಸಜ್ಜುಗೊಳಿಸಲಾಯಿತು.

ಪ್ರತಿ ಕೊಠಡಿಯಲ್ಲೂ ಗರಿಷ್ಠ 20 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿದ್ದರಿಂದ ಪರೀಕ್ಷಾ ಕೇಂದ್ರಗಳ ಸಂಖ್ಯೆಯೂ ಹೆಚ್ಚಾಗಿತ್ತು. ರಾಜ್ಯಾದ್ಯಂತ 2879 ಪರೀಕ್ಷಾ ಕೇಂದ್ರಗಳು ಮತ್ತು 330 ಬ್ಲಾಕ್ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಪರೀಕ್ಷೆಗಾಗಿ ನಿಯೋಜಿತವಾದ ಕಟ್ಟಡವನ್ನು ಕ್ವಾರಂಟೈನ್‌ಗೆ ಬಳಕೆ ಮಾಡಲು ಅವಕಾಶ ಕೊಡದೆ ಎಚ್ಚರಿಕೆ ವಹಿಸಲಾಯಿತು.

ಪ್ರತಿ 200 ವಿದ್ಯಾರ್ಥಿಗಳಿಗೆ ಒಂದರಂತೆ ರಾಜ್ಯಾದ್ಯಂತ 5755 ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಪ್ರತಿ ವಿದ್ಯಾರ್ಥಿಗೂ ಆರು ದಿನ ಪರೀಕ್ಷೆಗೆ ಮೂರು ದಿನಕ್ಕೆ ಒಂದರಂತೆ ಎರಡು ಮಾಸ್ಕ್‌ಗಳನ್ನು ವಿತರಿಸಲಾಯಿತು. ಪರೀಕ್ಷಾ ಕೇಂದ್ರದ ಹೊರಗೆ ಥರ್ಮಲ್ ಸ್ಕ್ಯಾನಿಂಗ್ ಜೊತೆಗೆ ಸ್ಯಾನಿಟೈಜರ್ ಒದಗಿಸಲಾಯಿತು. ಪರೀಕ್ಷೆ ಮುಗಿಸಿ ಹೊರ ಬಂದ ಬಳಿಕವೂ ಸ್ಯಾನಿಟೈಸ್ ಮಾಡಿಕೊಂಡೆ ಮನೆಗೆ ಹೋಗುವಂತೆ ಸೂಚಿಸಲಾಯಿತು. ಶಿಕ್ಷಕರು, ಮೇಲುಸ್ತುವಾರಿ ಅಧಿಕಾರಿಗಳು ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳಿಗೆ ತಿಳುವಳಿಕೆ ಹೇಳಿ ಧೈರ್ಯ ತುಂಬಿದರು.



Downloaded From: www.kpscvaani.com



> ಸಚಿವರು ರಾಜ್ಯದ ಉದ್ದಗಲಕ್ಕೂ ಪ್ರವಾಸ ನಡೆಸಿದರು. ಪರೀಕ್ಷೆ ನಡೆಸುವ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರ ಜೊತೆ ಸಂವಾದ ನಡೆಸಿದರು. ಬಹುತೇಕರು ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಆದರೆ ಮಕ್ಕಳ ಸುರಕ್ಷತೆಯ ಬಗ್ಗೆಯೂ ಆತಂಕ ವ್ಯಕ್ತಪಡಿಸಿದ್ದರು. ಅಲ್ಲಿಗೆ ಪರೀಕ್ಷೆ ನಡೆಸಬೇಕು ಎಂಬ ಸರ್ಕಾರದ ನಿಲುವಿಗೆ ಜನ ಬೆಂಬಲ ಇದೆ ಎಂಬುದು ಖಚಿತವಾಗಿತ್ತು.

ಪರೀಕ್ಷೆಗೆ ಮುನ್ನಾ ಮತ್ತು ಪರೀಕ್ಷೆ ಮುಗಿದ ಬಳಿಕ ಪ್ರತಿಯೊಂದು ಕೇಂದ್ರವನ್ನು ರಾಸಾಯಿನಿಕ ದ್ರಾವಣದ ಮೂಲಕ ಶುಚಿಗೊಳಿಸಿ ಸ್ಯಾನಿಟೈಜೇಷನ್ ಮಾಡಲಾಗುತ್ತಿತ್ತು. ಈ ಮೂಲಕ ವಿದ್ಯಾರ್ಥಿಗಳಿಗೆ ಸೋಂಕಿನ ಭಯ ನಿವಾರಿಸಿ ನಿರ್ಭಯ ವಾತಾವರಣದಲ್ಲಿ ಪರೀಕ್ಷೆ ಬರೆಯಲು ಆತ್ಮಸ್ಥೈರ್ಯ ತುಂಬಲಾಯಿತು.

ಸರ್ಕಾರದ ಮುಂದಿದ್ದ ಮತ್ತೊಂದು ಸವಾಲೆಂದರೆ ಸಾರಿಗೆ ವ್ಯವಸ್ಥೆಯದು. ಅನ್‌ಲಾಕ್ 1 ಜಾರಿಯಲ್ಲಿದ್ದರೂ ವಾಹನಗಳ ಸಂಚಾರ ವಿರಳವಾಗಿತ್ತು. ಖಾಸಗಿ ಶಾಲೆಗಳು ಸಾರಿಗೆ ವ್ಯವಸ್ಥೆ ಮಾಡಲು ಹಿಂದೇಟು ಹಾಕಿದವು. ಪ್ರಯಾಣದ ಸಂದರ್ಭದಲ್ಲಿ ಸುರಕ್ಷಿತ ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕಿತ್ತು.

ಅದಕ್ಕಾಗಿ ನಿಗದಿಗಿಂತ ಹೆಚ್ಚಿನ ವಾಹನಗಳ ಅಗತ್ಯವಿತ್ತು. ಸರ್ಕಾರ ನೇರವಾಗಿ 3500 ಸಾವಿರ ವಾಹನಗಳನ್ನು ಬಾಡಿಗೆ ಪಡೆದಿತ್ತು. ವಿದ್ಯಾರ್ಥಿಗಳಿಂದ ಮೊದಲೇ ಮಾಹಿತಿ ಪಡೆದು ಎಲ್ಲಿಯೂ ಗೊಂದಲವಾಗದಂತೆ ವಾಹನ ಸೌಕರ್ಯ ಕಲ್ಪಿಸಲಾಯಿತು. ದೂರದೂರಿನ ವಿದ್ಯಾರ್ಥಿಗಳಿಗೂ ಪರೀಕ್ಷಾ ಕೇಂದ್ರಕ್ಕೆ ಬರಲು ತೊಂದರೆಯಾಗಲಿಲ್ಲ.

ಲಾಕ್‌ಡೌನ್ ಸಂದರ್ಭದಲ್ಲಿ ಆರ್ಥಿಕ ಮುಗ್ಗಟ್ಟಿನಿಂದ ಕೆಲ ಕುಟುಂಬಗಳು ವಲಸೆ ಹೋಗಿದ್ದವು. ನೆರೆ ರಾಜ್ಯದಲ್ಲಿದ್ದ ಅಂತಹ ವಿದ್ಯಾರ್ಥಿಗಳಿಗೆ ಕರ್ನಾಟಕದ ಗಡಿಯಲ್ಲಿರುವ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಯಿತು. ಈ ಕ್ರಮದಿಂದ ನೆರೆಯ ಕೇರಳ, ತಮಿಳುನಾಡಿನಲ್ಲಿದ್ದ ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗಲಿಲ್ಲ. ಅಂತರರಾಜ್ಯ ಸಂಚಾರದ ವೇಳೆ ತೊಂದರೆಯಾಗದಂತೆ ಜಿಲ್ಲಾಧಿಕಾರಿಗಳಿಂದ ಶಿಕ್ಷಣ ಇಲಾಖೆಗೆ ಸೂಕ್ತ ಅನುಮತಿ ಪತ್ರ ಕೊಡಿಸಿತ್ತು. ಸುಮಾರು 12 ಸಾವಿರ ಮಕ್ಕಳು ವಸತಿ ಶಾಲೆಗಳಲ್ಲಿ ಮತ್ತು ಗಡಿ ಶಾಲೆಗಳಲ್ಲಿ ಪರೀಕ್ಷೆ ಬರೆದರು.

ಪರೀಕ್ಷೆ ನಡೆಯುವ ಕಾಲಕ್ಕೆ ಸೋಂಕು ವ್ಯಾಪಕವಾಗಿ ಹೆಚ್ಚಾಗುತ್ತಿತ್ತು. ಕಂಟೈನ್ಮೆಂಟ್ ಝೋನ್‌ಗಳ ಸಂಖ್ಯೆಯೂ ಹೆಚ್ಚಾಗಿತ್ತು. ಸೋಂಕಿತ ಪ್ರದೇಶಗಳ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರೆಲ್ಲರಿಗೂ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮಾಡಲಾಗಿತ್ತು. ಕಂಟೈನ್ಮೆಂಟ್ ಝೋನ್‌ನಿಂದ ಬಂದ ವಿದ್ಯಾರ್ಥಿಗಳ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಲಾಯಿತು. ಎನ್ 95 ಮಾಸ್ಕ್ ವಿತರಿಸಿ ಪರೀಕ್ಷಾ



ಬಿಕ್ಕಟ್ಟಿನ ಸಂದರ್ಭದಲ್ಲೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಮಕ್ಕಳ ಹಿತದೃಷ್ಟಿಯಿಂದ ನಡೆಸಲಾಗಿದೆ. ಸಕಾರಾತ್ಮಕ ಚಿಂತನೆ ಮತ್ತು ಅವಿರತ ಪ್ರಯತ್ನವೊಂದಿದ್ದರೆ ಎಂತಹ ಸಂದರ್ಭವನ್ನು ಧೈರ್ಯದಿಂದ ಎದುರಿಸಲು ಸಾಧ್ಯ ಎಂಬ ಮೇಲ್ಪಂಕ್ತಿಯನ್ನು ಕರ್ನಾಟಕ ಸರ್ಕಾರ ಇಂದು ಇಡೀ ದೇಶಕ್ಕೆ ತೋರಿಸಿಕೊಟ್ಟಿದೆ. ಪರೀಕ್ಷಾ ಕೇಂದ್ರದ ಮೂಲಕ ಕೋವಿಡ್ ಹರಡಿದ ಒಂದೇ ಒಂದು ಪ್ರಕರಣವೂ ನಡೆದಿಲ್ಲ.

**ಎಸ್.ಸುರೇಶ್ ಕುಮಾರ್**
ಸಚಿವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ



Downloaded From: www.kpscvaani.com



**ಪ್ರತಿ 200 ವಿದ್ಯಾರ್ಥಿಗಳಿಗೆ ಒಂದರಂತೆ ರಾಜ್ಯಾದ್ಯಂತ 5755 ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಪ್ರತಿ ವಿದ್ಯಾರ್ಥಿಗೂ ಆರು ದಿನ ಪರೀಕ್ಷೆಗೆ ಮೂರು ದಿನಕ್ಕೆ ಒಂದರಂತೆ ಎರಡು ಮಾಸ್ಕ್‌ಗಳನ್ನು ವಿತರಿಸಲಾಯಿತು. ಪರೀಕ್ಷಾ ಕೇಂದ್ರದ ಹೊರಗೆ ಥರ್ಮಲ್ ಸ್ಕ್ಯಾನಿಂಗ್ ಜೊತೆಗೆ ಸ್ಯಾನಿಟೈಜರ್ ಒದಗಿಸಲಾಯಿತು. ಪರೀಕ್ಷೆ ಮುಗಿಸಿ ಹೊರ ಬಂದ ಬಳಿಕವೂ ಸ್ಯಾನಿಟೈಸ್ ಮಾಡಿಕೊಂಡೆ ಮನೆಗೆ ಹೋಗುವಂತೆ ಸೂಚಿಸಲಾಯಿತು.**

ಕೊಠಡಿಯನ್ನು ಪ್ರತಿನಿತ್ಯ ಸ್ಯಾನಿಟೈಜೇಷನ್ ಮಾಡಲಾಯಿತು.

ಒಂದೆಡೆ ಸೋಂಕಿನ ಭಯವಾದರೆ ಮತ್ತೊಂದೆಡೆ ಪರೀಕ್ಷೆಯ ಪಾವಿತ್ರ್ಯತೆ ಕಾಪಾಡುವ ಸವಾಲು ಕೂಡ ಶಿಕ್ಷಣ ಸಚಿವರ ಮುಂದಿತ್ತು. ಪೊಲೀಸ್ ಇಲಾಖೆಯನ್ನು ಸಮರ್ಥವಾಗಿ ಬಳಸಿಕೊಂಡು ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಕ್ರಮ ಕೈಗೊಂಡಿದ್ದಲ್ಲದೆ ಪ್ರಶ್ನೆ ಪತ್ರಿಕೆ ಸಾಗಾಣಿಕೆ, ಪರೀಕ್ಷಾ ಕೇಂದ್ರದ ಬಳಿ ಬಿಗಿ ಬಂದೋಬಸ್ತ್ ಆಯೋಜಿಸಲಾಗಿತ್ತು. ಪ್ರತಿ ವರ್ಷ ಸದ್ದು ಮಾಡುತ್ತಿದ್ದ ಪ್ರಶ್ನೆ ಪತ್ರಿಕೆ ಸೋರಿಕೆ ಈ ಬಾರಿ ಇಲ್ಲವಾಗಿಸುವಲ್ಲಿ ಸರ್ಕಾರದ ಮುಂಜಾಗ್ರತೆ ಬಹಳ ಮುಖ್ಯವಾಗಿತ್ತು.

ಪ್ರತಿ ಹಂತದಲ್ಲೂ ಖುದ್ದು ಉಸ್ತುವಾರಿಗೆ ನಿಂತ ಸಚಿವರು ಎಲ್ಲಿಯೂ ಲೋಪವಾಗದಂತೆ  ನೋಡಿಕೊಂಡರು. ಪರೀಕ್ಷೆ ನಡೆಯುವ ದಿನಗಳಲ್ಲೂ ಕಚೇರಿಯಲ್ಲಿ ಕುಳಿತುಕೊಳ್ಳದೆ ಬೆಂಗಳೂರು, ಕನಕಪುರ, ಆನೆಕಲ್ ಸೇರಿದಂತೆ ಹಲವಾರು ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಖುದ್ದು ಕ್ಷೇತ್ರ ಪರಿಶೀಲನೆಯಿಂದ ಕೊನೆ ಹಂತದಲ್ಲಿದ್ದ ಸಣ್ಣಪುಟ್ಟ ಲೋಪದೋಷಗಳನ್ನು ನಿವಾರಿಸಲು ಸಾಧ್ಯವಾಯಿತು.

ಪರೀಕ್ಷೆ ಸಂದರ್ಭದಲ್ಲಿ ಕೆಲವು ಅವಗಡಗಳು ನಡೆದವು. ಬೇರೆ ಕಡೆಯಿಂದ ಬಂದ 32 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಪತ್ತೆಯಾಯಿತು. ಆ ವಿದ್ಯಾರ್ಥಿಗಳನ್ನು ಮುಂದಿನ ಬಾರಿ ನಡೆಯುವ ಪೂರಕ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಯಿತು. ಕೆಲವು ಜಿಲ್ಲೆಗಳಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿದೆ ಎಂಬ ವದಂತಿ ಹಬ್ಬಿತಾದರೂ ,ಪರೀಕ್ಷಾ ಕೇಂದ್ರದಿಂದ ಯಾವ ವಿದ್ಯಾರ್ಥಿಗೂ ಸೋಂಕು ತಗುಲಿಲ್ಲ ಎಂದು ಸ್ಪಷ್ಟಪಡಿಸುವ ಮೂಲಕ ಸಚಿವರು ಗೊಂದಲಗಳಿಗೆ ತೆರೆ ಎಳೆದರು.



ಮೊದಲ ಹಂತದಲ್ಲಿ ಪರೀಕ್ಷೆ ಘೋಷಣೆಯಾಗಿ ಲಾಕ್‌ಡೌನ್ ಕಾರಣಕ್ಕೆ ದಿನಾಂಕ ಮುಂದೂಡಿಕೆಯಾಗಿತ್ತು. ಬಹುತೇಕ ಪರೀಕ್ಷೆ ನಡೆಯುವುದಿಲ್ಲ ಎಂಬ ವಾತಾವರಣ ಇತ್ತು. ವಿದ್ಯಾರ್ಥಿಗಳು ಓದನ್ನು ಮರೆತು ತಮ್ಮ ಪಾಡಿಗೆ ತಾವಿದ್ದರು. ಮತ್ತೆ ಪರೀಕ್ಷೆ ದಿನಾಂಕ ಘೋಷಣೆಯಾದಾಗ ಪುನರ್ ಮನನದ ಅಗತ್ಯ ಹೆಚ್ಚಾಯಿತು. ಅದಕ್ಕಾಗಿ ದೂರದರ್ಶನ ಚಂದನ ವಾಹಿನಿಯಲ್ಲಿ ಮತ್ತು ಶಿಕ್ಷಣ ಇಲಾಖೆಯ ಯೂ ಟ್ಯೂಬ್ ಚಾನೆಲ್‌ನಲ್ಲಿ ಪುನರ್‌ಮನನ ಹಾಗೂ ಆತ್ಮಸ್ಥೈರ್ಯದಿಂದ ಪರೀಕ್ಷೆ ಹೆದರಿಸುವ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಪ್ರಸಾರ ಮಾಡಲಾಯಿತು.

ಸರ್ಕಾರ ತೆಗೆದುಕೊಂಡ ಕ್ರಮಗಳ ಮೇಲೆ ಪೋಷಕರಿಗೆ ವಿಶ್ವಾಸ ಮೂಡಲಾರಂಭಿಸಿತು. ರಾಜ್ಯಾದ್ಯಂತ ನೋಂದಾಯಿತ ವಿದ್ಯಾರ್ಥಿಳ ಪೈಕಿ ಶೇ.98.75ರಷ್ಟು ಮಂದಿ ಅಂದರೆ ಸರಾಸರಿ ಎಂಟು ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಆರೋಗ್ಯ, ಶಿಕ್ಷಣ, ಪೊಲೀಸ್, ಕಂದಾಯ ಸೇರಿದಂತೆ ಹಲವಾರು ಇಲಾಖೆಗಳ ಸುಮಾರು ಒಂದುವರೆ ಲಕ್ಷ ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪರೀಕ್ಷೆಯ ಕಾರ್ಯದಲ್ಲಿ ಸಂಘಟನಾತ್ಮಕವಾಗಿ ಕೆಲಸ ಮಾಡಿದರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎದುರಾದ ಸವಾಲನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದ ಸಚಿವ ಸುರೇಶ್ ಕುಮಾರ್  ಸೇರಿದಂತೆ ಎಲ್ಲರಿಗೂ ಅಭಿನಂದನೆ ಸಲ್ಲಿಸಿದ ಮುಖ್ಯಮಂತ್ರಿಗಳು ವಿದ್ಯಾರ್ಥಿಗಳಿಗೆ ಅವರ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿದರು.

ಈ ಯಶಸ್ಸು ಶಿಕ್ಷಣ ಕ್ಷೇತ್ರವೂ ಸೇರಿದಂತೆ ಒಟ್ಟಾರೆ ಸಮಾಜದಲ್ಲಿ ಹೊಸ ವಿಶ್ವಾಸವನ್ನು ಮೂಡಿಸಿತು. ಮಕ್ಕಳ ಧೈರ್ಯ ಸಮಾಜಕ್ಕೆ ಮಾದರಿಯಾದುದು.



Downloaded From: www.kpscvaani.com

## ಸರ್ಕಾರದಿಂದ ಉದ್ಯೋಗಾಕಾಂಕ್ಷಿಗಳಿಗಾಗಿ

# ಕೌಶಲ್ಯ ಸಂಪರ್ಕ ವೇದಿಕೆ



**ಖಚಿತವಾದ ಉದ್ಯೋಗಾವಕಾಶಕ್ಕಾಗಿ ಕೌಶಲ್ಯ ತರಬೇತಿಗಳನ್ನು ನೀಡಲು ಮತ್ತು ಕೌಶಲ್ಯಗಳನ್ನು ಉನ್ನತೀಕರಿಸಲು 1000 ಪದವೀಧರರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ 2 ಕೋಟಿ ರೂಗಳ ವೆಚ್ಚದಲ್ಲಿ talent acceleration programme ಅನ್ನು ಅನುಷ್ಠಾನಗೊಳಸಿಸಲಾಗುತ್ತಿದೆ.**



ಸುಭಾಷಿಣಿ

**ಕೋ**ವಿಡ್–19 ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆಗಳು ಕುಂಠಿತಕೊಂಡಿದ್ದರಿಂದ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವೆ ಅಪಾರ ಅಂತರ ಏರ್ಪಟ್ಟಿದೆ. ಇದನ್ನು ಮನಗಂಡ ಸರ್ಕಾರವು ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವಿನ ಅಂತರವನ್ನು ದೂರ ಮಾಡುವ ನಿಟ್ಟಿನಲ್ಲಿ ಕೌಶಲ್ಯ ಸಂಪರ್ಕ ವೇದಿಕೆಯನ್ನು ಒದಗಿಸಿಕೊಟ್ಟಿದೆ. ಅಲ್ಲದೆ ಸದ್ಯದಲ್ಲೇ ಬೃಹತ್ ಆನ್‌ಲೈನ್ ಉದ್ಯೋಗ ಮೇಳವನ್ನು ಆಯೋಜಿಸಲು ತಯಾರಿಯನ್ನು ನಡೆಸಿದೆ.

ಯುವಕ ಯುವತಿಯರಿಗೆ ತಮ್ಮ ಕೌಶಲ್ಯವನ್ನು ಹೆಚ್ಚಿಸಲು, ಅಗತ್ಯ ಕೌಶಲ್ಯ ಮತ್ತು ಪರಿಣಿತಿಯನ್ನು ಪಡೆದುಕೊಳ್ಳಲು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಕೌಶಲ್ಯ ಸಂಪರ್ಕ ವೇದಿಕೆ:**

ನಿರುದ್ಯೋಗಿ ಯುವಕ ಯುವತಿಯರಿಗೆ ಕೌಶಲ್ಯ ಮತ್ತು ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ವಿವಿಧ ಪಾಲುದಾರರನ್ನು

> "ಕೋವಿಡ್–19 ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆಗಳು ಕುಂಠಿತಗೊಂಡಿದ್ದು, ಇವುಗಳಿಗೆ ಉತ್ತೇಜನ ನೀಡುವ ಮೂಲಕ ಉದ್ಯೋಗಾವಕಾಶವನ್ನು ಸೃಷ್ಟಿಸಲು ನಮ್ಮ ಸರ್ಕಾರ ಬದ್ಧವಾಗಿದೆ."
>
> – ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು



Downloaded From: www.kpscvaani.com

> ರಾಜ್ಯದ ಯುವ ಜನರಿಗೆ ವರದಾನವಾಗಿರುವ ಈ ಸಂಪರ್ಕ ವೇದಿಕೆಯಿಂದ ನಿರುದ್ಯೋಗ ಸಮಸ್ಯೆ ಗಣನೀಯವಾಗಿ ನಿವಾರಣೆಯಾಗುವ ಜೊತೆಗೆ ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರು ಮಾತ್ರವಲ್ಲ, ನೀತಿ ನಿರೂಪಣೆಯಲ್ಲಿ ಸರ್ಕಾರಕ್ಕೂ ನೆರವಾಗಲಿದೆ.
>
> – ಡಾ. ಸಿಎನ್. ಅಶ್ವತ್ಥನಾರಾಯಣ, ಉಪ ಮುಖ್ಯಮಂತ್ರಿಗಳು

ಜೋಡಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಜೂನ್ 29 ರಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಸ್ಕಿಲ್ ಕನೆಕ್ಟ್ ಪೋರ್ಟಲ್ (ಕೌಶಲ್ಯ ಸಂಪರ್ಕ ವೇದಿಕೆ) ಅನ್ನು ಉದ್ಘಾಟಿಸಿದರು.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಉದ್ಯೋಗದಾತರು ಮತ್ತು ಉದ್ಯೋಕಾಂಕ್ಷಿಗಳ ನಡುವೆ ಸಂಪರ್ಕ ಬೆಸೆಯುವ ಸಲುವಾಗಿ ಕೌಶಲ್ಯ ಸಂಪರ್ಕ ವೇದಿಕೆಯನ್ನು ಪ್ರಾರಂಭಿಸಿದೆ. ಕೌಶಲ್ಯ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ವಿವಿಧ ಪಾಲುದಾರರನ್ನು ಜೋಡಿಲು ಈ ಪೋರ್ಟಲ್ ಅನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ವೇದಿಕೆಯಿಂದ ವಲಸೆ ಕಾರ್ಮಿಕರಿಗೆ ಹೆಚ್ಚು ಅನುಕೂಲವಾಗಲಿದೆ. ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರು, ತರಬೇತಿ ಕೇಂದ್ರಗಳು, ಉದ್ಯಮ, ಅಂತರರಾಷ್ಟ್ರೀಯ ಏಜೆನ್ಸಿಗಳು ಹಾಗೂ ಸರ್ಕಾರವನ್ನು ಒಂದು ಗೂಡಿಸುವ ಸಂಪರ್ಕ ಸೇತುವಾಗಿ ಸ್ಕಿಲ್ ಕನೆಕ್ಟ್ ಪೋರ್ಟಲ್ ಕಾರ್ಯನಿರ್ವಹಿಸಲಿದೆ.

ರಾಜ್ಯ ಸರ್ಕಾರವು ಬೇಡಿಕೆ ಆಧಾರಿತ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಆದ್ಯತೆ ನೀಡುತ್ತಿದ್ದು, ನಾಡಿನ ಯುವ ಜನರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ. ಎಲ್ಲೆಲ್ಲಿ ಉದ್ಯೋಗಾವಕಾಶಗಳು ಲಭ್ಯವಿದೆ, ಯಾರಿಗೆ ಕೆಲಸದ ಅಗತ್ಯವಿದೆ ಎಂಬ ಮಾಹಿತಿ ಈ ಜಾಲತಾಣದಲ್ಲಿ ಸಿಗುತ್ತದೆ.

> **ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರು, ತರಬೇತಿ ಪಾಲುದಾರರು ಹಾಗೂ ನೀತಿ ನಿರೂಪಕರ ನಡುವೆ ಸಂಪರ್ಕವನ್ನು ಒದಗಿಸುವ ಈ ವೇದಿಕೆಯಿಂದ ಉದ್ಯೋಗಗಳಿಗೆ ಅನ್ವೇಷಣೆ ಮತ್ತು ಅರ್ಜಿ ಸಲ್ಲಿಸಲು, ಕೌಶಲ್ಯ ತರಬೇತಿ ಪಡೆಯಲು, ಉದ್ಯೋಗ ಮಾರುಕಟ್ಟೆಯ ಬಗ್ಗೆ ಮಾಹಿತಿ, ಆನ್‌ಲೈನ್ ನೇರ ಸಂದರ್ಶನಗಳು, ಆನ್‌ಲೈನ್ ತರಬೇತಿಗಳನ್ನು ಪಡೆದುಕೊಳ್ಳಬಹುದು.**

ಈ ಜಾಲತಾಣದಲ್ಲಿ ಹೆಸರು ನೋಂದಾಯಿಸಿಕೊಳ್ಳುವ ನಿರುದ್ಯೋಗಿ ಯುವಕ ಯುವತಿಯರಿಗೆ ಲಭ್ಯವಿರುವ ಉದ್ಯೋಗಗಳಿಗೆ ಅಗತ್ಯ ತರಬೇತಿಯನ್ನು ನೀಡಿ ಕಂಪನಿಗಳಲ್ಲಿ ಕೆಲಸವನ್ನು ದೊರಕಿಸಿಕೊಡಲಾಗುವುದು.

ಈ ಜಾಲತಾಣದ ಮೂಲಕ ಉದ್ಯೋಗದಾತರು ಅಂದರೆ ಕೈಗಾರಿಕೆಗಳು ಮತ್ತು ಕೈಗಾರಿಕಾ ಸಂಸ್ಥೆಗಳು ತಮಗೆ ಅಗತ್ಯವಿರುವ ಕೌಶಲ್ಯಾಧಾರಿತ ಉದ್ಯೋಗಿಗಳ ಬೇಡಿಕೆಯನ್ನು ಸಲ್ಲಿಸಬಹುದು. ಅವರ ಬೇಡಿಕೆ ಆಧಾರವಾಗಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಉದ್ಯೋಗಕ್ಕೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ಅವರ ವಿದ್ಯಾರ್ಹತೆ, ಕೌಶಲ್ಯಕ್ಕೆ ಅನುಗುಣವಾಗಿ ತರಬೇತಿಯನ್ನು ನೀಡಿ ಸಜ್ಜುಗೊಳಿಸಿ ಉದ್ಯೋಗಿಗಳನ್ನು ಹೊಂದಾಣಿಕೆ ಮಾಡಿಕೊಡುತ್ತದೆ.

ಅಲ್ಲದೆ ಉದ್ಯೋಗದಾತರು ಉದ್ಯೋಗಿ ಆಕಾಂಕ್ಷಿಗಳ ಅರ್ಜಿ ವಿವರವನ್ನು ಇದರ ಮೂಲಕ ವೀಕ್ಷಿಸಬಹುದು. ತಮ್ಮ ಕೈಗಾರಿಕೆಯ ಉದ್ಯೋಗಿಗಳಿಗೆ ಅವಶ್ಯಕತೆ ಇರುವ ನಿರ್ದಿಷ್ಟ ಕೌಶಲ್ಯ ತರಬೇತಿಗಾಗಿ ನಿಗಮವನ್ನು ಕೋರಬಹುದು. ಕೆಎಸ್‌ಡಿಸಿಯಿಂದ ತರಬೇತುಗೊಂಡ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಹುಡುಕಬಹುದು, ಅಲ್ಲದೆ ಈ ವೇದಿಕೆಯ ಮೂಲಕ ಸಂಭಾವ್ಯ ಅಭ್ಯರ್ಥಿಗಳೊಂದಿಗೆ ಆನ್‌ಲೈನ್ ಮತ್ತು ನೇರ ಸಂದರ್ಶನ ನಡೆಸಬಹುದು.

**ಅರ್ಜಿ ಸಲ್ಲಿಸುವ ವಿಧಾನ:**

ಕೌಶಲ್ಯ ಸಂಪರ್ಕ ವೇದಿಕೆಯ ವಿಳಾಸ **https://skillconnect.kaushalkar.com** ಮೂಲಕ ಲಾಗಿನ್ ಆಗಿ ತಮ್ಮ ಪ್ರೊಫೈಲ್‌ಗೆ ಪೂರಕವಾಗುವ ಉದ್ಯೋಗಕ್ಕೆ ಅರ್ಜಿ ಸಲ್ಲಿಸಬಹುದು. ಜೊತೆಗೆ ಕೌಶಲ್ಯತೆಯ ಅಗತ್ಯವಿರುವವರು ಕೆಎಸ್‌ಡಿಸಿಗೆ ಕೌಶಲ್ಯ ತರಬೇತಿಗೆ ಅರ್ಜಿ ಸಲ್ಲಿಸಬಹುದು.



Downloaded From: www.kpscvaani.com




# ಆತ್ಮನಿರ್ಭರತೆ

## ಹಾದಿಯಲ್ಲಿ ಕೋವಿಡ್ ವಿರುದ್ಧ ಕರ್ನಾಟಕದ ಸಾಧನೆ

ಜಡಿಯಪ್ಪ ಗೆದ್ಲಗಟ್ಟಿ

> ಸಾಂಕ್ರಾಮಿಕದ ನಿಯಂತ್ರಣಕ್ಕಾಗಿ ತಂತ್ರಜ್ಞಾನಗಳನ್ನು ಮತ್ತು ಉತ್ಪನ್ನಗಳನ್ನು ಸಮಯೋಚಿತವಾಗಿ ಬಿಡುಗಡೆ ಮಾಡಲು ನಮಗೆ ಸಂತಸ ತಂದಿದೆ ಹಾಗೂ ಇನ್ನೂ ಹೆಚ್ಚಿನ ತಂತ್ರಜ್ಞಾನದ ಸಂಶೋಧನೆಯಲ್ಲಿ ತೊಡಗಿಕೊಳ್ಳಲು ಮತ್ತು ಹೊಸ ಉತ್ಪನ್ನಗಳ ಆವಿಷ್ಕಾರಕ್ಕೆ ಬೆಂಬಲ ಸೂಚಿಸಲಾಗುವುದು.
>
> – ಡಾ. ಇ. ವಿ. ರಮಣ ರೆಡ್ಡಿ
> ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಐಟಿ–ಬಿಟಿ ಮತ್ತು ಬಿ.ಬಿ.ಸಿಯ ಅಧ್ಯಕ್ಷರು

**ಕೋ**ವಿಡ್–19 ರ ಹಿನ್ನಲೆಯಲ್ಲಿ ದೇಶವಾಸಿಗಳಲ್ಲಿ ಉತ್ಸಾಹವನ್ನು ತುಂಬಲು ದೇಶದ ಜನರನ್ನು ಉದ್ದೇಶಿಸಿ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಾಡಿದ ಭಾಷಣದಲ್ಲಿ "ಆತ್ಮನಿರ್ಭರ" ಪದವನ್ನು ಮೊಟ್ಟಮೊದಲು ಬಳಸಿದರು. 2020ರಲ್ಲಿ ಅತ್ಯಂತ ಹೆಚ್ಚು ಜನರು ಈ ಪದದ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಾಡಿದ್ದರು. ನಮ್ಮ ಅಗತ್ಯತೆಗಳನ್ನು ಸ್ವಾವಲಂಬಿಗಳಾಗಿ ನಾವೇ ಪೂರೈಸಿಕೊಳ್ಳುವ ಸ್ವಾವಲಂಬಿ ಬದುಕನ್ನು "ಆತ್ಮನಿರ್ಭರತೆ" ಎನ್ನುತ್ತಾರೆ.

ಈ ಪದದಿಂದ ಉತ್ತೇಜಿತರಾದ ಅನೇಕ ಜನರು ಮತ್ತು ನವೋದ್ಯಮಿಗಳು ತಮ್ಮದೇ ರೀತಿಯಲ್ಲಿ "ಆತ್ಮನಿರ್ಭರ" ಪದವನ್ನು ಅರ್ಥೈಸಿಕೊಂಡು ಇತರರು ಮತ್ತು ಇತರೆ ದೇಶಗಳ ಮೇಲೆ ಅವಲಂಬಿತವಾಗಿದ್ದ ತಮ್ಮ ಬದುಕನ್ನು ತಮ್ಮದೇ ಕೈಯಲ್ಲಿಟ್ಟುಕೊಳ್ಳಲು ಮತ್ತು ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಪ್ರಧಾನಮಂತ್ರಿಗಳ ಆ ಒಂದು ಪದ ಇಂದು ದೇಶದಲ್ಲಿ ಪ್ರತಿ ನಾಗರೀಕನಲ್ಲಿ ಒಂದು ರೀತಿಯ ಸಂಚಲನೆಯನ್ನು ಪ್ರಾರಂಭಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇತ್ತೀಚಿಗೆ ಚೀನಾದ ಕೆಲವು ಮೊಬೈಲ್ ಆ್ಯಪ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದಾಗ ಜನಸಾಮನ್ಯರಲ್ಲಿ



Downloaded From: www.kpscvaani.com




**ಈ ತಂತ್ರಜ್ಞಾನ ಉತ್ಪನ್ನಗಳನ್ನು ಆವಿಷ್ಕರಿಸಿದ ಎಲ್ಲಾ ವಿಜ್ಞಾನಿಗಳಿಗೆ ಮತ್ತು ತಂತ್ರಜ್ಞರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಹಾಗೂ ಈ ನಿಟ್ಟಿನಲ್ಲಿ ಅಗತ್ಯ ಪ್ರಚಾರ ಮತ್ತು ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಅವರುಗಳಿಗೆ ಹೆಚ್ಚಿನ ಬೆಂಬಲ ನೀಡಲಾಗುವುದು.**

**ಮೀನಾ ನಾಗರಾಜ್**
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ನಿರ್ದೇಶಕರು

ಒಂದು ರೀತಿಯ ತಳಮಳ ಪ್ರಾರಂಭವಾಯಿತು. ಕೋವಿಡ್-19 ರ ಹಿನ್ನಲೆಯಲ್ಲಿ ಅನೇಕ ವಿದೇಶಿ ಆ್ಯಪ್‌ಗಳನ್ನು ಮತ್ತು ತಂತ್ರಜ್ಞಾನದ ಉತ್ಪನ್ನಗಳನ್ನು ನಾವು ಬಳಸುತ್ತಿದ್ದೆವು. ಇದರಿಂದ ಜಗತ್ತಿನ ಅತ್ಯುತ್ತಮ ಐಟಿ ಮತ್ತು ತಂತ್ರಜ್ಞಾನ ಆವಿಷ್ಕಾರ ನಗರಗಳಲ್ಲಿ ಒಂದಾಗಿರುವ ಬೆಂಗಳೂರಿನ ನವೋದ್ಯಮಿಗಳು ನಮ್ಮ ದೇಶವಾಸಿಗಳು ಬಳಸುತ್ತಿದ್ದ ಕೋವಿಡ್ ಸಂಬಂಧಿತ ವಿದೇಶಿ ತಂತ್ರಜ್ಞಾನವನ್ನು ಮತ್ತು ಉತ್ಪನ್ನಗಳನ್ನು ದೇಶಿಯವಾಗಿ ಅಭಿವೃದ್ಧಿ ಪಡಿಸಲು ಪಣತೊಟ್ಟರು.

ಕೋವಿಡ್-19 ಜಾಗತಿಕ ಹೆಮ್ಮಾರಿ ವೈರಾಣುವನ್ನು ನಿಯಂತ್ರಿಸಲು ನಮ್ಮ ದೇಶದಲ್ಲಿ ವಿದೇಶಿ ತಂತ್ರಜ್ಞಾನದ ಉತ್ಪನ್ನಗಳನ್ನು ಉಪಯೋಗಿಸಲಾಗುತ್ತಿದ್ದ ಆರು ಪ್ರಮುಖ ಉತ್ಪನ್ನಗಳನ್ನು ಇದೀಗ ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ ಬೆಂಗಳೂರಿನ ಸಂಶೋಧಕರು ಮತ್ತು ಅದರಲ್ಲೂ ಕನ್ನಡದ ವಿಜ್ಞಾನಿಗಳು ಕರ್ನಾಟಕದ ಈ ಸಾಧನೆಯ ಮೂಲಕ ದೇಶ-ವಿದೇಶಗಳ ವಿಜ್ಞಾನಿಗಳು ಹುಬ್ಬೇರಿಸುವಂತೆ ಮಾಡಿದ್ದಾರೆ. ಇದರಿಂದ ಕೋವಿಡ್ ವಿರುದ್ಧದ ಸಮರದಲ್ಲಿ ರಾಜ್ಯಕ್ಕೆ ಮಹತ್ವದ ಮುನ್ನಡೆ ಸಿಕ್ಕಿದೆ. ಜಗತ್ತು ಕೋವಿಡ್‌ನಿಂದ ನಲುಗಿರುವಾಗ ಭಾರತ ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಎರಡನೆ ದೇಶವಾಗಿದ್ದರು ಸಹ ಇಲ್ಲಿ ಅಷ್ಟೊಂದು ಭೀಕರತೆಯನ್ನು ಬೀರಲಿಲ್ಲ, ಅದರಲ್ಲೂ ಕರ್ನಾಟಕ ರಾಜ್ಯ ದೇಶದಲ್ಲಿಯೇ ಕೋವಿಡ್ ನಿಯಂತ್ರಣದಲ್ಲಿ ಮಾದರಿ ರಾಜ್ಯವಾಗಿ ಕಾಣಿಸಿಕೊಂಡಿದೆ.

ಕಳೆದ ಹತ್ತಾರು ವರ್ಷಗಳಿಂದ ದೇಶದ ಮಾಹಿತಿ ತಂತ್ರಜ್ಞಾನದ ರಾಜಧಾನಿಯಾಗಿ ಗುರುತಿಸಿಕೊಂಡಿರುವ ಕರ್ನಾಟಕ ರಾಜ್ಯದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿರುವ ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರ (ಬಿ.ಬಿ.ಸಿ)ದ ನೇತೃತ್ವದಲ್ಲಿ ಸಂಶೋಧನೆಯಲ್ಲಿ ತೊಡಗಿದ ವಿವಿಧ ನವೋದ್ಯಮಿಗಳು ಈ ಉತ್ಪನ್ನಗಳನ್ನು ಅಭಿವೃದ್ಧಿ ಪಡಿಸಿದ್ದು, ಇವರ ಈ ಸಾಧನೆಯಿಂದಾಗಿ ವಿದೇಶಿ ಅವಲಂಬನೆ ತಗ್ಗಿಸಬಹುದಾಗಿದ್ದು, ಮುಂದೆ ಅನೇಕ ಹೊಸ ಸಂಶೋಧನೆಗಳಿಗೆ ಸ್ಫೂರ್ತಿಯಾಗಿದೆ. ಈ ಆರು ಉತ್ಪನ್ನಗಳು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಮ್‌ಆರ್) ಮಾನ್ಯತೆಯನ್ನು ಸಹ ಪಡೆದಿವೆ.

ಬೆಂಗಳೂರಿನಲ್ಲಿ ಜುಲೈ 7 ರಂದು ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಹಾಗೂ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಅವರು ಈ ಉತ್ಪನ್ನಗಳನ್ನು ಬಿಡುಗಡೆ ಮಾಡಿದ ನಂತರ ಮಾತನಾಡಿ ಬೆಂಗಳೂರು ಬಯೋ ಇನ್ನೋವೇಷನ್ ಕೇಂದ್ರದ (ಬಿ.ಬಿ.ಸಿ) ವತಿಯಿಂದ ನವೋದ್ಯಮಿಗಳಿಂದ ಅಭಿವೃದ್ಧಿ ಪಡಿಸಲಾಗಿರುವ ಈ ನವೀನ ತಂತ್ರಜ್ಞಾನದ ಉತ್ಪನ್ನಗಳು ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣಕ್ಕಾಗಿ ಪರಿಹಾರಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕರ್ನಾಟಕವು ಮುಂಚೂಣಿಯ ರಾಜ್ಯವಾಗಿ ಹೊರಹೊಮ್ಮಿದೆ ಎಂಬುದನ್ನು ತೋರಿಸುತ್ತದೆ. ಇದು ರಾಜ್ಯದಲ್ಲಿ ಸದೃಢವಾಗಿರುವ ನಾವೀನ್ಯತಾ ಪೂರಕ ಪರಿಸರ ವ್ಯವಸ್ಥೆಯ ಫಲಿತವಾಗಿದೆ ಎಂದಿದ್ದಾರೆ.



Downloaded From: www.kpscvaani.com

ಗಾಂಧೀಜಿ ಅವರು ಕಂಡ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸ್ವದೇಶಿ ಉತ್ಪನ್ನಗಳನ್ನು ಉತ್ಪಾದಿಸುವ ಮೂಲಕ ವಿದೇಶಗಳ ಮೇಲೆ ಅವಲಂಬನೆಯಾಗದಿರುವಂತೆ ನೀಡಿದ ಕರೆಗೆ ಕರ್ನಾಟಕದ ವಿಜ್ಞಾನಿಗಳು ಮತ್ತು ತಂತ್ರಜ್ಞರು ಕೋವಿಡ್-19ಗೆ ಸಂಬಂಧಿಸಿದ ಉತ್ಪನ್ನಗಳನ್ನು ಉತ್ಪಾದಿಸಿ ಸಾಧನೆ ಮಾಡಿದ್ದಾರೆ.

ಈ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ನವೋದ್ಯಮಗಳು ಉತ್ಪನ್ನಗಳನ್ನು ಅತ್ಯಲ್ಪ ಸಮಯದಲ್ಲಿಯೇ ತಯಾರಿಸಿದ್ದಾರೆ. ಇದು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಇಲಾಖೆಗೆ ಸೇರಿದ ಕಿಟ್ಸ್ ಸಂಸ್ಥೆಯ ಬೆಂಬಲವಿರುವ ಬಿ.ಬಿ.ಸಿಯಿಂದ ಕಲ್ಪಿಸಿರುವ ಸೌಲಭ್ಯ, ಪರಿಪೋಷಣೆ, ಹಣಕಾಸು ಮತ್ತು ಪೂರಕ ಪರಿಸರ ವ್ಯವಸ್ಥೆ ನಿರ್ಮಾಣದ ಪರಿಶ್ರಮದಿಂದಾಗಿ ಫಲ ನೀಡುತ್ತಿರುವುದನ್ನು ತೋರಿಸುತ್ತದೆ ಎಂದು ಹೇಳಿದರು. ಬಿ.ಬಿ.ಸಿಯ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಜಿತೇಂದ್ರ ಕುಮಾರ್ ಅವರು ಅಭಿಪ್ರಾಯಪಡುತ್ತಾರೆ.

**ಅನಾವರಣಗೊಳಿಸಲಾಗಿರುವ ಉತ್ಪನ್ನಗಳು:**

**ಶೀಲೆಡೆಕ್ಸ್ – 24 :** Biofi ಸಂಸ್ಥೆಯ ರವಿಕುಮಾರ್‌ರವರಿಂದ ಅಭಿವೃದ್ಧಿ ಪಡಿಸಲಾಗಿರುವ Shieldex 24–ಇದೊಂದು COVID-19 sterilization ಗಾಗಿರುವ UV-ROS ಬಾಕ್ಸ್.

ಇದೊಂದು ಮೈಕ್ರೋವೇವ್ ಮಾದರಿ ಬಾಕ್ಸ್ ರೀತಿಯಲ್ಲಿದ್ದು, ವಿವಿಧ ಗಾತ್ರಗಳಲ್ಲಿ ಲಭ್ಯವಿರುವ ಇದು ಫ್ರಿಜ್ ಗಾತ್ರದಲ್ಲೂ ಸಹ ಲಭ್ಯವಿದೆ ಎಂದು ತಿಳಿಸಿದ್ದಾರೆ. ಕೋವಿಡ್ - 19 ವೈರಾಣುವನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡುವ ಸಾಧನ ಇದಾಗಿದ್ದು, ಇದರಲ್ಲಿ ಅಲ್ಟ್ರಾವೈಲೇಟ್ ರೇಸ್ ಇರುತ್ತದೆ. ಈ ವಿಕಿರಣಗಳು ಬಿದ್ದಾಗ ವೈರಸ್ ಕೇವಲ 15 ಸೆಕೆಂಡುಗಳಲ್ಲಿ ಸಾಯುತ್ತದೆ. ಜನರು ಮುಟ್ಟುವ ಯಾವುದೇ ವಸ್ತುವಿನಲ್ಲಿ ವೈರಸ್ ಇರಬಹುದು ಎನ್ನುವ ಅನುಮಾನವನ್ನು ಇದು ದೂರ ಮಾಡುತ್ತದೆ. ಯಾವುದೇ ವಸ್ತುಗಳನ್ನು ಈ ಬಾಕ್ಸ್‌ನಲ್ಲಿ ಹಾಕಿದಾಗ ವೈರಾಣುಗಳನ್ನು ಸಾಯಿಸುತ್ತದೆ. ಇದನ್ನು ಕಚೇರಿ, ಮನೆ ಹಾಗೂ ಜನನಿಬಿಡ ಸ್ಥಳಗಳ ಪ್ರವೇಶ ದ್ವಾರಗಳಲ್ಲಿ ಬಳಸಬಹುದಾಗಿದೆ.

**ಫ್ಲೋರೇಸೆನ್ಸ್ ಪ್ರೋಬ್ಸ್:** VNIR ಸಂಸ್ಥೆಯ ಡಾ: ಗೋವಿಂದರಾಜನ್ ಮತ್ತು ಡಾ: ಮೆಹೆರ್ ಪ್ರಕಾಶ್‌ರವರುಗಳಿಂದ ಅಭಿವೃದ್ಧಿಪಡಿಸಲಾಗಿರುವ Florescence probes ಮತ್ತು PCR mix – ಇದು RT-PCR ಅನ್ನು ಪತ್ತೆ ಮಾಡಲಿದೆ. ಇದು ಕೋವಿಡ್ ಕಿಟ್‌ನಲ್ಲಿ ಇರುವ ಪ್ರಮುಖ ಅಂಗವಾಗಿದ್ದು, ವೈರಾಣುವನ್ನು ಪತ್ತೆ ಹಚ್ಚುವ ಸಾಧನವಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಈ ಉತ್ಪನ್ನವು ಬಹಳ ದುಬಾರಿ ಮತ್ತು ಅಷ್ಟೇ ಸೂಕ್ಷ್ಮವೂ ಹೌದು. ದೇಶಿಯವಾಗಿ ಅಭಿವೃದ್ಧಿ ಪಡಿಸಿರುವ ಈ ಉತ್ಪನ್ನವು ಗುಣಮಟ್ಟದಿಂದ ಕೂಡಿದೆ. ಭಾರತದಲ್ಲಿ ಕೋವಿಡ್ ಕಿಟ್ ತಯಾರಿಸುವ ಕಂಪನಿಗಳಿಗೆ ಈ ಸಂಶೋಧನೆ ವರದಾನವಾಗಿದೆ.

**ಭ್ರೂಣ ನಿಗಾ ಯಂತ್ರ:** Janitri ಸಂಸ್ಥೆಯ ಡಾ: ಅರುಣ್ ಅಗ್ರವಾಲ್, ಇವರಿಂದ ಅಭಿವೃದ್ಧಿಪಡಿಸಲಾಗಿರುವ Daksh – remote foetal monitoring device. ಗರ್ಭಿಣಿಯರು ತಪಾಸಣೆಗಾಗಿ ಹಲವು ಬಾರಿ ವೈದ್ಯರನ್ನು ಕಾಣಲು ಆಸ್ಪತ್ರೆಗಳಿಗೆ ತೆರಳುವುದನ್ನು ತಪ್ಪಿಸಲು ಈ ಉಪಕರಣವನ್ನು ಅಭಿವೃದ್ಧಿ ಪಡಿಸಲಾಗಿದೆ. ಚಿಕ್ಕ ಪಟ್ಟಿಯಾಕಾರದ ಈ ಉಪಕರಣದ ಮೂಲಕ ಭ್ರೂಣದ ಹೃದಯ ಬಡಿತವನ್ನು ತಿಳಿಯಬಹುದಾಗಿದೆ. ಗರ್ಭಿಣಿಯರು ಮನೆಯಲ್ಲಿ ಅಥವಾ ವರ್ಚುವಲ್ಲಾಗಿ ಚಿಕಿತ್ಸೆ ಪಡೆಯಬಹುದಾಗಿದೆ.

**ವೈರಲ್ ಟ್ರಾನ್ಸ್ ಪೋರ್ಟ್ ಮೀಡಿಯಾ (ವಿಟಿಎಂ) :** IBAB ಸಂಸ್ಥೆಯ Deno Bio labs ನ ಶ್ರೀ ಮಂಜುನಾಥ ಮತ್ತು ಶ್ರೀ ದಿನೇಶ್‌ರವರುಗಳಿಂದ ಅಭಿವೃದ್ಧಿ ಪಡಿಸಲಾಗಿರುವ Deconto VTM – Viral Transport Media . ಕೋವಿಡ್ ವೈರಾಣುವನ್ನು ಪತ್ತೆ ಹಚ್ಚಲು ಸಂಗ್ರಹಿಸುವ ಗಂಟಲು ದ್ರವ್ಯವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಪ್ರಕ್ರಿಯೆಯಲ್ಲಿ ವೈರಾಣುವನ್ನು ಜೀವಂತವಾಗಿಡುವಲ್ಲಿ ಈ ಸಾಧನವನ್ನು ಬಳಸಲಾಗುತ್ತದೆ. ಇದೊಂದು ಅತ್ಯಂದ ದುಬಾರಿ ಹಾಗೂ ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದ ಉತ್ಪನ್ನವಾಗಿತ್ತು.

**ಕೋವ್ ಅಸ್ತ್ರ:** Aindra ಸಂಸ್ಥೆಯ ಶ್ರೀ ಆದರ್ಶ್ ನಟರಾಜನ್‌ರವರಿಂದ ಅಭಿವೃದ್ಧಿ ಪಡಿಸಲಾಗಿರುವ Cov-Astr- ಕೋವಿಡ್-19 ಪತ್ತೆಗಾಗಿರುವ ಕೃತಕ ಬುದ್ಧಿಮತ್ತೆ (Artificial Interlligence) ಆಧಾರಿತ ಸಾಧನ.

ಈ ಉತ್ಪನ್ನದ ಮೂಲಕ ಒಬ್ಬ ವ್ಯಕ್ತಿಗೆ ಕೋವಿಡ್ ಪಾಸಿಟಿವ್ ಇರುವುದನ್ನು ತುಂಬಾ ಸುಲಭ ಹಾಗೂ ಸರಳವಾಗಿ ಕಂಡುಹಿಡಿಯಬಹುದಾಗಿದೆ. ಎದೆಯ ಭಾಗದ ಎಕ್ಸ್ ರೇ ಮೂಲಕವೇ ವೈರಸ್‌ನ ನಿಖರ ಮಾಹಿತಿ ತಿಳಿಯಬಹುದಾಗಿದೆ. ಇದೊಂದು ಕೃತಕ ಬುದ್ಧಿ ಮತ್ತು ತಂತ್ರಜ್ಞಾನ ಒಳಗೊಂಡ ಸಾಧನವಾಗಿದೆ.

**ಆಂಟಿ ಮೈಕ್ರೋಬಿಯಲ್ ಫೇಸ್ ವಾಷ್:** Amtrimed ಸಂಸ್ಥೆಯ ಡಾ: ಹೃಶಿಕೇಶ್ ದಾಮ್ಲೆರವರಿಂದ ಅಭಿವೃದ್ಧಿಪಡಿಸಲಾಗಿರುವanti-microbial face wash.

ಇದೊಂದು ಗಿಡಮೂಲಿಕೆಗಳನ್ನು ಬಳಸಿ ತಯಾರಿಸಲಾದ ಪಕ್ಕಾ ದೇಶಿ ಉತ್ಪನ್ನವಾಗಿದ್ದು, ಕೋವಿಡ್ ಸೇರಿದಂತೆ ಮುಖದ ಮೂಲಕ ದೇಹ ಸೇರುವ ವೈರಾಣುಗಳನ್ನು ಕೆಲವೇ ಸೆಕೆಂಡುಗಳಲ್ಲಿ ನಾಶ ಮಾಡಬಹುದಾದ ಮುಖ ತೊಳೆಯಲು ಬಳಸುವ ಉತ್ಪನ್ನವಾಗಿದೆ.



Downloaded From: www.kpscvaani.com

# ಪ್ರಮುಖ ಗಣ್ಯರೊಂದಿಗೆ ಮುಖ್ಯಮಂತ್ರಿಗಳು



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ



ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರೊಂದಿಗೆ



ಕೇಂದ್ರ ಜವಳಿ ಸಚಿವೆ ಸ್ಮೃತಿ ಇರಾನಿ ಅವರೊಂದಿಗೆ



ಕೇಂದ್ರ ಗೃಹಸಚಿವ ಅಮಿತ್ ಷಾ ಅವರೊಂದಿಗೆ




ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಖಾತೆ ಸಚಿವರಾದ
ನಿತಿನ್ ಗಡ್ಕರಿ ಅವರೊಂದಿಗೆ




ಕೇಂದ್ರ ರಕ್ಷಣಾ ಸಚಿವ ರಾಜ್‌ನಾಥ್‌ಸಿಂಗ್ ಅವರೊಂದಿಗೆ



Downloaded From: www.kpscvaani.com




Downloaded From: www.kpscvaani.com



ಜುಲೈ 26, 2019 ರಂದು ರಾಜಭವನದ ಗಾಜಿನ ಮನೆಯಲ್ಲಿ ರಾಜ್ಯಪಾಲರಾದ ವಜುಭಾಯಿ ವಾಲಾ ಅವರಿಂದ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭ.



ಆಗಸ್ಟ್ ಮಾಹೆಯ ಅಂತ್ಯದಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯನ್ನು ಹೆಲಿಕ್ಯಾಪ್ಟರ್ ಮೂಲಕ ವೀಕ್ಷಿಸುತ್ತಿರುವುದು.



ಮಹದಾಯಿ ನದಿ ನೀರು ಹಂಚಿಕೆ ವಿಚಾರವಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಂದರ್ಭ.



ಆಗಸ್ಟ್ 15, 2019 ರಂದು ಮಾಣಿಕ್ ಷಾ ಪೆರೇಡ್ ಗ್ರೌಂಡ್‌ನಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ಮಾಡಿದ ಸಂದರ್ಭ.



ಪ್ರವಾಹಪೀಡಿತ ಶಿವಮೊಗ್ಗ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭ.



ಆಗಸ್ಟ್ 29 ರಂದು ಕ್ರೀಡಾ ದಿನದ ಅಂಗವಾಗಿ ಫಿಟ್ ಇಂಡಿಯಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂದರ್ಭ.



Downloaded From: www.kpscvaani.com






ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಸಂದರ್ಭದಲ್ಲಿ ವಿಶೇಷ ಚೇತನ ಯುವಕರೊಬ್ಬರ ಅಹವಾಲು ಆಲಿಸುತ್ತಿರುವುದು.

ಮುಖ್ಯಮಂತ್ರಿಗಳು ಕಾವೇರಿ ನದಿಗೆ ಬಾಗಿನ ಅರ್ಪಿಸುತ್ತಿರುವುದು.




ಅಕ್ಟೋಬರ್ 2 ರಂದು ಪ್ರೊ.ಜಿ.ಎಸ್.ಜಯದೇವರಿಗೆ 2019ನೇ ಸಾಲಿನ ಗಾಂಧಿಸೇವಾ ಪ್ರಶಸ್ತಿ ನೀಡಿ ಗೌರವಿಸಿದ ಸಂದರ್ಭ.




Downloaded From: www.kpscvaani.com



ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ 2019ರ ಮೈಸೂರು ದಸರಾಗೆ ಚಾಲನೆ ನೀಡಿದ ಸಂದರ್ಭ.



ಸರ್ಕಾರ ಅಧಿಕಾರಕ್ಕೆ ಬಂದು ನೂರು ದಿನಗಳು ಪೂರ್ಣಗೊಂಡ ಸಂದರ್ಭ.



ನವೆಂಬರ್ 22 ರಂದು ಕಲಬುರಗಿಗೆ ನಾಗರಿಕ ವಿಮಾನ ಹಾರಾಟಕ್ಕೆ ಚಾಲನೆ ನೀಡಿದ ಸಂದರ್ಭ.




Downloaded From: www.kpscvaani.com



ಜನವರಿ 3 ರಂದು ಜರುಗಿದ 107ನೇ ಭಾರತೀಯ
ವಿಜ್ಞಾನ ಕಾಂಗ್ರೆಸ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸಂದರ್ಭ.



ಜನವರಿ 2 ರಂದು ತುಮಕೂರಿನಲ್ಲಿ ಜರುಗಿದ
ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಕಾರ್ಯಕ್ರಮದಲ್ಲಿ
ಪಾಲ್ಗೊಂಡಿದ್ದ ಸಂದರ್ಭ.



ಮಾರ್ಚ್ 5 ರಂದು
2020–21ನೇ ಸಾಲಿನ
ಬಜೆಟ್ ಮಂಡಿಸುತ್ತಿರುವುದು.




ಜನವರಿ 20 ರಂದು ದಾವೋಸ್‌ನಲ್ಲಿ ಏರ್ಪಡಿಸಿದ
'ವಿಶ್ವ ಆರ್ಥಿಕ ವೇದಿಕೆ ದಾವೋಸ್ – 2000' ಯಲ್ಲಿ
ಭಾಗವಹಿಸಿದ್ದ ಸಂದರ್ಭ.

Downloaded From: www.kpscvaani.com





ಕೋವಿಡ್–19 ಹಿನ್ನೆಲೆಯಲ್ಲಿ ಲಾಕ್‌ಡೌನ್ ಸಂದರ್ಭದಲ್ಲಿ ವ್ಯಾಪಾರಿಗಳೊಂದಿಗೆ ಸಮಾಲೋಚನೆ ನಡೆಸುತ್ತಿರುವುದು.

ಫೆಬ್ರವರಿ 14 ರಂದು ಹುಬ್ಬಳ್ಳಿಯಲ್ಲಿ ಮೊಟ್ಟ ಮೊದಲ ಬಾರಿಗೆ ಉತ್ತರ ಕರ್ನಾಟಕದಲ್ಲಿ ಜರುಗಿದ "ಇನ್ವೆಸ್ಟ್ ಕರ್ನಾಟಕ – 2020" ಯಲ್ಲಿ ಭಾಗವಹಿಸಿದ ಸಂದರ್ಭ.



ಲಾಕ್‌ಡೌನ್ ವೇಳೆಯಲ್ಲಿ ಸಾರ್ವಜನಿಕರ ಸಮಸ್ಯೆಯನ್ನು ಆಲಿಸುತ್ತಿರುವುದು.



ಫೆಬ್ರವರಿ 26 ರಂದು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಉದ್ಘಾಟಿಸುತ್ತಿರುವುದು.



Downloaded From: www.kpscvaani.com




ಮುಖ್ಯಮಂತ್ರಿಗಳು ರೈತರಿಗೆ ಪ್ರಮಾಣಿತ ಬಿತ್ತನೆ ಬೀಜವನ್ನು ವಿತರಿಸುತ್ತಿರುವುದು



ಮಾರ್ಚ್ 22 ರಂದು ಕೊರೊನಾ ನಿಗ್ರಹದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳಿಗೆ ಚಪ್ಪಾಳೆ ತಟ್ಟುವ ಮೂಲಕ ಅಭಿನಂದಿಸುತ್ತಿರುವುದು.



ಪ್ರಧಾನಮಂತ್ರಿ ಅವರೊಂದಿಗೆ ಕೋವಿಡ್ ನಿರ್ವಹಣೆ ಕುರಿತ ವೀಡಿಯೋ ಸಂವಾದದಲ್ಲಿ ಪಾಲ್ಗೊಂಡಿರುವುದು.



Downloaded From: www.kpscvaani.com



ಜೂನ್ 26 ರಂದು ಕೋವಿಡ್ 19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಸಚಿವರು, ಸಂಸದರು, ಶಾಸಕರೊಂದಿಗೆ ಸಭೆ ನಡೆಸಿ ಚರ್ಚಿಸುತ್ತಿರುವುದು.



ಕೊರೊನಾ ನಿಯಂತ್ರಣಕ್ಕೆ ಬಿ.ಬಿ.ಎಂ.ಪಿ. ಸ್ಥಾಪಿಸಿರುವ ವಾರ್‌ರೂಂಗೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.



ಜೂನ್ 18 ರಂದು ಮಾಸ್ಕ್ ದಿನಾಚರಣೆ ಅಂಗವಾಗಿ ವಿಧಾನಸೌಧದ ಮುಂದೆ ಮಾಸ್ಕ್ ಧರಿಸುವ ಬಗ್ಗೆ ಅರಿವು ಮೂಡಿಸುತ್ತಿರುವುದು.



Downloaded From: www.kpscvaani.com



# ಕೋವಿಡ್ 19 ಹಾಗೂ ಮನೋ ಸಾಮಾಜಿಕ ಸವಾಲುಗಳು

ಡಾ॥ ಸಂಧ್ಯಾಕಾವೇರಿ.ಕೆ

ಜನವರಿ 2020ರಲ್ಲಿ ಅಂತರರಾಷ್ಟ್ರೀಯ ತುರ್ತು ಆರೋಗ್ಯ ಸನ್ನಿವೇಶ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್ 19 ಅಥವಾ ಕೊರೊನಾ ವೈರಸ್ ಸೋಂಕು ಹರಡುವಿಕೆಯ ಸಂದರ್ಭವನ್ನು ಘೋಷಣೆ ಮಾಡಿತು. ಇದರ ಹರಡುವಿಕೆಯ ಭೀತಿ ಬಹಳಷ್ಟು ಜನರಲ್ಲಿ ಭಯ, ಆತಂಕದಂತಹ ಮಾನಸಿಕ ತೊಂದರೆಗಳನ್ನು ಉಂಟುಮಾಡಿದೆ. ಅದರಂತೆಯೇ, ವೈರಾಣು ತಡೆಗಟ್ಟುವಿಕೆಗಾಗಿ ದೇಶಾದ್ಯಂತ ಅನುಸರಿಸಿದ ಲಾಕ್‌ಡೌನ್‌ನ ಪರಿಣಾಮದಿಂದ ಉದ್ಯೋಗ ಕಳೆದುಕೊಂಡು, ಆರ್ಥಿಕ ಸಂಕಷ್ಟದಿಂದ ಬಹಳಷ್ಟು ಜನರು ಮಾನಸಿಕವಾಗಿ ದುಃಖ, ಹತಾಶೆಯಂತಹ ಭಾವನೆಗಳನ್ನು ಅನುಭವಿಸುತ್ತಿದ್ದಾರೆ. ಭವಿಷ್ಯದ ಕುರಿತಾದ ಅತಂತ್ರ ಸ್ಥಿತಿ, ವಿದ್ಯಾರ್ಥಿಗಳನ್ನು, ಯುವಜನರನ್ನು, ಪ್ರೌಢರನ್ನು ಗಾಬರಿಗೊಳಿಸುತ್ತಿದೆ. ಬೇರೆ ಬೇರೆ ರೀತಿಯ ತೀವ್ರ ಆರೋಗ್ಯ ಸಮಸ್ಯೆ ಉಳ್ಳವರೂ, ವಯೋವೃದ್ಧರೂ ಕೋವಿಡ್-19 ರ ಸೋಂಕು ತಗುಲಿದಲ್ಲಿ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳಿಂದ ಚಿಂತೆಗೊಳಗಾಗಿದ್ದಾರೆ.

ಹೀಗೇ, ಕೇವಲ ವ್ಯಕ್ತಿಗೆ ದೈಹಿಕವಾಗಿ ಬಾಧೆ ಕೊಡಬಹುದಾದ ಈ ವೈರಾಣು, ಹಲವಾರು ಜನರನ್ನು ಮಾನಸಿಕವಾಗಿ ಚಿಂತನೆಗೆ ಒಳಪಡಿಸುತ್ತಿರುವುದಂತೂ ಸತ್ಯ.

ಹೀಗೆ ಆಪ್ತ ಸಮಾಲೋಚನೆಗಾಗಿ ದೂರವಾಣಿ ಕರೆ ಮಾಡಿದ ಸುಮಾರು 35 ವರ್ಷದ ಮಹಿಳೆಯೊಬ್ಬರು ತನ್ನ ಮನೆಯ ಪಕ್ಕದ ಬೀದಿಯು 'ಸೀಲ್‌ಡೌನ್' ಆಗಿರುವುದರಿಂದ ತನಗೇ ಸೋಂಕು ಬಂದರೆ ಎಂಬ ಆತಂಕಕ್ಕೆ ಒಳಗಾಗಿದ್ದೇನೆ ಎಂದರು. 4-5 ದಿನಗಳಿಂದ ನಿದ್ದೆ ಬರುತ್ತಿಲ್ಲವೆಂದೂ, ಮನೆ ಒಳಗೇ ಇದ್ದರೂ ತಾನು ತನ್ನ ಮನೆ ಮಕ್ಕಳೂ ಸೋಂಕಿಗೆ ಒಳಗಾದರೆ ಗತಿ ಏನು ಎಂದು ಭಯವಾಗುತ್ತಿದೆ ಎಂದರು. ಇಂತಹ ಯೋಚನೆ ಬಂದಾಗ ಹೃದಯ ಬಡಿತ ಏರಿ, ಕೈಕಾಲು ನಡುಗಿ, ವಾಕರಿಕೆ, ತಲೆನೋವು, ತಲೆಭಾರ ಇತ್ಯಾದಿ ತೊಂದರೆಗಳಾಗುತ್ತಿವೆ ಎಂದು ಹೇಳಿಕೊಂಡರು. ಪ್ರತೀ ದಿನ ದೂರವಾಣಿಯಲ್ಲಿ ಸಮಾಧಾನ ಹೇಳಿ, ಧನಾತ್ಮಕ ಚಿಂತನೆಗೆ ಪ್ರೋತ್ಸಾಹಿಸಿ, ಮನೆಯ ಎಲ್ಲರೊಂದಿಗೆ ತನ್ನ ಅನಿಸಿಕೆಗಳನ್ನು ಹಂಚಿಕೊಂಡು ಚಟುವಟಿಕೆಯಿಂದ ಇರಲು ಪ್ರೇರೇಪಿಸಿದ ಮೇಲೆ ಆಕೆ ಆತಂಕದಿಂದ ಹೊರಬಂದರು. ಒಂದು ಸಂಶೋಧನೆಯ ಪ್ರಕಾರ ಈ ಕೋವಿಡ್ 19 ರ ಹರಡುವಿಕೆಯ ಭೀತಿ ಹಾಗೂ ಆತಂಕಕ್ಕೆ 70% ಕ್ಕಿಂತಲೂ ಹೆಚ್ಚು ಜನರು ಒಳಗಾಗುತ್ತಿದ್ದಾರೆ ಎನ್ನಲಾಗಿದೆ.

ಕೋವಿಡ್ 19 ರ ಹರಡುವಿಕೆಯನ್ನು ತಡೆಗಟ್ಟಲು ಅನುಸರಿಸುತ್ತಿರುವ ಬದಲಾದ ಜೀವನಶೈಲಿಯೂ ಸುಮಾರು 90% ಜನರಿಗೆ ಮಾನಸಿಕ ಒತ್ತಡವನ್ನು ಉಂಟುಮಾಡುತ್ತಿದೆ. ಮಾಸ್ಕ್ ಬಳಕೆ, ಪದೇ ಪದೇ ಕೈತೊಳೆಯುವುದು ಹಾಗೂ ಸಾಮಾಜಿಕ ಅಂತರವು ಇಂದು ಅನಿವಾರ್ಯ. ಆದರೆ ಸಾಮಾಜಿಕ ಅಂತರದಿಂದ ಒಂಟಿತನವನ್ನು ಅನುಭವಿಸಿ ಮಾನಸಿಕ ವೇದನೆಗೆ ಒಳಗಾಗುವವರಿದ್ದಾರೆ. 17 ವರ್ಷದ ಬಾಲಕಿಯೊಬ್ಬಳು ಕರೆಮಾಡಿ ತನ್ನ ಮನೆಯಲ್ಲಿ ಹಿರಿಯರೆಲ್ಲ ಕೆಲಸಕ್ಕೆ ತೆರಳುತ್ತಿದ್ದಾರೆ. ತನಗೆ ಕಾಲೇಜು ಇನ್ನೂ ಪ್ರಾರಂಭವಾಗಿಲ್ಲ. ಯಾವ ಸ್ನೇಹಿತರನ್ನೂ ಭೇಟಿ ಮಾಡದೆ, ಒಬ್ಬಂಟಿ ಎಂದು ಕಸಿವಿಸಿಯಾಗುತ್ತಿದೆ. ಹೇಗೆ ಸಮಯ ಕಳೆಯಲಿ ಎಂದು ಕೇಳಿದಳು. ಅವಳಿಗೆ ಆಪ್ತಸಮಾಲೋಚನೆ ನೀಡಿ, ದಿನನಿತ್ಯದ ವಿವಿಧ ಚಟುವಟಿಕೆಗಳು, ಒಳ್ಳೆಯ ಹವ್ಯಾಸಗಳು ಇತ್ಯಾದಿಗಳ ಕುರಿತು ಚರ್ಚಿಸಲಾಯಿತು. ಹಾಗೆಯೇ ಆತ್ಮೀಯ ಸ್ನೇಹಿತೆಯರಿಗೆ ಕರೆಮಾಡಿ, ಪಾಠ ಹಾಗೂ ಪಠ್ಯೇತರ ವಿಷಯಗಳನ್ನು ಚರ್ಚಿಸಲು ಪ್ರೇರೇಪಿಸಲಾಯಿತು. ಆಕೆ ಇತ್ತೀಚೆಗೆ ಮತ್ತೆ ಕರೆಮಾಡಿ ಅಂತರವನ್ನು ಕಾಯ್ದುಕೊಂಡು ತನ್ನ ನೆರೆಮನೆಯ ಪುಟ್ಟಿಯೊಬ್ಬಳಿಗೆ ಇಂಗ್ಲೀಷ್ ಹೇಳಿಕೊಡುತ್ತಿದ್ದೇನೆ ಎಂದಳು.

ಇದಲ್ಲದೆ, ಗ್ರಾಮೀಣ ಪ್ರದೇಶದ ಎಷ್ಟೋ ವಿದ್ಯಾರ್ಥಿಗಳು ಅತ್ತ ಸರಿಯಾದ ಪಾಠಪ್ರವಚನಗಳು ಆನ್‌ಲೈನ್‌ನಲ್ಲಿ



Downloaded From: www.kpscvaani.com

ಇಂತಹ ಕೊರೊನಾ ವೈರಸ್ಸನ್ನು, ಅದರ ಪರಿಣಾಮಗಳನ್ನು ನಾವು ಸರಿಯಾಗಿ ನಿರ್ವಹಿಸುವುದರೊಂದಿಗೆ ಎಲ್ಲರ ಮಾನಸಿಕ ಆರೋಗ್ಯವನ್ನೂ ನಾವು ಕಾಯ್ದುಕೊಳ್ಳಬೇಕಾಗಿದೆ. ಅದಕ್ಕಾಗಿ ಈ ಕೆಲವು ಸಲಹೆಗಳನ್ನು ನಾವು ಅನುಸರಿಸಬಹುದು.

- ಕೋವಿಡ್ 19 ರ ಹರಡುವಿಕೆಯನ್ನು ತಡೆಗಟ್ಟುವ ವಿಧಾನಗಳನ್ನು ಜಾಗರೂಕತೆಯಿಂದ ಪಾಲಿಸುವುದು. ಅದೇ ರೀತಿ ಅದು ಹರಡದೆ ಇರುವ ದಾರಿಗಳನ್ನೂ ಸಂಪೂರ್ಣವಾಗಿ ಅರಿಯುವುದು.
- ಕುಟುಂಬದಲ್ಲಿ ಸಾಮರಸ್ಯದ ವಾತಾವರಣವನ್ನು ಕಾಯ್ದುಕೊಳ್ಳುವುದು. ಹಿರಿ–ಕಿರಿಯರ ಮಧ್ಯೆ ಸ್ನೇಹಮಯ ಹಾಗೂ ಪ್ರೀತಿಯ ಸಂವಹನವನ್ನು ಇಟ್ಟುಕೊಳ್ಳುವುದು.
- ಪರಸ್ಪರ ನೋವು–ನಲಿವುಗಳನ್ನು ಮುಕ್ತವಾಗಿ ಹಂಚಿಕೊಳ್ಳುವುದು. ಕೇವಲ ಹೇಳುವುದಷ್ಟೇ ಅಲ್ಲ. ಬೇರೆಯವರ ನೋವುಗಳನ್ನು ಕೇಳಿ ತಿಳಿದುಕೊಂಡು ಅರ್ಥೈಸಿಕೊಳ್ಳುವುದು.
- ಧನಾತ್ಮಕ ಯೋಚನೆಯನ್ನು ಬೆಳೆಸಿಕೊಳ್ಳುವುದು. ಆಗಿರುವ ಬದಲಾವಣೆಗಳ ಕುರಿತು ಚಿಂತಿಸದೆ, ಒಳಿತನ್ನು ಪರಿಶೀಲಿಸುವುದು.
- ತಮ್ಮ ಮಾನಸಿಕ ತುಮುಲಗಳನ್ನು ಗುರುತಿಸಿ, ಅದಕ್ಕಿರುವ ಕಾರಣಗಳನ್ನು ವಿಶ್ಲೇಷಿಸುವುದು ಹಾಗೂ ಭಾವನೆಗಳ ಬದಲಾವಣೆ ಇಂತಹ ಸನ್ನಿವೇಶದಲ್ಲಿ ಸಹಜವೆಂದು ಒಪ್ಪಿಕೊಳ್ಳುವುದು.
- ಸ್ನೇಹಿತರ, ನೆಂಟರಿಷ್ಟರ, ನೆರೆಹೊರೆಯವರ ಆರೋಗ್ಯ ಸ್ಥಿತಿಗತಿಗಳ ಕುರಿತು ಸಾಮಾಜಿಕ ಅಂತರದೊಂದಿಗೆ/ದೂರವಾಣಿ ಮುಖೇನ ವಿಚಾರಿಸಿ, ಪರಸ್ಪರ ಧೈರ್ಯ ಸಾಂತ್ವನ ಹೇಳುವುದು.
- ವಿದ್ಯಾರ್ಥಿಗಳು ಸಂಪೂರ್ಣವಾಗಿ ಓದಿನಿಂದ ವಿಮುಖರಾಗದಂತೆ ಬೇರೆ ಬೇರೆ ಪುಸ್ತಕಗಳನ್ನೂ, ಲೇಖನ, ಕಥೆ ಕಾದಂಬರಿಗಳನ್ನು ಓದಿ ಜ್ಞಾನಾರ್ಜನೆ ಮಾಡಿಕೊಳ್ಳುವುದು. ಮನಸ್ಸಿಗೆ ನೆಮ್ಮದಿ ನೀಡುವ ಒಳ್ಳೆಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ಮನೆಯಲ್ಲಿರುವ ವೃದ್ಧರಿಗೆ ಹಾಗೂ ಆರೋಗ್ಯ ಸೂಕ್ಷ್ಮತೆಯುಳ್ಳವರಿಗೆ ಇತರರು ಧೈರ್ಯವನ್ನು ತುಂಬುವುದು, ಕಾಳಜಿ ತೋರಿಸುವುದು ಅತೀ ಅಗತ್ಯ.
- ನಮ್ಮೆಲ್ಲರ ಕೈಯಲ್ಲಿರುವ ಮೊಬೈಲ್ ಫೋನ್, ಇಂಟರ್ನೆಟ್‌ಗಳನ್ನು ಅತಿಯಾಗಿ ಬಳಸುತ್ತಾ ವೃಥಾ ಕಾಲಕಳೆಯದೆ, ಸಕ್ರಿಯವಾಗಿ ಸೃಜನಶೀಲರಾಗಿ ಬಳಸುವುದು. ಅನಗತ್ಯ ಸಂದೇಶಗಳನ್ನು ನಿರ್ಬಂಧಿಸುವ ಜವಾಬ್ದಾರಿಯು ಮಾನಸಿಕ ಆರೋಗ್ಯಕ್ಕೆ ಅತೀಮುಖ್ಯ. ಇದೇ ತಾಂತ್ರಿಕ ಲಾಭಗಳನ್ನು ಉತ್ತಮ ವೀಡಿಯೋ ಮಾಡಲು ಒಳ್ಳೆಯ ಲೇಖನಗಳನ್ನು ಬರೆಯಲು ಬಳಸಬಹುದಲ್ಲವೆ. ಗೇಮ್ ಹಾಗೂ ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ಮಾನಸಿಕ ತೊಂದರೆ ಬರುವ ಅಪಾಯವಿದೆ.
- ಮಾನಸಿಕ ಒತ್ತಡ ಹೆಚ್ಚಾದಾಗ, ಖಿನ್ನತೆ, ಆತಂಕದ ತೊಂದರೆಗಳು ಬಾಧಿಸಿದಾಗ ಪದೇಪದೇ ಆತ್ಮಹತ್ಯೆಯ ಯೋಚನೆಗಳು ಬಂದಾಗ, ಆಪ್ತಸಮಾಲೋಚಕರನ್ನಾಗಲೀ, ವೈದ್ಯರನ್ನಾಗಲೀ ಸಂಪರ್ಕಿಸಬೇಕು. ಅಲ್ಲದೇ ಯಾರೇ ಅಂತಹ ಲಕ್ಷಣಗಳನ್ನು ತೋರ್ಪಡಿಸಿದಲ್ಲಿ ತಕ್ಷಣವೇ ಕೌಟುಂಬಿಕ ಸಹಾಯವಾಣಿ ಅಥವಾ ಮಹಿಳಾ ಸಹಾಯವಾಣಿಗೆ (1019)ಕರೆ ಮಾಡಬಹುದಾಗಿದೆ. ಇಂತಹ ತೊಂದರೆಗಳಿಗೆ ಸೂಕ್ತ ಆಪ್ತಸಮಾಲೋಚನೆ ಅಥವಾ ಮನೋವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುತ್ತದೆ.
- ಮಾನಸಿಕ ಆರೋಗ್ಯಕ್ಕೆ ದೈಹಿಕ ಸದೃಢತೆಯೂ ಮುಖ್ಯ. ಸರಿಯಾದ ಆಹಾರಕ್ರಮ, ಸಮಯಕ್ಕೆ ಸರಿಯಾದ ನಿದ್ರೆ, ದೈಹಿಕ ವ್ಯಾಯಾಮ, ಯೋಗ, ಪ್ರಾಣಾಯಾಮ, ಧ್ಯಾನ ಇತ್ಯಾದಿಗಳೂ ನಮ್ಮ ಮಾಸಿಕ ಆರೋಗ್ಯಕ್ಕೆ ಅತೀ ಮುಖ್ಯ.

ಲಭ್ಯವಾಗದೆ ಮುಂದಿನ ತರಗತಿ, ಪರೀಕ್ಷೆಗಳ ಕುರಿತು ಮಾಹಿತಿ ಇಲ್ಲದೆ ಆತಂಕ ನಿರಾಶೆಯನ್ನು ಹೊಂದಿದ್ದಾರೆ. ಪದವಿ ವಿದ್ಯಾರ್ಥಿಯೊಬ್ಬ ತನಗೆ ಪರೀಕ್ಷೆ ನಡೆಸದೆ ಇದ್ದರೆ ಸರಿಯಾಗಿ ಅಂಕ ನೀಡುತ್ತಾರೋ, ಇಲ್ಲವೋ ತನ್ನ ಮುಂದಿನ ವಿದ್ಯಾಭ್ಯಾಸಕ್ಕೆ ಇದರಿಂದ ತೊಂದರೆಯಾದರೆ ಏನು ಮಾಡಲಿ ಎಂದು ಚಿಂತೆಯಾಗುತ್ತಿದೆ ಎಂದು ಹೇಳಿಕೊಂಡ. ಆ ವಿದ್ಯಾರ್ಥಿಗೆ ವಿಶ್ವವಿದ್ಯಾಲಯವು ಇಂತಹ ಸಂದರ್ಭಗಳಲ್ಲಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಂಡು ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಪರಿಗಣಿಸುತ್ತದೆ. ಮಾತ್ರವಲ್ಲ, ಅವನ ಎಲ್ಲ ಸಹಪಾಠಿಗಳಿಗೂ ಇದೇ ತೊಂದರೆ ಇರುವುದರಿಂದ ಪರಸ್ಪರ ಭಾವನೆಗಳನ್ನು ಹಂಚಿಕೊಳ್ಳುವಂತೆ ಪ್ರೇರೇಪಿಸಲಾಯಿತು.

ವಿದ್ಯಾರ್ಥಿಗಳಿಗೆ ಶಾಲೆ–ಕಾಲೇಜು ಕೇವಲ ಪಾಠ ಕಲಿಯುವ ತಾಣವಾಗಿರದೆ, ಸ್ನೇಹಿತರೊಂದಿಗೆ ಬೆರೆಯುವ ನಕ್ಕು ನಲಿಯುವ ತಾಣವೂ ಹೌದು. ಇಂದು ಅದು ಸಾಧ್ಯವಾಗದೆ ಬೇಸರ, ದುಗುಡ, ಸಿಟ್ಟಿನ ಭಾವನೆಗಳು ಅವರಲ್ಲಿ ಮೂಡುವುದು ಸಹಜ. ಆರ್ಥಿಕ ಸಂಕಷ್ಟಕ್ಕೆ ಒಳಗಾದ ಪುರುಷನೊಬ್ಬ ತನ್ನ ಹೆಂಡತಿಯ ಮೇಲೆ ತನ್ನ ಸಿಟ್ಟನ್ನು ತೋರಿಸಿ, ದೈಹಿಕ ಹಿಂಸೆಯನ್ನು ನೀಡಿದ ಪ್ರಕರಣವೂ ದಾಖಲಾಗಿದೆ. ಕೆಲಸವಿಲ್ಲದೆ ಮನೆಯಲ್ಲೇ ಇರುವ ಗಂಡ, ಶಾಲೆಯಿಲ್ಲದೆ ಮನೆಯಲ್ಲೇ ಇರುವ ಮಕ್ಕಳು, ಪಟ್ಟಣದಿಂದ ವಾಪಾಸಾದ ನೆಂಟರು ಎಲ್ಲರೂ ಸೇರಿ ಮನೆಯಲ್ಲಿರುವ ಹೆಣ್ಣು ಮಗಳ ಮೇಲೆ ಅತಿಯಾದ ಕೆಲಸದ ಹೊರೆಯನ್ನು ಹೇರಿ, ಕ್ಷಣ ಹೊತ್ತು ವಿಶ್ರಮಿಸಲಾರದ ಆಕೆ ಮಾನಸಿಕವಾಗಿ ಒತ್ತಡಕ್ಕೊಳಗಾದುದನ್ನು ಅಸಹಾಯಕತೆಯಿಂದ ಹೇಳಿಕೊಂಡದ್ದಿದೆ. ತಂದೆ–ತಾಯಿಯರ ಮಧ್ಯೆ ಸದಾ ನಡೆಯುತ್ತಿರುವ ಕಲಹದಿಂದ ಮನೆಯಲ್ಲಿರುವ ಹದಿಹರೆಯದ ಮಕ್ಕಳಿಬ್ಬರೂ ತೀವ್ರ ಖಿನ್ನತೆಗೆ ಒಳಗಾಗಿದ್ದರು.

ಹೀಗೆ ಹತ್ತು ಹಲವು ರೀತಿಯ ಮಾನಸಿಕ ಸಮಸ್ಯೆಗಳು ಕೋವಿಡ್–19ರ ಈ ತುರ್ತು ಸನ್ನಿವೇಶದಲ್ಲಿ ಕಂಡುಬರುತ್ತಿವೆ. ಇದರೊಂದಿಗೆ ಸೋಂಕಿಗೆ ಒಳಗಾದ ಬಹಳಷ್ಟು ಮಂದಿ ಅವರದ್ದೇ ನೆರೆಹೊರೆಯವರು, ಸ್ನೇಹಿತರು, ನೆಂಟರು ತೋರುವ ಅನಾದರ ಹಾಗೂ ತಪ್ಪು ಕಲ್ಪನೆಯಿಂದ ಕೀಳಾಗಿ ನೋಡುವುದರಿಂದ ಅವಮಾನಕ್ಕೆ ಒಳಗಾಗಿ ನೋವನ್ನು ಅನುಭವಿಸುತ್ತಿದ್ದಾರೆ.

ಮಾನಸಿಕ ಆರೋಗ್ಯವನ್ನು ಈ ತುರ್ತು ಸಂದರ್ಭದಲ್ಲಿ ನಿರ್ಲಕ್ಷಿಸದೆ, ಕಾಯ್ದುಕೊಳ್ಳಲು ಪ್ರಯತ್ನಿಸಿದಲ್ಲಿ ಈ ತುರ್ತು ಸನ್ನಿವೇಶವನ್ನು ಸಮರ್ಥವಾಗಿ ನಿಭಾಯಿಸ ಬಹುದಾಗಿದೆ. ■



Downloaded From: www.kpscvaani.com



# ನೇಕಾರ ಸಮ್ಮಾನ್
## ಯೋಜನೆಗೆ ಚಾಲನೆ

**ನೇಕಾರರು ನಮ್ಮ ಸ್ವದೇಶಿ ಉತ್ಪಾದಾಕರಾಗಿದ್ದರೂ, ಬಹಳಷ್ಟು ನೇಕಾರರು ತಮ್ಮ ಬದುಕನ್ನು ಸಂಕಷ್ಟದಲ್ಲಿ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಇವರ ಸಂಕಷ್ಟಕ್ಕೆ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ನುಡಿದಂತೆ ನಡೆಯುವವರು ಎಂಬ ಖ್ಯಾತಿಯನ್ನು ಹೊಂದಿರುವ ಅವರು ಕೋವಿಡ್ ಸಂಕಷ್ಟದಲ್ಲೂ ನೇಕಾರರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿದ್ದಾರೆ.**

ಬಿ.ಜಿ.ಪೂರ್ಣಿಮ

ಸಂಕಷ್ಟದಲ್ಲಿರುವ ನೇಕಾರರಿಗೆ ಪ್ರತಿ ವರ್ಷ ಎರಡು ಸಾವಿರ ರೂ ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದ್ದ "ನೇಕಾರ ಸಮ್ಮಾನ್" ಯೋಜನೆಗೆ ಜುಲೈ 6 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಚಾಲನೆ ನೀಡಿದ್ದಾರೆ.

ಆ ಮೂಲಕ ಮೊದಲ ಹಂತವಾಗಿ ರಾಜ್ಯ ಸರ್ಕಾರವು 19,744 ಕೈಮಗ್ಗ ನೇಕಾರರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡುವ ಮೂಲಕ ಆರ್ಥಿಕ ನೆರವನ್ನು ಜಮೆ ಮಾಡಿದೆ.





Downloaded From: www.kpscvaani.com

> **ರಾಷ್ಟ್ರೀಯ ಕೈಮಗ್ಗ ಗಣತಿಯಲ್ಲಿ ನೇಕಾರರ ಮಾಹಿತಿ ಬಿಟ್ಟು ಹೋಗಿದ್ದರೆ, ಅಂತಹವರಿಗೂ ನೇಕಾರ ಸಮ್ಮಾನ್ ಯೋಜನೆಯಡಿ ಅವಕಾಶ ಕಲ್ಪಿಸಲು ಕ್ರಮಕೈಗೊಳ್ಳಲಾಗುವುದು.**
>
> – **ಬಿ.ಎಸ್.ಯಡಿಯೂರಪ್ಪ**, ಮುಖ್ಯಮಂತ್ರಿಗಳು



ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 54,789 ಕೈಮಗ್ಗ ನೇಕಾರರಿದ್ದಾರೆ. ಆದರೆ ಈ "ನೇಕಾರ ಸಮ್ಮಾನ್" ಯೋಜನೆಗೆ ರೇಷ್ಮೆ, ಹತ್ತಿ ಹಾಗೂ ಉಣ್ಣೆ ವಲಯದ ಕೈಮಗ್ಗ ಮತ್ತು ಪೂರಕ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಅರ್ಹರಾಗುತ್ತಾರೆ.

ಕೋವಿಡ್–19 ನಿಂದಾಗಿ ಸಂಕಷ್ಟಕ್ಕೆ ಒಳಗಾಗಿರುವ ವಿದ್ಯುತ್ ಮಗ್ಗ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1.25 ಲಕ್ಷ ಕೂಲಿ ಕೆಲಸಗಾರರಿಗೂ ಒಂದು ಬಾರಿಯ ಪರಿಹಾರ ಧನವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಈವರೆಗೆ ಅನುಮೋದಿಸಲಾಗಿರುವ 8897 ಅರ್ಜಿದಾರರಿಗೆ ಡಿಬಿಟಿ ಮೂಲಕ ಪರಿಹಾರ ವಿತರಣೆಯನ್ನು ಕೂಡ ಈ ಸಂದರ್ಭದಲ್ಲಿ ಮಾಡಲಾಯಿತು.

ನೇಕಾರ ಸಮ್ಮಾನ್ ಯೋಜನೆಗೆ ಪ್ರತಿ ವರ್ಷ 10.96 ಕೋಟಿ ರೂ ವೆಚ್ಚವಾಗಲಿದೆ. ಇದುವರೆವಿಗೆ 40,634 ಕೈಮಗ್ಗ ನೇಕಾರರು ಸೇವಾ ಸಿಂಧು ತಂತ್ರಾಂಶದಲ್ಲಿ ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 37,314 ಅರ್ಜಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಗಿದೆ. ಅದರಲ್ಲಿ 19,744 ಮಂದಿಗೆ ಮೊದಲ ಹಂತದಲ್ಲಿ ಹಣವನ್ನು ಜಮೆ ಮಾಡಲಾಗಿದೆ. ಉಳಿದ ಅರ್ಹ ಫಲಾನುಭವಿಗಳಿಗೆ ಮುಂದಿನ ಕೆಲವು ದಿನಗಳಲ್ಲೇ ಆರ್ಥಿಕ ನೆರವನ್ನು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುವುದು.

**ನೇಕಾರರ ಸಾಲ ಮತ್ತು ಬಡ್ಡಿ ಮನ್ನಾ ಮಾಡಿದ ಸರ್ಕಾರ:**

ರಾಜ್ಯದಲ್ಲಿನ ನೇಕಾರರ ಸಮಸ್ಯೆಗಳನ್ನು ಅರಿತ ಸರ್ಕಾರವು ನೇಕಾರರಿಗೆ ಆರ್ಥಿಕ ನೆರವು ನೀಡುವ ಜೊತೆಗೆ ನೇಕಾರರ ಸಾಲ ಮನ್ನಾ ಯೋಜನೆಯನ್ನು ಘೋಷಿಸಿತ್ತು. ಹಾಗಾಗಿ ಈ ಯೋಜನೆಯನ್ನು 2020–21 ನೇ ಸಾಲಿನಲ್ಲಿ ಪೂರ್ಣಗೊಳಿಸಲು 79.57 ಕೋಟಿ ರೂಗಳ ಅನುದಾನವನ್ನು ಒದಗಿಸಲಾಗಿದೆ.

ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ಕೃಷಿಯೇತರ ಪತ್ತಿನ ಸಹಕಾರಿ ಸಂಘ, ವಿವಿಧೋದ್ದೇಶ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರಿ ಬ್ಯಾಂಕ್, ಸೌಹಾರ್ದ ಸಹಕಾರಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಘ ಹಾಗೂ ಇತರೆ ಸಹಕಾರಿ ಬ್ಯಾಂಕ್‌ಗಳಿಂದ ದಿನಾಂಕ 26–7–2012 ರಿಂದ ಸಾಲ ಪಡೆದು ದಿನಾಂಕ 31–3–2019 ಕ್ಕೆ ಹೊಂದಿದ್ದ ಹೊರಬಾಕಿಯಲ್ಲಿ 1,00,000/–ರೂಗಳವರೆಗಿನ ಸಾಲ (ಅಸಲು ಮತ್ತು ಬಡ್ಡಿ ಸೇರಿ)ಮನ್ನಾ ಮಾಡಲಾಗಿದೆ. ಇದುವರೆಗೂ 1882 ಅರ್ಹ ನೇಕಾರ ಫಲಾನುಭವಿಗಳ ಸಾಲ ಖಾತೆಗೆ 9.25 ಕೋಟಿ ರೂ ವೆಚ್ಚ ಮಾಡಲಾಗಿದೆ.



Downloaded From: www.kpscvaani.com



## ಕೊರೊನಾ ಹತ್ತಿಕ್ಕಲು ಹಗಲಿರುಳು ಶ್ರಮಿಸುತ್ತಿರುವ

# ಸರ್ಕಾರ ಮತ್ತು ಕೊರೊನಾ ವಾರಿಯರ್ಸ್

ಸುವರ್ಣ

> ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ತಡೆಹಿಡಿಯುವ ಜೊತೆಗೆ ಜನರ ಪ್ರಾಣ ಉಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಸಮರ್ಥವಾಗಿ ಈ ಸಮಸ್ಯೆಯನ್ನು ನಿಭಾಯಿಸುವ ಮೂಲಕ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ.

**ಭಾ**ರತದಂತಹ ಸಂಕೀರ್ಣ ದೇಶದಲ್ಲಿ ಕೋವಿಡ್-19 ಸಮಸ್ಯೆ ನಿಭಾಯಿಸುವುದು ಸುಲಭದ ಮಾತಲ್ಲ. ಇಲ್ಲಿ ಉದ್ಯೋಗದ ಜೊತೆ ಉದ್ಯಮ ಕ್ಷೇತ್ರ ಬೆಸೆದುಕೊಂಡಿದೆ. ಶಿಕ್ಷಣದ ಜೊತೆ ಸಾಮಾಜಿಕ ವ್ಯವಸ್ಥೆ ಥಳುಕು ಹಾಕಿಕೊಂಡಿದೆ. ಕೃಷಿ, ಕೈಗಾರಿಕೆ, ಸೇವಾ ಕ್ಷೇತ್ರಗಳು, ಸಣ್ಣ ವಹಿವಾಟುಗಳು ಒಂದಕ್ಕೊಂದು ಸರಪಳಿಯಾಗಿ ಜೋಡಿಸಿಕೊಂಡಿವೆ. ಆರ್ಥಿಕತೆ ಕಾಪಾಡಿಕೊಳ್ಳುವ ಜೊತೆಗೆ ಜನರ ಪ್ರಾಣ ಉಳಿಸುವ ಸವಾಲನ್ನು ನಿಭಾಯಿಸುವುದು ಯಾವ ಸರ್ಕಾರಕ್ಕಾದರೂ ಸುಲಭದ ಮಾತಲ್ಲ. ಯಾವುದೋ ಒಂದು ಕ್ಷೇತ್ರದಲ್ಲಿ ಸಮಸ್ಯೆಯಾಗಿದ್ದರೆ ಬಗೆ ಹರಿಸಲು ಪ್ರಯತ್ನಿಸಬಹುದು, ಎಲ್ಲವೂ ಸಮಸ್ಯೆಯೇ ಆಗಿರುವಾಗ ಅದನ್ನು ಪರಿಹರಿಸುವುದು ಆಡಳಿತಕ್ಕೆ ದೊಡ್ಡ ಸಲಾವೇ ಸರಿ. ಅಂತಹ ಜಟಿಲವಾದ ಟಾಸ್ಕ್ ಅನ್ನು ಕರ್ನಾಟಕ ಸರ್ಕಾರ ಸಮರ್ಥವಾಗಿ ನಿಭಾಯಿಸುತ್ತಿದೆ.

ದೇಶದಲ್ಲಿ 45 ದಿನ ಲಾಕ್‌ಡೌನ್ ಜಾರಿಗೊಳಿಸಿ ಪರಿಸ್ಥಿತಿ ನಿಯಂತ್ರಿಸುವ ಪ್ರಯತ್ನ ನಡೆಯಿತು. ಕೊರೊನಾ ಸೋಂಕಿನ ಗುಣಧರ್ಮವೇ ವಿಚಿತ್ರವಾಗಿದ್ದು, ದಿನಕ್ಕೊಂದು ಹೊಸ ಸವಾಲು ಸೃಷ್ಟಿಸುತ್ತಿದೆ. ಹಾಗಾಗಿ ಲಾಕ್‌ಡೌನ್ ತೆರವು ಗೊಳಿಸಿ ಅನ್‌ಲಾಕ್ ದಿನಗಳನ್ನು ಜಾರಿಗೊಳಿಸಲಾಗಿದೆ. ಭಾರತದಲ್ಲಿ ಮಹಾರಾಷ್ಟ್ರ, ದೆಹಲಿ, ಗುಜರಾತ್, ತೆಲಂಗಾಣ, ಆಂಧ್ರ ಪ್ರದೇಶ, ಚೆನ್ನೈ ರಾಜ್ಯಗಳಲ್ಲಿ ಸೋಂಕಿನ ಹಾವಳಿ ಮಿತಿ ಮೀರಿದೆ. ಕರ್ನಾಟಕ ರಾಜ್ಯ ಜೂನ್ ಮಧ್ಯ ಭಾಗದವರೆಗೂ ದೇಶದಲ್ಲಿ 13ನೇ ಸ್ಥಾನದಲ್ಲಿತ್ತು. ಲಾಕ್‌ಡೌನ್ ವೇಳೆ ಸೋಂಕನ್ನು ಅತ್ಯಂತ ವ್ಯವಸ್ಥಿತವಾಗಿ ನಿಭಾಯಿಸಿತ್ತು.



Downloaded From: www.kpscvaani.com

ವಿದೇಶದಿಂದ ಬಂದವರು, ದೆಹಲಿಯ ಧಾರ್ಮಿಕ ಮಂದಿರದಲ್ಲಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದವರು, ನಂಜನಗೂಡಿನ ಖಾಸಗಿ ಔಷಧ ಕಾರ್ಖಾನೆ ಹಾಗೂ ಇತರ ಮೂಲಗಳಿಂದ ಸೋಂಕಿಗೆ ಸಿಲುಕಿದವರು ಆಸ್ಪತ್ರೆ ಸೇರಿದರು. ಸೋಂಕಿತರನ್ನು ಕರಾರುವಕ್ಕಾಗಿ ಪತ್ತೆ ಹಚ್ಚಿ ಚಿಕಿತ್ಸೆ ಕೊಡಿಸಲಾಗಿತ್ತು. ಸೋಂಕಿತರ ಜೊತೆಗಿನ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳು ಬಹುತೇಕ ಪತ್ತೆಯಾಗಿದ್ದವು. ಆ ಸಮಯದಲ್ಲಿ ದಿನವೊಂದಕ್ಕೆ ಆರೇಳು ಮಂದಿ ಮಾತ್ರ ಸೋಂಕಿತರು ಪತ್ತೆಯಾಗುತ್ತಿದ್ದರು. ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದ್ದರಿಂದ ಅನಿವಾರ್ಯವಾಗಿ ಅನ್‌ಲಾಕ್ ವ್ಯವಸ್ಥೆ ಜಾರಿಯಾಯಿತು. ಜೂನ್ ಮೊದಲ ವಾರದಿಂದ ಆರಂಭವಾದ ಅನ್‌ಲಾಕ್ ಪ್ರಕ್ರಿಯೆಯಲ್ಲಿ ಮತ್ತೆ ಸೋಂಕು ಹೆಚ್ಚಾಗಲಾರಂಭಿಸಿತ್ತು. ನೆರೆ ರಾಜ್ಯಗಳಿಂದ ರಾಜ್ಯಕ್ಕೆ ಬಂದವರು, ಅಂತರ ಜಿಲ್ಲಾ ಪ್ರಯಾಣಿಕರ ಸಂಚಾರದಿಂದ ಸೋಂಕು ಅಂಕೆ ಇಲ್ಲದೆ ಹೆಚ್ಚಾಗಲಾರಂಭಿಸಿತ್ತು.

ಮೇ ಅಂತ್ಯದವರೆಗೂ ದಿನಕ್ಕೆ ಎರಡಂಕಿ ದಾಟದಿದ್ದ ಸೋಂಕಿನ ಸಂಖ್ಯೆ ಜುಲೈ ಮಧ್ಯ ಭಾಗದಲ್ಲಿ ದಿನಕ್ಕೆ ಸರಾಸರಿ ಎರಡು ಸಾವಿರಕ್ಕೇರಲಾರಂಭಿಸಿದೆ. ಒಂದೆಡೆ ಸೋಂಕಿನ ಪ್ರಸರಣ ವಿಪರೀತವಾಗಿದ್ದರೆ, ಮತ್ತೊಂದೆಡೆ ಕುಸಿಯುತ್ತಿರುವ ಆರ್ಥಿಕತೆಯ ರಕ್ಷಣೆಯೂ ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸಿದೆ. ಈ ಮಧ್ಯೆ ಅಪಪ್ರಚಾರಗಳೇ ಮೇಳೈಸಿ ಗೊಂದಲ ಉಂಟು ಮಾಡಿದ್ದಂತು ನಿಜ. ಕೊರೊನಾ ನಿಯಂತ್ರಣಕ್ಕಿಂತಲೂ ಭಯ ಬಿತ್ತುವ ಕೆಲಸ ಭಾರೀ ಜೋರಾಗಿ ನಡೆದಿತ್ತು.

ಮಾರ್ಚ್ 9ರ ಬಳಿಕ ರಾಜ್ಯದಲ್ಲಿ ಸೋಂಕಿನ ತೀವ್ರತೆ ಹೆಚ್ಚಾಗಿತ್ತು. ಜನವರಿಯಲ್ಲಿ ನೆರೆಯ ಕೇರಳ ರಾಜ್ಯದಲ್ಲಿ ಮೂರು ಮಂದಿಗೆ ಸೋಂಕು ಕಾಣಿಸಿ ಕೊಂಡ ಕೂಡಲೇ ಕರ್ನಾಟಕ ಸರ್ಕಾರ ಎಚ್ಚೆತ್ತುಕೊಂಡಿತ್ತು.

ಬೆಂಗಳೂರು ಮತ್ತು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಲಾರಂಭಿಸಿತ್ತು. ಹಂತ ಹಂತವಾಗಿ ಸೋಂಕನ್ನು ನಿಯಂತ್ರಿಸುವ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮೆಚ್ಚುಗೆಗೆ ಪಾತ್ರವಾಗಿತ್ತು. ಕೊರೊನಾ ವಿರುದ್ಧ ಹೋರಾಟದಲ್ಲಿ ಕರ್ನಾಟಕ ಗುರುತಿಸಬಹುದಾದ ಸಾಧನೆ ಮಾಡಿದೆ ಎಂದು ಪ್ರಧಾನಿ ಶ್ಲಾಘಿಸಿದ್ದರು. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಅಧಿಕಾರಿ ರಾಜೇಶ್ ಭೂಷಣ್ ಅವರು ಎಲ್ಲಾ ರಾಜ್ಯಗಳಿಗೂ ಪತ್ರ ಬರೆದು ಕರ್ನಾಟಕದ ಮಾದರಿ ಅನುಸರಿಸಬಹುದು ಎಂದು ಸಲಹೆ ನೀಡಿದ್ದರು. ಆ ಮಟ್ಟಿಗೆ ಕರ್ನಾಟಕ ಯಶಸ್ವಿಯಾಗಿತ್ತು.

ಇದರ ಯಶಸ್ಸು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಲ್ಲಬೇಕು. ಹಗಲು ರಾತ್ರಿ ಎನ್ನದೆ ತಮ್ಮನ್ನು ತಾವು ಕೋವಿಡ್ ನಿಯಂತ್ರಣದಲ್ಲಿ ತೊಡಗಿಸಿಕೊಂಡರು. ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಎಲ್ಲಡೆ ಸಂಚರಿಸಿ ಸಮಸ್ಯೆಗಳನ್ನು ಖುದ್ದು ಅರಿತುಕೊಂಡು ಪರಿಹಾರ ದೊರಕಿಸಲಾರಂಭಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀರಾಮುಲು, ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್, ಕಂದಾಯ ಸಚಿವ ಆರ್.ಅಶೋಕ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್, ಗೃಹಸಚಿವ ಬಸವರಾಜ ಬೊಮ್ಮಾಯಿ, ಹಿರಿಯ ಅಧಿಕಾರಿಗಳಾದ ಜಾವೇದ್ ಅಕ್ತರ್, ಶಾಲೀನಿ ರಜನೀಶ್, ಮಂಜುನಾಥ್ ಪ್ರಸಾದ್, ಪಂಕಜ್ ಕುಮಾರ್ ಪಾಂಡೆ, ಮುನಿಶ್ ಮೋದ್ಗಿಲ್,  ಸೇರಿದಂತೆ ಹಲವಾರು ಸೇವಾ ಮನೋಭಾವದ ಅಧಿಕಾರಿಗಳು ಟೊಂಕ ಕಟ್ಟಿನಿಂತಿದ್ದಾರೆ.

ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ವಾರ್ ರೂಂ ಸ್ಥಾಪಿಸಲಾಯಿತು. ಒಂದುವರೆ ಕೋಟಿ ಮನೆಗಳನ್ನೇ ನೇರವಾಗಿ ಸಂದರ್ಶಿಸಿ ರೋಗಲಕ್ಷಣಗಳಿರುವವರನ್ನು ಪತ್ತೆ ಹಚ್ಚಲಾಯಿತು. ಆ ವೇಳೆಯಲ್ಲೇ ಮನೆಯಲ್ಲಿರುವ ಗರ್ಭಿಣಿಯರು, ಬಾಣಂತಿಯರು, ಮಕ್ಕಳು, ವಯಸ್ಸಾದವರನ್ನು ಗುರುತಿಸಲಾಯಿತು. ಉಸಿರಾಟದಂತಹ ಸಮಸ್ಯೆ, ರಕ್ತದೊತ್ತಡ, ಮಧುಮೇಹದಂತಹ ಸಮಸ್ಯೆಗಳಿಂದ ಬಳಲುತ್ತಿದ್ದವರನ್ನು ಸಮೀಕ್ಷೆ ನಡೆಸಲಾಯಿತು. ಈ ಸಮೀಕ್ಷೆ ಸೋಂಕಿನ ನಿಯಂತ್ರಣಕ್ಕೆ ಬಹಳಷ್ಟು ನೆರವಾಂಯಿತು. ವಿದೇಶ ಮತ್ತು ನೆರೆ ರಾಜ್ಯಗಳಿಂದ ಬಂದವರನ್ನು ಹದಿನಾಲ್ಕು ದಿನಗಳ ಕಾಲ ಕ್ವಾರಂಟೈನ್‌ನಲ್ಲಿರಿಸಲಾಗಿತ್ತು. ಸೋಂಕಿತ ಪ್ರದೇಶಗಳನ್ನು



### ಸೋಂಕಿತರಿಗೆ ಪೌಷ್ಟಿಕ ಆಹಾರ

ಜಿಲ್ಲಾ ಮತ್ತು ಸಾರ್ವಜನಿಕ ಆಸ್ಪತ್ರೆಗಳು, ಕೊರೊನಾ ಆಸ್ಪತ್ರೆಗಳು ಹಾಗೂ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆಗೆ ದಾಖಲಾಗಿರುವ ಸೋಂಕಿತರಿಗೆ ಉತ್ತಮ ಆಹಾರ ನೀಡುತ್ತಿಲ್ಲ ಎಂಬ ಅಪಪ್ರಚಾರ ಕೇಳಿಬಂದಾಗ ಖುದ್ದು ಸಚಿವ ಆರ್. ಅಶೋಕ್ ಅವರು ಆಸ್ಪತ್ರೆಗಳಿಗೆ ತೆರಳಿ ಅಲ್ಲಿ ರೋಗಿಗಳಿಗೆ ನೀಡುತ್ತಿರುವ ಆಹಾರವನ್ನೇ ಸೇವಿಸಿ ಪರೀಕ್ಷಿಸಿದರು. ಅಲ್ಲದೆ ಸರ್ಕಾರ ರೋಗಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಪೂರೈಸಲು ವಾರದಲ್ಲಿ ಇದೇ ಆಹಾರವನ್ನು ನೀಡಬೇಕೆಂದು ನಿರ್ದೇಶಿಸಿ ಆಹಾರ ಪಟ್ಟಿಯನ್ನು ಸಿದ್ಧಪಡಿಸಿ ನೀಡಿತು.



Downloaded From: www.kpscvaani.com



## ಕೋವಿಡ್–19 ಸಹಾಯವಾಣಿಗಳು

**14410 – ಆಪ್ತ ಸಹಾಯವಾಣಿ**
(ಟೆಲಿಮೆಡಿಸಿನ್ ಮತ್ತು ಆಸ್ಪತ್ರೆಗೆ ಸಂಬಂಧಿಸಿದಂತ ಮಾಹಿತಿಗಾಗಿ)

**108 – ಆಂಬ್ಯುಲೆನ್ಸ್**
(ಕೋವಿಡ್ 19 ಸೇರಿದಂತೆ ಎಲ್ಲಾ ಆರೋಗ್ಯ ತುರ್ತುಸೇವೆಗಳಿಗಾಗಿ)

**1912 – ಸಹಾಯವಾಣಿ**
(ಕೋವಿಡ್ 19 ಗಾಗಿ ಆಸ್ಪತ್ರೆ ಪ್ರವೇಶ ನಿರಾಕರಿಸುವ ಕುರಿತು ದೂರು ನೀಡಲು)

**104 – ಸಹಾಯವಾಣಿ**
(ಎಲ್ಲಾ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ಮಾಹಿತಿ ಪಡೆಯಲು)

ಸೀಲ್‌ಡೌನ್ ಮಾಡಿ, ಸ್ಯಾನಿಟೈಸ್ ಮಾಡಿ ವೈಜ್ಞಾನಿಕವಾಗಿ ಎಲ್ಲಾ ರೀತಿಯ ಉಪಕ್ರಮಗಳನ್ನು ಕೈಗೊಳ್ಳಲಾಯಿತು.

ಕೊರೊನಾ ವಾರಿಯರ್ಸ್‌ಗಳಿಗೆ ಅಗತ್ಯವಾದ ವೈಯಕ್ತಿಕ ಸುರಕ್ಷತಾ ಕಿಟ್‌ಗಳ ಕೊರತೆ ಎದುರಾದಾಗ ಹಿಂದೆ ಮುಂದೆ ನೋಡದೆ ಅಗತ್ಯದಷ್ಟು ಪಿಪಿಇ ಕಿಟ್‌ಗಳು, ಮಾಸ್ಕ್‌ಗಳು, ಗ್ಲೌಸ್‌ಗಳು, ಸ್ಯಾನಿಟೈಸ್‌ನ್ನು ಒದಗಿಸಿ ಸರ್ಕಾರ ಬೆಂಬಲ ಸೂಚಿಸಿತ್ತು. ಆಶಾ ಕಾರ್ಯಕರ್ತರು, ಪೊಲೀಸರು, ಸಫಾಯಿ ಕರ್ಮಾಚಾರಿಗಳು ಮತ್ತು ಭದ್ರತಾ ಸಿಬ್ಬಂದಿಗಳಿಗೆ ಸರ್ಕಾರದ ಉಪಕ್ರಮಗಳು ನೈತಿಕ ಸ್ಥೈರ್ಯ ತುಂಬಿದವು. ರಾಜ್ಯದಲ್ಲಿ ಕಂಡು ಬಂದ ಒಗ್ಗಟ್ಟಿನ ಮಂತ್ರ ಕೊರನಾವಷ್ಟೇ ಅಲ್ಲ ಇನ್ಯಾವುದೇ ವಿಪತ್ತು ಬಂದರೂ ಕನ್ನಡಿಗರು ಎದುರಿಸಬಲ್ಲರು ಎಂಬುದನ್ನು ಸಾಬೀತು ಪಡಿಸಿತು.

ಒಂದು ಹಂತದಲ್ಲಿ ಭಯ ಬಿತ್ತುವ ಪ್ರಯತ್ನಗಳು ವ್ಯಾಪಕವಾಗಿ ನಡೆದವು. ಕೊರೊನಾ ಸೋಂಕು ಮತ್ತು ಆರ್ಥಿಕ ಹೊಡೆತಗಳ ನಡುವೆ ಜರ್ಝರಿತರಾದ ಜನ ಒಂದಷ್ಟು ಕಾಲ ಗೊಂದಲಕ್ಕೆ ಒಳಗಾಗಿದ್ದಂತೂ ನಿಜ. ಆದರೆ ಸರ್ಕಾರ ತಕ್ಷಣ ಸ್ಪಂದಿಸಿ ಜನರಲ್ಲಿ ಹೊಸ ಭರವಸೆಗಳನ್ನು ಮೂಡಿಸುತ್ತಿತ್ತು. ಆದರೆ ಈಗ ರಾಜ್ಯದಲ್ಲಿ ಸೋಂಕಿತರ ಸಂಖ್ಯೆ ಅರ್ಧ ಲಕ್ಷ ದಾಟಿದೆ, ಸಾವಿನ ಸಂಖ್ಯೆ ಒಂದು ಸಾವಿರ ಸಮೀಪಿಸುತ್ತಿದೆ. ಈ ಆತಂಕಗಳ ನಡುವೆಯೂ ಸೋಂಕಿತರ ಚೇತರಿಕೆಯ ಪ್ರಮಾಣ ಆಶಾ ಭಾವನೆ ಹುಟ್ಟಿಸಿದೆ. ರಾಜ್ಯದಲ್ಲಿ ಗುಣಮುಖರಾಗುತ್ತಿರುವವರ ಪ್ರಮಾಣ ಶೇ.39ರಷ್ಟಿದೆ. ಸಾವಿನ ಪ್ರಮಾಣ ಶೇ.1.8ರಷ್ಟಿದ್ದು, ದೇಶ ಹಾಗೂ ವಿದೇಶಗಳ ಸರಾಸರಿಗಿಂತ ಕಡಿಮೆ ಇದೆ. ಸರ್ಕಾರ ಟೀಕೆ ಟಿಪ್ಪಣಿಗಳ ಹೊರತಾಗಿಯೂ ಪ್ರತಿ ಹಂತದಲ್ಲೂ ಕೊರೊನಾ ವಿರುದ್ಧ ಹೋರಾಟದಲ್ಲಿ ಒಂದಿಂಚು ಹಿಂದೆ ಸರಿದಿಲ್ಲ. ಆರ್ಥಿಕ ಸಂಕಷ್ಟ ಸಮಯದಲ್ಲೂ ಪ್ರತಿಯೊಬ್ಬ ಸೋಂಕಿತನಿಗೆ ಕನಿಷ್ಠ ಒಂದುವರೆ ಲಕ್ಷದಿಂದ ಐದು ಲಕ್ಷದವರೆಗೂ ಖರ್ಚು



ಮಾಡಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಬೆಡ್‌ಗಳು ಭರ್ತಿಯಾದಾಗ ಖಾಸಗಿ ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆ ಕೊಡಿಸಿದೆ.

ರವಿಶಂಕರ್ ಆಶ್ರಮ, ಹಜ್ ಭವನ, ಜಿಕೆವಿಕೆ ವಿದ್ಯಾರ್ಥಿ ನಿಲಯಗಳು, ತೋಟಗಾರಿಕೆ ವಿವಿಯ ಹಾಸ್ಟೆಲ್, ಕೋರಮಂಗಲ ಒಳಾಂಗಣ ಕ್ರೀಡಾಂಗಣ, ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ, ಎರಡು ಖಾಸಗಿ ಹೋಟೆಲ್ ಸೇರಿ ಹಲವೆಡೆ 1600 ಬೆಡ್‌ಗಳ ಕೋವಿಡ್ ಹಾರೈಕೆ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸುತ್ತಿದೆ. ಪ್ರಮುಖವಾಗಿ ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ 10,100 ಬೆಡ್‌ಗಳ ಕೋವಿಡ್ ಕೇಂದ್ರವನ್ನು ಸ್ಥಾಪಿಸುವ ತಯಾರಿ ನಡೆದಿದೆ. ಈ ಕೇಂದ್ರದಲ್ಲಿ ನೂರು ಮಂದಿ ಸೋಂಕಿತರಿಗೆ ಒಬ್ಬರಂತೆ 300 ವೈದ್ಯರು, ಇಬ್ಬರು ನರ್ಸ್‌ಗಳಂತೆ 500 ನರ್ಸ್‌ಗಳು, 300 ಮಂದಿ ಸಹಾಯಕರು, 400 ಮಂದಿ ಸಫಾಯಿ ಕರ್ಮಚಾರಿಗಳು, ಭದ್ರತೆಗಾಗಿ 300 ಪೊಲೀಸರು, 300 ಬಿಬಿಎಂಪಿಯ ಮಾರ್ಷಲ್‌ಗಳನ್ನು ನಿಯೋಜಿಸಲಾಗುತ್ತಿದೆ.

ಸಂಘ ಸಂಸ್ಥೆಗಳು ಕೋವಿಡ್ ಹಾರೈಕೆ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗುತ್ತಿದೆ. ಮನೆಯಲ್ಲಿ ಸೂಕ್ತ



Downloaded From: www.kpscvaani.com

ಸೌಲಭ್ಯ ಇರುವವರಿಗೆ ಹೋಂ ಕ್ವಾರಂಟೈನ್ ಇರಿಸಿ ಚಿಕಿತ್ಸೆ ಕೊಡಲಾಗುತ್ತಿದೆ. ಈ ಮೂಲಕ ಆಸ್ಪತ್ರೆಗಳ ಕೊರತೆಯನ್ನು ನೀಗಿಸಲಾಗುತ್ತಿದೆ. ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ಸುಮಾರು 5 ಸಾವಿರ ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ. 25 ಖಾಸಗಿ ಮೆಡಿಕಲ್ ಕಾಲೇಜುಗಳು ತಮ್ಮ ಆಸ್ಪತ್ರೆಗಳಲ್ಲಿ ಆರು ಸಾವಿರ ಬೆಡ್‌ಗಳನ್ನು ಬಿಟ್ಟು ಕೊಡಲು ಒಪ್ಪಿವೆ, ಬೆಡ್‌ಗಳನ್ನು ಮೀಸಲಿರಿಸುವ ಜೊತೆಗೆ ಕೋವಿಡ್ ಪರೀಕ್ಷೆಗೆ ಖಾಸಗಿ ಪ್ರಯೋಗಾಲಯವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಪ್ರಸ್ತುತ ವೈದ್ಯಕೀಯ ಕ್ಷೇತ್ರವನ್ನು ಕಾಡುತ್ತಿರುವ ಸವಾಲೆಂದರೆ ಕೋವಿಡ್ ಪರೀಕ್ಷೆಗೆ ಸ್ಯಾಂಪಲ್ ಕೊಟ್ಟರೆ ಐದಾರು ದಿನಗಳಾದರೂ ಫಲಿತಾಂಶ ಬರುವುದಿಲ್ಲ ಎಂಬುದು. ಪ್ರಸ್ತುತ ಲಭ್ಯ ಇರುವ ಸರ್ಕಾರಿ ಮತ್ತು ಖಾಸಗಿ ಲ್ಯಾಬ್‌ಗಳ ಸೌಲಭ್ಯ ಬಳಸಿಕೊಂಡು ದಿನವೊಂದಕ್ಕೆ 20 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗುತ್ತಿದೆ. ಲ್ಯಾಬ್‌ಗಳ ಸಂಖ್ಯೆಯನ್ನು 80ಕ್ಕಿಂತ ಹೆಚ್ಚು ಮಾಡಿ ಪ್ರತಿದಿನದ ಪರೀಕ್ಷಾ ಸಾಮಾರ್ಥ್ಯವನ್ನು 50 ಸಾವಿರಕ್ಕೇರಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಒಂದು ವೇಳೆ ನಿರೀಕ್ಷಿತ ಪ್ರಮಾಣದಲ್ಲಿ ಪರೀಕ್ಷೆಗಳು ನಡೆಸಲು ಸಾಧ್ಯವಾಗಿದ್ದೇ ಆದರೆ ಕೊರೊನಾ ಸೋಂಕು ಕರ್ನಾಟಕದ ಮಟ್ಟಿಗೆ ದೊಡ್ಡ ಸಮಸ್ಯೆಯೇ ಆಗುವುದಿಲ್ಲ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ 83524 ಬೆಡ್‌ಗಳು ಲಭ್ಯ ಇವೆ, ಅದರಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ 11,295, ಖಾಸಗಿ ಆಸ್ಪತ್ರೆಗಳಲ್ಲಿ 3655 ಸೇರಿ 20,003 ಐಸೋಲೇಷನ್ ಬೆಡ್‌ಗಳಿವೆ. ಇದರ ಹೊರತಾಗಿ ಆಕ್ಸಿಜನ್ ಬೆಡ್‌ಗಳು 6580, ಐಸಿಯು ಬೆಡ್‌ಗಳು 1985, ವೆಂಟಿಲೇಟರ್ ಬೆಡ್‌ಗಳು 979 ಸೇರಿ ಒಟ್ಟು 29,547 ಬೆಡ್‌ಗಳು ಕೋವಿಡ್ ಚಿಕಿತ್ಸೆಗೆ ಲಭ್ಯ ಇವೆ.

**ಗರ್ಭಿಣಿಯರಿಗೆ ಪ್ರತ್ಯೇಕ ಆಸ್ಪತ್ರೆ:**

ಸೋಂಕಿತರ ಸಂಖ್ಯೆಯ ಅನುಗುಣವಾಗಿಯೇ ಗುಣಮುಖರಾಗುವವರ ಪ್ರಮಾಣವೂ ಹೆಚ್ಚುತ್ತಿದೆ. ಈ ಮಣ್ಣಿನ ಗುಣವೋ, ಜನರ ಅದೃಷ್ಟವೋ ಗೊತ್ತಿಲ್ಲ. ಸಕ್ರಿಯ ಸೋಂಕಿತರ ಸಂಖ್ಯೆ 25 ಸಾವಿರದಷ್ಟಿದ್ದರೆ, ಚಿಕಿತ್ಸೆ ಪಡೆದು ಗುಣಮುಖರಾದವರ ಸಂಖ್ಯೆ 17 ಸಾವಿರದಷ್ಟಿದೆ. ಗರ್ಭಿಣಿಯರಿಗೆ ಸೋಂಕು ತಗುಲಿದಾಗ ಆತಂಕ ಹೆಚ್ಚಾಗುತ್ತಿತ್ತು. ಅವರ ಚಿಕಿತ್ಸೆಗಾಗಿ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ ಹೆರಿಗೆ ಆಸ್ಪತ್ರೆಯನ್ನು ಸಂಪೂರ್ಣವಾಗಿ ಮಾರ್ಪಡಿಸಿ 24 ಬೆಡ್‌ಗಳ ಕೋವಿಡ್ ಆಸ್ಪತ್ರೆಯನ್ನಾಗಿ ಸ್ಥಾಪಿಸಲಾಗಿದೆ. ರೈಲ್ವೆ ಬೋಗಿಗಳನ್ನು ಐಸೋಲೇಷನ್ ಸೆಂಟರ್ ಮಾಡುವ ಪ್ರಯತ್ನಗಳು ನಡೆಯುತ್ತಿವೆ.

ಖಾಸಗಿ ಆಸ್ಪತ್ರೆಗಳಿಂದ ಉಂಟಾಗುವ ಸಮಸ್ಯೆಗಳಿಗೆ ಕರ್ನಾಟಕ ಸರ್ಕಾರ ತ್ವರಿತವಾಗಿ ಸ್ಪಂದಿಸಿದ್ದಷ್ಟು ದೇಶದ ಯಾವ ರಾಜ್ಯವೂ ಸ್ಪಂದಿಸಿಲ್ಲ. ಕೋವಿಡ್ ಪರೀಕ್ಷೆಗೆ ಖಾಸಗಿ ಪ್ರಯೋಗಾಲಯಗಳು ಸುಮಾರು 8 ಸಾವಿರ ರೂಪಾಯಿವರೆಗೂ ದರ ನಿಗದಿ ಮಾಡಿ ಸುಲಿಗೆ ಮಾಡುತ್ತಿದ್ದವು. ಕೂಡಲೇ ಮಧ್ಯ ಪ್ರವೇಶ ಮಾಡಿದ ರಾಜ್ಯ ಸರ್ಕಾರ ಸ್ಯಾಂಪಲ್ ತೆಗೆಯಲು 350 ರೂ. ಮತ್ತು ಒಟ್ಟು ಕೋವಿಡ್ ಪರೀಕ್ಷೆಗೆ ಐಸಿಎಂಆರ್ ಸೂಚನೆಯ ಪ್ರಕಾರ 4500 ರೂಪಾಯಿ ದಾಟುವಂತಿಲ್ಲ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ. ಸೂಚನೆ ಉಲ್ಲಂಘಿಸಿದ್ದ ಪ್ರತಿಷ್ಠಿತ ಆಸ್ಪತ್ರೆಗಳಿಗೆ ನಿರ್ದಾಕ್ಷಿಣ್ಯವಾಗಿ ನೋಟಿಸ್ ನೀಡಿತ್ತು. ಬೆಂಗಳೂರಿನಲ್ಲಿ ಕೆಲವು ಪ್ರತಿಷ್ಠಿತ ಆಸ್ಪತ್ರೆಗಳು ಚಿಕಿತ್ಸೆ ನೀಡಲು ಹಿಂದೇಟು ಹಾಕಿದಾಗ ಮುಲಾಜಿಲ್ಲದೆ ಎರಡು ಆಸ್ಪತ್ರೆಗಳ ಮೇಲೆ ಕ್ರಿಮಿನಲ್ ಕೇಸು ದಾಖಲಿಸಲಾಗಿದೆ, ಒಂಬತ್ತು ಆಸ್ಪತ್ರೆಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಆ ಆಸ್ಪತ್ರೆಗಳ ಹೊರರೋಗಿಗಳ ವಿಭಾಗವನ್ನು ಮುಚ್ಚಿಸಲಾಗಿದೆ. ಇದರಿಂದಾಗಿ ಉಳಿದ ಆಸ್ಪತ್ರೆಗಳು ಎಚ್ಚೆತ್ತುಕೊಂಡು ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ನೀಡಲು ಮೀನಾಮೇಷ ಎಣಿಸುವುದನ್ನು ಕೈಬಿಟ್ಟಿವೆ.

ಕೋವಿಡ್ ವಿಷಯದಲ್ಲಿ ಅನಗತ್ಯ ಭಯ ಬೀಳದಂತೆ ಜನರಲ್ಲಿ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಆರು ಅಡಿ ಸಾಮಾಜಿಕ ಅಂತರ ಕಾಪಾಡಿಕೊಂಡು, ಮಾಸ್ಕ್ ಧರಿಸಿ, ಸೋಪು ಬಳಸಿ ಕೈತೊಳೆಯುವುದರಿಂದ, ಪದೇ ಪದೇ ಸ್ಯಾನಿಟೈಜರ್ ಬಳಕೆಯಿಂದ ಸೋಂಕು ತಡೆಯಬಹುದು. ಅದು ಮೀರಿ ಸೋಂಕು ಹರಡಿದರೆ ಸಾಮಾನ್ಯ ಜ್ವರಕ್ಕೆ ನೀಡುವ ಔಷಧಿಗಳಲ್ಲೇ ಕೋವಿಡ್ ಗುಣಮುಖವಾಗುತ್ತಿರುವುದು ಕಂಡು ಬರುತ್ತಿದೆ. ಇತ್ತೀಚಿಗೆ 100 ವರ್ಷ ಸಾಮಿಪ್ಯ ಇರುವ ನಾಲ್ಕು









Downloaded From: www.kpscvaani.com

ಮಂದಿ ಹಿರಿಯ ವ್ಯಕ್ತಿಗಳು ಚಿಕಿತ್ಸೆ ಪಡೆದು ಸೋಂಕಿನಿಂದ ಗುಣಮುಖರಾಗಿರುವುದು ಹೊಸ ಭರವಸೆಗಳನ್ನು ಮೂಡಿಸಿದೆ. 60 ವರ್ಷ ದಾಟಿದವರಿಗೆ ಸೋಂಕು ತಗುಲಿದರೆ ರಕ್ಷಣೆ ಕಷ್ಟಸಾಧ್ಯ ಎಂಬ ಅಪವಾದವನ್ನು ಹಿರಿಯ ಜೀವಿಗಳ ಚೇತರಿಕೆ ಸುಳ್ಳು ಮಾಡಿದೆ. ಮಧುಮೇಹ, ರಕ್ತದೊತ್ತಡ, ಅಸ್ತಮಾ, ಪಾರ್ಶ್ವವಾಯು, ಹೃದ್ರೋಗ, ರಕ್ತ ಹೀನತೆಯಂತಹ ಗಂಭೀರ ರೋಗಗಳಿಂದ ಬಳಲುತ್ತಿರುವವರನ್ನು ಹೊರತು ಪಡಿಸಿ ಕೋವಿಡ್ ಹೆಚ್ಚು ಪ್ರಾಣ ಹಾನಿ ಮಾಡಿಲ್ಲ.

ನಿಯಮಿತ ಆಹಾರ, ಔಷಧೋಪಚಾರಗಳಿದ್ದರೆ ಕೋವಿಡ್ ಗೆಲ್ಲುವುದು ಕಷ್ಟವೇನಲ್ಲ. ಸರ್ಕಾರ ನಡೆಸುವ ಕೋವಿಡ್ ಕೇಂದ್ರ ಮತ್ತು ಆಸ್ಪತ್ರೆಗಳಲ್ಲಿ ಬೆಳಗ್ಗೆ ಉಪಹಾರಕ್ಕೆ ರವಾ ಇಡ್ಲಿ, ಪೊಂಗಲ್, ದೋಸೆ, ಚೌಚೌಬಾತ್, ಬೆಳಗ್ಗೆ ಹತ್ತು ಗಂಟೆಗೆ ಹಣ್ಣು ಮತ್ತು ಸೂಪ್, ಮಧ್ಯಾಹ್ನ 12 ಗಂಟೆಗೆ ರೊಟ್ಟಿ, ಚಪಾತಿ, ಸಬ್ಜಿ, ಪಲ್ಯ, ಸಾಂಬಾರ್, ಮೊಸರು, ಸಂಜೆ ಬಾಳೆಹಣ್ಣು, ಬಿಸ್ಕತ್, ಡ್ರೈಫ್ರೂಟ್, ರಾತ್ರಿ ಊಟಕ್ಕೆ ರೊಟ್ಟಿ, ಚಪಾತಿ, ಸಬ್ಜಿ, ಪಲ್ಯ, ಅನ್ನ ಸಾಂಬರ್, ಮೊಸರು, ಮಲಗುವ ಮುನ್ನಾ ಅರಿಶಿಣ ಬೆರೆಸಿದ ಹಾಲನ್ನು ಸ್ಟಾರ್ ಹೊಟೇಲ್‌ನಿಂದ ಪೂರೈಕೆ ಮಾಡಲಾಗುತ್ತಿದೆ. ಜೊತೆಗೆ ಯೋಗದಂತಹ ವ್ಯಾಯಾಮಗಳನ್ನು ಹೇಳಿಕೊಡಲಾಗುತ್ತಿದೆ.

ಸೋಂಕಿನ ನಿಯಂತ್ರಣಕ್ಕೆ ಕರ್ನಾಟಕ ಸರ್ಕಾರ ಟ್ರೇಸ್, ಟ್ರಾಕ್, ಟೆಸ್ಟ್, ಟ್ರೀಟ್, ಟೆಕ್ನಾಲಜಿ ಎಂಬ ಐದು ಟಿ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿತ್ತು. ಇದು ಉತ್ತಮ ಫಲಿತಾಂಶ ನೀಡಿದೆ. ಲಾಕ್‌ಡೌನ್ ಮೂರನೆ ಹಂತದವರೆಗೂ ರಾಜ್ಯದ ಪೊಲೀಸರು ತಮ್ಮ ಪ್ರಾಣ ಪಣಕ್ಕಿಟ್ಟು ಕಾವಲು ಕಾಯುವ ಮೂಲಕ ಸೋಂಕು ಹರಡದಂತೆ ಕಾವಲು ಕಾಯ್ದರು. ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳು ತಮ್ಮ ಜೀವ ಲೆಕ್ಕಿಸದೆ ಚಿಕಿತ್ಸೆ ನೀಡಿದರು. ಕಳೆದ ನಾಲ್ಕು ತಿಂಗಳಿಂದ ರಜೆ ಇಲ್ಲದೆ ಅವಿರತವಾಗಿ ದುಡಿಯುತ್ತಿರುವ ಕೊರೊನಾ ವಾರಿಯರ್ಸ್‌ಗಳಿಗೆ ಇಡೀ ನಾಡೇ ಪೂಜ್ಯ ಭಾವನೆಯಿಂದ ಗೌರವಾರ್ಪಣೆ ಮಾಡಿದೆ.

ಮುಂದಿನ ದಿನಗಳಲ್ಲಿ ಸೋಂಕಿನ ಪ್ರಸರಣ ಎರಡು ಪಟ್ಟು ಹೆಚ್ಚಾಗುವ ಆತಂಕ ಇದ್ದಿದ್ದರಿಂದ ಆ ಸರಣಿಯನ್ನು ಕಡಿತ ಮಾಡಲು ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಜ್ಞರ ಸಲಹೆ ಪಡೆದು ಜುಲೈ 14ರ ರಾತ್ರಿ ಎಂಟು ಗಂಟೆಯಿಂದ ಜುಲೈ 22ರ ಬೆಳಗ್ಗೆ 5 ಗಂಟೆವರೆಗೆ ಲಾಕ್‌ಡೌನ್ ಮಾಡಲಾಗಿದೆ. ಈ ಒಂದು ವಾರದ ಅವಧಿಯಲ್ಲಿ ಜನಸಾಮಾನ್ಯರು ಮನೆಯಲ್ಲಿದ್ದು ಸಹಕರಿಸಿದರೆ ಸೋಂಕು ಬಹುತೇಕ ಸರಣಿ ಸಂಪರ್ಕಗಳನ್ನು ಕಡಿದುಕೊಂಡು ನಿಯಂತ್ರಣಕ್ಕೆ ಬರುವ ಸಾಧ್ಯತೆ ಇದೆ. ಈ ನಿರೀಕ್ಷೆಯ ಮೇಲೆಯೇ ಸುಮಾರು 5 ಸಾವಿರ ಕೋಟಿ ರೂಪಾಯಿ ನಷ್ಟವಾದರೂ ಯಡಿಯೂರಪ್ಪ ಅವರು ಲಾಕ್‌ಡೌನ್ ಘೋಷಣೆ ಮಾಡಿದ್ದಾರೆ.

ಆರೋಗ್ಯ ಸೇವೆಯಲ್ಲಿ ಸಿಬ್ಬಂದಿಗಳ ಕೊರತೆ ಎದುರಾಗಿದೆ. ಅದಕ್ಕಾಗಿ ಮುಂದಿನ ಆರು ತಿಂಗಳ ಅವಧಿಗೆ 1419 ನರ್ಸ್‌ಗಳು, 506 ಲ್ಯಾಬ್ ಟೆಕ್ನೀಷಿಯನ್, 916 ಮಂದಿ ಫಾರ್ಮಸಿಸ್ಟ್‌ಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಡಿ ದರ್ಜೆ ಸಿಬ್ಬಂದಿಗಳಿಗೆ 10 ಸಾವಿರ ರೂಪಾಯಿ ರಿಸ್ಕ್ ಭತ್ಯೆ ನೀಡಲಾಗುತ್ತಿದೆ. ಜೂನ್ ತಿಂಗಳಿಗೆ ನಿವೃತ್ತರಾಗುತ್ತಿದ್ದ ವೈದ್ಯಕೀಯ ಸಿಬ್ಬಂದಿಗಳ ಸೇವೆಯನ್ನು ಮತ್ತೆ ಆರು ತಿಂಗಳು ಮುಂದುವರೆಸಲಾಗಿದೆ. ಬೆಂಗಳೂರಿನಲ್ಲಿ ಸೋಂಕು ದಿನೇ ದಿನೇ ಹೆಚ್ಚಾಗಿ ಭಾರೀ ಚರ್ಚೆಗೆ ಗ್ರಾಸವಾಗಿತ್ತು. ಹಾಗಾಗಿ ನಾಲ್ಕು ಮಂದಿ ಸಚಿವರನ್ನು ವಿಭಾಗವಾರು ಉಸ್ತುವಾರಿಗಳನ್ನಾಗಿ ನಿಯೋಜಿಸಲಾಗಿದೆ. ಸಾಲದೆಂಬಂತೆ ಜಯದೇವ ಆಸ್ಪತ್ರೆಯ ನಿರ್ದೇಶಕರಾದ ಡಾ.ಮಂಜುನಾಥ್ ಮತ್ತು 16 ಮಂದಿ ಹಿರಿಯ ಐಎಎಸ್ ಅಧಿಕಾರಿಗಳು ಸೇರಿ 24 ಮಂದಿಯ ವಿಶೇಷ ಪಡೆಯೊಂದನ್ನು ರಚಿಸಲಾಗಿದೆ. ಸೋಂಕಿತರನ್ನು ಪತ್ತೆ ಹಚ್ಚಲು, ಆಸ್ಪತ್ರೆಯಲ್ಲಿ ಚಿಕಿತ್ಸೆ ವ್ಯವಸ್ಥೆ ಮಾಡಲು ಮತ್ತು ಕ್ವಾರಂಟೈನ್ ಅವಧಿಯಲ್ಲಿ ಅನಗತ್ಯ ಸಂಚಾರಕ್ಕೆ ಅವಕಾಶ ನೀಡದಂತೆ ನಿಗಾವಹಿಸಲು 1013 ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ.

ನೆಗಡಿ, ಕೆಮ್ಮು, ಜ್ವರದಂತಹ ಕೊರೊನಾ ಲಕ್ಷಣಗಳಿಗೆ ವೈದ್ಯರ ಶಿಫಾರಸ್ಸು ಪತ್ರ ಇಲ್ಲದೆ ಔಷಧಿ ಮಾರಾಟ ಮಾಡಬಾರದು ಎಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಸೂಚಿಸಿದೆ. ಒಂದು ವೇಳೆ ಮಾರಾಟ ಮಾಡಿದರೂ ಔಷಧಿ ಖರೀದಿಸಿದವರ ಮಾಹಿತಿಯನ್ನು ಔಷಧ ನಿಯಂತ್ರಕರಿಗೆ ವೆಬ್‌ಸೈಟ್ ಮೂಲಕ ನೀಡಬೇಕಿದೆ, ಹಾಗೆ ಮಾಹಿತಿ ನೀಡದೆ ನಿರ್ಲಕ್ಷ್ಯತೆ ತೋರಿಸಿದ 110 ಔಷಧಿ ಅಂಗಡಿಗಳ ಪರವಾನಗಿಯನ್ನು ಸರ್ಕಾರ ರದ್ದು ಮಾಡಿದೆ.

ಕೋವಿಡ್ ಸಾಂಕ್ರಾಮಿಕ ರೋಗ ಎಂಬ ಕಾರಣಕ್ಕೆ ಬಹಳಷ್ಟು ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದವು. ಇದರಿಂದ ಬಹಳಷ್ಟು ಮಂದಿ ರೋಗಿಗಳಿಗೆ ಸೂಕ್ತ ಸಮಯಕ್ಕೆ ಚಿಕಿತ್ಸೆ ಸಿಗದೆ ತೊಂದರೆಯಾಗಿತ್ತು. ಅದಕ್ಕಾಗಿ ಹೊಸ ಮಾರ್ಗಸೂಚಿಯನ್ನು ಹೊರಡಿಸಿರುವ ರಾಜ್ಯ ಸರ್ಕಾರ ರೋಗಿಗಳನ್ನು ಮೊದಲು ಆಸ್ಪತ್ರೆಗೆ ಸೇರಿಸಿಕೊಳ್ಳಬೇಕು. ಕೊರೊನಾ ಸೋಂಕಿನ ಲಕ್ಷಣಗಳಿದ್ದರೆ ಪ್ರತ್ಯೇಕ ವಾರ್ಡ್‌ನಲ್ಲಿಟ್ಟು ಚಿಕಿತ್ಸೆ ಕೊಡಬೇಕು. ಕೋವಿಡ್ ಪರೀಕ್ಷೆಯಲ್ಲಿ ಸೋಂಕಿರುವುದು ಖಚಿತವಾದರೆ ಆ ರೋಗಿಗಳನ್ನು ನಿಗದಿತ ಆಸ್ಪತ್ರೆಗೆ ಕಳುಹಿಸಿಕೊಡಬೇಕು, ಒಂದು ವೇಳೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸಾ ಸೌಲಭ್ಯವಿದ್ದರೆ ಸರ್ಕಾರ ನಿಗದಿ ಪಡಿಸಿರುವ ದರದಲ್ಲಿ ಚಿಕಿತ್ಸೆ ನೀಡಬೇಕು. ಚಿಕಿತ್ಸೆ ನಿರಾಕರಿಸುವುದು ಮತ್ತು ರೋಗಿಯನ್ನು ಆಸ್ಪತ್ರೆಗೆ ಸೇರಿಸಿಕೊಳ್ಳದೆ ಇರುವುದು ಕಂಡು ಬಂದರೆ ಕೆಪಿಎಂಇ ಮತ್ತು ಪ್ರಕೃತಿ ವಿಕೋಪ ಕಾಯ್ದೆಯಡಿ ಕ್ರಮ ಜರುಗಿಸುವುದಾಗಿ ಎಚ್ಚರಿಸಲಾಗಿದೆ.

## ಪ್ಲಾಸ್ಮಾ ದಾನಿಗಳಿಗೆ 5 ಸಾವಿರ ಪ್ರೋತ್ಸಾಹಧನ

ಕೋವಿಡ್ –19 ಸೋಂಕಿಗೆ ಒಳಗಾಗಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವಂತಹವರ ಆರೋಗ್ಯವನ್ನು ಕಾಪಾಡಲು ಗುಣಮುಖರಾದವರ ಪ್ಲಾಸ್ಮಾ ಪರಿಣಾಮಕಾರಿಯಾಗುವುದರಿಂದ ಸೋಂಕಿನಿಂದ ಗುಣಮುಖರಾದವರು ಪ್ಲಾಸ್ಮಾ ದಾನ ಮಾಡಿದರೆ ಅವರಿಗೆ 5 ಸಾವಿರ ಪ್ರೋತ್ಸಾಹಧನ ನೀಡಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಅವರು ತಿಳಿಸಿದ್ದಾರೆ.



Downloaded From: www.kpscvaani.com

# ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ...



ಬನ್ನೂರು ಕೆ.ರಾಜು

**"ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ**
**ಜಗ್ಗದೆಯೆ, ಕುಗ್ಗದೆಯೆ, ಹಿಗ್ಗಿ ನಡೆ ಮುಂದೆ**
**ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ**
**ಮೂಡುವುದು, ಮೂಡುವುದು ನವಭಾರತದ ಲೀಲೆ"**

ಎಂಬ ಮಹಾಕವಿ ಕುವೆಂಪು ಅವರ 'ಪಾಂಚಜನ್ಯ'ದ ಕಾವ್ಯ ನುಡಿಗಳಂತೆ ಸ್ವಾತಂತ್ರ್ಯದ ಕಿಡಿಗಳಾಗಿ ಹೋರಾಟದ ಹಾದಿಯಲ್ಲಿ ಹೊತ್ತಿ ಉರಿದು ಬಲಿದಾನವಾದವರ ಕಥೆಗಳನ್ನು ಕೇಳಿದರೆ ಕಲ್ಲು ಕೂಡ ಕರಗಿ ಕಣ್ಣೀರಾಗಿ ಬಿಡುತ್ತದೆ. ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹರಿದ ರಕ್ತವನ್ನು ಅಳೆದವರಿಲ್ಲ, ಹಾರಿ ಹೋದ ಪ್ರಾಣ ಪಕ್ಷಿಗಳೆಷ್ಟೋ ಲೆಕ್ಕವಿಟ್ಟವರಿಲ್ಲ. ನಗು ನಗುತ್ತಲೇ ನೇಣು ಗಂಬವೇರಿದ ಸ್ವಾತಂತ್ರ್ಯ ವೀರರಿಗಿಲ್ಲ ಯಾವುದೂ ಸಮ. ಭಾರತಾಂಬೆಗೆ ನೆತ್ತರನೆ ಅಭಿಷೇಕಗೈದ ದೇಶಭಕ್ತರಿಗೆ ಸಾಟಿ ಎಲ್ಲಿದ್ದೀತು.

ಅಂತಹ ತ್ಯಾಗ ಜೀವಿ ದೇಶಭಕ್ತರ ಹೃದಯ ಭೂಮಿಯಲ್ಲಿ ಅರಳಿದ ಶಾಂತಿ ಪುಷ್ಪವೇ ಈ ಸ್ವಾತಂತ್ರ್ಯ. ಅದಕ್ಕೇನೆ ಇವರೆಲ್ಲರನ್ನೂ, ಇವೆಲ್ಲವನ್ನೂ ನೆನೆಸಿಕೊಂಡು ನಮ್ಮ ರಾಷ್ಟ್ರದ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರು ಕಂಗಳನ್ನು ಕಂಬನಿಯ ಕಡಲು ಮಾಡಿಕೊಂಡು 1947 ಆಗಸ್ಟ್ 14ರ ರಾತ್ರಿ 11 ಗಂಟೆಯಲ್ಲಿ ಸೇರಿದ್ದ ರಾಜ್ಯಾಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ "ನಗುಮುಖದಿಂದ ನೇಣುಗಂಬವೇರಿದ, ಗುಂಡಿನ ಸುರಿ ಮಳೆಗೆ ಎದೆಗೊಟ್ಟು ಅಂಡಮಾನಿನ ಜೈಲಿನಲ್ಲಿ ಜೀವಂತ ಸಾವನ್ನು ಅನುಭವಿಸಿದ, ಭಾರತದ ಜೈಲುಗಳಲ್ಲಿ ಅನೇಕ ವರ್ಷಗಳು ಜೀವ ಸವೆಸಿದ, ವಿದೇಶಗಳಲ್ಲಿ ಆಶ್ರಯ ಪಡೆದು ಅವಮಾನಕರ ಜೀವನ ನಡೆಸಿದ, ಬರೀ ಐಶ್ವರ್ಯ ಆಸ್ತಿಗಳನ್ನಷ್ಟೇ ಕಳೆದುಕೊಳ್ಳದೆ ನಾವೀಗ ತಲುಪಿರುವ ಮಹಾನ್ ಗುರಿಯನ್ನು ಸಾಧಿಸಲು ತಮ್ಮ ನೆಂಟರಿಷ್ಟರಿಂದಲೂ ದೂರವಾದ ಎಲ್ಲ ಪರಿಚಿತ-ಅಪರಿಚಿತ ಪುರುಷರು, ಮಹಿಳೆಯರ ಸೇವೆಯನ್ನು ನಾವು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳೋಣ" ಎಂದು ಗದ್ಗದಿತರಾಗುತ್ತಾರೆ.

ಹೀಗೆ ತಾಯಿ ಭಾರತಾಂಬೆಯ ದೇಶ ಪ್ರೇಮಿ ಸುಪುತ್ರ-ಸುಪುತ್ರಿಯರ ವೀರೋಚಿತ ವೀರಾಗ್ರಣಿಗಳ ಹೋರಾಟ ಹಾಗೂ ತ್ಯಾಗದ ಫಲವಾಗಿ ಸ್ವಾತಂತ್ರ್ಯವೆಂಬ ಅಮೃತಫಲ ಭಾರತಕ್ಕೆ ದೊರೆತದ್ದು ಈಗ ಇತಿಹಾಸ. ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಯಾದ ಆ ಒಂದು ಕ್ಷಣ ಭಾರತೀಯರಿಗೆ ರಸ ರೋಮಾಂಚನ. ಆದರೆ ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಗೂ ಮೊದಲೇ 1947 ಜೂನ್ 3 ರಂದು ಅಂದಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್‌ಮೌಂಟ್ ಬ್ಯಾಟನ್, ಭಾರತ ಸಾಮ್ರಾಜ್ಯವನ್ನು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳಾಗಿ ವಿಭಜಿಸುವುದಾಗಿ ಘೋಷಿಸಿದ್ದ. ಅವತ್ತು ನಡೆದ ಅಖಂಡ ಭಾರತದ ವಿಭಜನೆ ಒಂದು ಐತಿಹಾಸಿಕ ದುರಂತ. ಆಗ ಘಟಿಸಿದ ಇಂಥ ದುರಂತದಿಂದ ಉದ್ಭವವಾಗಿರುವ ಭಾರತ-ಪಾಕಿಸ್ತಾನ ಎರಡೂ ದೇಶಗಳ ಅನೇಕ ಸಮಸ್ಯೆಗಳಿಗೆ ಸಮಾಧಾನಕರವಾದ ಯಾವುದೇ ಪರಿಹಾರ ಇವತ್ತಿಗೂ ಸಿಕ್ಕಿಲ್ಲ. ಉಭಯ ರಾಷ್ಟ್ರಗಳಲ್ಲೂ ಶಾಂತಿ-ಸಾಮರಸ್ಯ ಮರೀಚಿಕೆಯಾಗಿಯೇ ಉಳಿದಿದೆ.



Downloaded From: www.kpscvaani.com





**ಸ್ವಾತಂತ್ರ್ಯಕ್ಕಾಗಿ ಬೆವರು ಸುರಿಸಿದ, ರಕ್ತಹರಿಸಿದ, ಬಲಿದಾನಗೈದ ಸ್ವಾತಂತ್ರ್ಯ ಯೋಧರು, ವೀರಾಗ್ರಣಿಗಳು ಬೋಧಿಸಿದ ಮೌಲ್ಯಗಳು, ಕಂಡ ಕನಸುಗಳು ಎಷ್ಟರ ಮಟ್ಟಿಗೆ ಸಾಕಾರಗೊಂಡಿವೆಯೋ ಬಿಟ್ಟಿವೆಯೋ ಆದರೆ ಇಂದು ಭಾರತವು ಆಧುನಿಕತೆಯಲ್ಲಿ ಮುಂಚೂಣಿಯಲ್ಲಿದ್ದು ವಿಶ್ವದ ಪ್ರಭಾವಿ ರಾಷ್ಟ್ರಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲುವಂತಾಗಿರುವುದಂತೂ ನಿಜ.**

1947 ಆಗಸ್ಟ್ 15ರಂದು ಭಾರತೀಯರಾದ ನಾವು ಬ್ರಿಟೀಷರ ಕಪಿಮುಷ್ಠಿಯ ಸಂಕೋಲೆಯಿಂದ ಮುಕ್ತಿ ಪಡೆದು ಸ್ವತಂತ್ರರಾದೆವು. ಅಂದು ಭಾರತವನ್ನು ಸ್ವತಂತ್ರ ದೇಶವನ್ನಾಗಿ ಘೋಷಿಸಲಾಯಿತು. ಘೋಷಣೆಯ ಸಮಯ ಮಾತ್ರ ಕತ್ತಲು. ಅದೂ ಮಧ್ಯರಾತ್ರಿ. ಆದರೆ ಘೋಷಣೆಯಾಗುತ್ತಿದ್ದಂತೆಯೇ ದೇಶದ ದಾಸ್ಯದ ಅಂಧಕಾರ ಕಳೆದು ಭಾರತೀಯರೆಲ್ಲರ ಹೃನ್ಮನಗಳಲ್ಲಿ ಸ್ವಾತಂತ್ರ್ಯದ ಪ್ರಜ್ವಲ ಬೆಳಕು ಜ್ವಾಜಲ್ಯಮಾನವಾಗಿ ಬೆಳಗಿತ್ತು. ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಸಂಕೇತವಿದು. 'ತಮಸೋಮಾ ಜ್ಯೋತಿರ್ಗಮಯಾ...'ಭಾರತದ ತ್ರಿವರ್ಣಧ್ವಜ ಪಟಪಟನೆ ಬಾನೆತ್ತರ ಹಾರಿತ್ತು.

ಇದಕ್ಕೂ ಮುನ್ನಾ ದಿನ ಅಂದರೆ ಆಗಸ್ಟ್ 14ರಂದು ಭಾರತದ ರಾಜ್ಯಾಂಗ ಸಭೆಯು ಸಮಾವೇಶಗೊಂಡಿತ್ತು. ಆಗಸ್ಟ್ 15 ರಂದೇ ಸ್ವಾತಂತ್ರ್ಯ ಪಡೆದ ಭಾರತ ಸರ್ಕಾರದ ಪ್ರಮಾಣ ವಚನ ಸ್ವೀಕರಿಸಬೇಕಾದರೆ ಗವರ್ನರ್ ಜನರಲ್ ಇರಬೇಕು. ಲಾರ್ಡ್‌ಮೌಂಟ್ ಬ್ಯಾಟನ್‌ಗೆ ಆ ಸ್ಥಾನವನ್ನು ಹಸ್ತಾಂತರಿಸಬೇಕೆಂದು ಆ ಸಮಾವೇಶದಲ್ಲಿ ಪ್ರತಿಪಾದಿಸಲಾಯಿತು. ಆಗ ಇದನ್ನು ರಾಜ್ಯಾಂಗ ಸಭೆ ಅನುಮೋದಿಸಿತು. ಸಮಾವೇಶದ ನಂತರ ರಾಜ್ಯಾಂಗ ಸಭೆ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದ್, ಪಂಡಿತ್ ಜವಾಹರಲಾಲ್ ನೆಹರು ಅವರುಗಳು ತಮ್ಮ ನಿರ್ಧಾರವನ್ನು ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ತಿಳಿಸಿದರು. ಆಗ ಇದು ತನಗೆ ಅತ್ಯಂತ ಗೌರವವೆಂದು ಸಂವಿಧಾನ ಬದ್ಧವಾಗಿ ತಾವು ನಡೆದುಕೊಳ್ಳುವುದಾಗಿ ಅವರು ಹೇಳುತ್ತಾರೆ. ಮಾರನೇ ದಿನ ಆಗಸ್ಟ್ 15ರ ಬೆಳಿಗ್ಗೆ ಮೌಂಟ್ ಬ್ಯಾಟನ್ನರ ಕೈನಲ್ಲಿ ಸುಪ್ರೀಂಕೋರ್ಟ್ ಚೀಫ್ ಜಸ್ಟೀಸ್ ಕಾನಿಯಾ ಗವರ್ನರ್ ಜನರಲ್‌ರನ್ನು ಪ್ರಮಾಣ ಮಾಡಿಸಿ ಆನಂತರ ಹೊಸ ಗವರ್ನರ್ ಜನರಲ್ ನೂತನ ಕ್ಯಾಬಿನೆಟ್‌ನಿಂದ ಪದವಿ ಪ್ರಮಾಣ ಮಾಡಿಸುತ್ತಾರೆ. ನಂತರ ಮೌಂಟ್ ಬ್ಯಾಟನ್ ರಾಜ್ಯಾಂಗ ಸಭೆ ಕಾರ್ಯಾಲಯಕ್ಕೆ ಹೋಗುತ್ತಾರೆ. ಪ್ರಪಂಚದಾದ್ಯಂತ ಹರಿದು ಬಂದ ಶುಭಾಶಯ ಸಂದೇಶಗಳನ್ನು ಓದಲಾಗುತ್ತದೆ.

ಹೀಗೆ ಸ್ವಾತಂತ್ರ್ಯದ ಬೆಳಕು ಕಂಡ ಸ್ವತಂತ್ರ ಭಾರತದ ಪ್ರಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಆಗಸ್ಟ್ 15ರಂದು ಮಧ್ಯರಾತ್ರಿ ಪ್ರಮಾಣ ವಚನ ಸ್ವೀಕರಿಸಿ ಇಡೀ ಭಾರತದ ರಾಜಕೀಯ ಅಧಿಕಾರ ಕೇಂದ್ರವಾದ ದೆಹಲಿಯ ಕೆಂಪು ಕೋಟೆಯ ಮೇಲೆ ಮೊದಲ ರಾಷ್ಟ್ರಧ್ವಜಾರೋಹಣ ಮಾಡುತ್ತಾರೆ.

ಸ್ವಾತಂತ್ರ್ಯಕ್ಕಾಗಿ ಬೆವರು ಸುರಿಸಿದ, ರಕ್ತಹರಿಸಿದ, ಬಲಿದಾನಗೈದ ಸ್ವಾತಂತ್ರ್ಯ ಯೋಧರು, ವೀರಾಗ್ರಣಿಗಳು ಬೋಧಿಸಿದ ಮೌಲ್ಯಗಳು, ಕಂಡ ಕನಸುಗಳು ಎಷ್ಟರ ಮಟ್ಟಿಗೆ ಸಾಕಾರಗೊಂಡಿವೆಯೋ ಬಿಟ್ಟಿವೆಯೋ ಆದರೆ ಇಂದು ಭಾರತವು ಆಧುನಿಕತೆಯಲ್ಲಿ ಮುಂಚೂಣಿಯಲ್ಲಿದ್ದು ವಿಶ್ವದ ಪ್ರಭಾವಿ ರಾಷ್ಟ್ರಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲುವಂತಾಗಿರುವುದಂತೂ ನಿಜ.

ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೊಂದಾಗಿರುವ ನಮ್ಮ ಭಾರತವು ಪ್ರಪಂಚದಲ್ಲಿ ಎಲ್ಲಿಯೂ ಕಾಣಸಿಗದಂತಹ ಅಪಾರವಾದ, ಅನನ್ಯವಾದ ಸಾಂಸ್ಕೃತಿಕ, ಚಾರಿತ್ರಿಕ ಮಹತ್ವವನ್ನು ಹೊಂದಿದ್ದು ಈ ದಿಶೆಯಲ್ಲಿಐಕ್ಯತೆಯನ್ನು ಸಾಧಿಸಿದೆ. ಭಾರತ ಸ್ವತಂತ್ರಗೊಂಡಾಗ ದೇಶದಲ್ಲಿ ಅನೇಕ ಸಮಸ್ಯೆಗಳಿದ್ದವು. ಬಹಳಷ್ಟು ರಾಜ ಮಹಾರಾಜರುಗಳ, ಅನೇಕ ಪಾಳೆಗಾರರ ಸಂಸ್ಥಾನಗಳಿಂದ ಭಾರತವು ಕೂಡಿದ್ದರಿಂದ ಇದೊಂದು ದೇಶದ ದೊಡ್ಡ ಸಮಸ್ಯೆಯೇ ಆಗಿತ್ತು. ಆಗ ರಾಜಕೀಯದ ಏಕೀಕರಣದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಎಲ್ಲಾ ರಾಜ ಸಂಸ್ಥಾನಗಳನ್ನೂ ಒಂದು ಗೂಡಿಸುವ ಕಾರ್ಯ ಮಾಡಲಾಯಿತು. ದೇಶದ ಆಡಳಿತ ವ್ಯವಸ್ಥೆಯ ಹಾಗೂ ಜನತೆಯ ಹಿತದೃಷ್ಟಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇದೆಲ್ಲದರ ಫಲವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ,



Downloaded From: www.kpscvaani.com

ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಒಟ್ಟಾರೆ ಅಭಿವೃದ್ಧಿಯ ಹಾದಿಯಲ್ಲಿ ತಾನು ಯಾರಿಗೂ ಕಡಿಮೆ ಇಲ್ಲವೆಂಬಂತೆ ದಾಸ್ಯದ ಪಂಜರದಿಂದ ಹೊರಬಂದು ಇಂದು ಭಾರತವು ಥಳ ಥಳನೆ ಹೊಳೆಯುತ್ತಿದೆ.

ವಿದೇಶಿಯರ ದಾಳಿಯಿಂದ, ದೌರ್ಜನ್ಯದಿಂದ, ದಬ್ಬಾಳಿಕೆಯಿಂದ ತತ್ತರಿಸುತ್ತಿದ್ದ ಭಾರತ ಮಾತೆಯು ಸ್ವಾತಂತ್ರ್ಯದ ಕಿರೀಟ ತೊಟ್ಟು ಸ್ವತಂತ್ರಳಾದದ್ದು ಈಗ ಒಂದು ಮಹಾಚರಿತ್ರೆ, ಇದೊಂದು ಭಾರತ ಸ್ವಾತಂತ್ರ್ಯದ ಮಹಾಕಾವ್ಯವೆನ್ನಬಹುದು.ಇದರ ಪ್ರತಿಯೊಂದು ಪುಟಗಳೂ ಅತ್ಯಂತರೋಚಕ ಮತ್ತು ಮಹತ್ವಪೂರ್ಣವಾದವು. ಮಹಾತ್ಮಗಾಂಧೀಜಿಯವರ ಸಾರಥ್ಯದಲ್ಲಿ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸಿ ಸ್ವಾತಂತ್ರ್ಯಗಳಿಸಿದ್ದು ಈ ಸ್ವಾತಂತ್ರ್ಯದ ಮಹಾಕಾವ್ಯದ ಮಹತ್ತರ ಅಧ್ಯಾಯ. ಆದರೆ, ಇಂಥ ಸ್ವಾತಂತ್ರ್ಯ ಇವತ್ತು ದೇಶದಲ್ಲಿ ಯಾವ ಸ್ಥಿತಿಯನ್ನು ತಲುಪಿದೆ ಎನ್ನುವುದರತ್ತ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ, ಕ್ರಾಂತಿವೀರರ, ಶಾಂತಿದೂತರ ಅಪೇಕ್ಷೆ ಏನಾಗಿತ್ತೆಂಬುದನ್ನೂ ಅರಿತು, ಅವರುಗಳ ಕನಸುಗಳೆಂತಹದ್ದೆಂದು ತಿಳಿದು ಅದನ್ನೆಲ್ಲವನ್ನೂ ಸಾಕಾರಗೊಳಿಸುವತ್ತ ನಾವು ಸಾಗಬೇಕಾಗಿದೆ. ಇದೇ ನಾವು ಅವರಿಗೆ ಸಲ್ಲಿಸುವ ದೊಡ್ಡ ಸೆಲ್ಯೂಟ್.

**"ಝುಂಡಾ ಊಂಚಾ ರಹೇ ಹಮಾರಾ**
**ವಿಜಯೀ ವಿಶ್ವತಿರಂಗಾ ಪ್ಯಾರಾ**
**ಝುಂಡಾ ಊಂಚಾ ರಹೇ ಹಮಾರಾ**
**ಸದಾ ಶಕ್ತಿ ಬರಸಾನೇವಾಲಾ**
**ಪ್ರೇಮಸುಧಾ ಬರಸಾನೇವಾಲಾ**
**ವೀರೋಂಕೋ ಹರುಷಾನೇವಾಲಾ**
**ಮಾತೃಭೂಮಿ ಕಾ ತನುಮನ ಸಾರಾ ...."**

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅಖಂಡ ಭಾರತದ ಉದ್ದಗಲಕ್ಕೂ ಮೊಳಗುತ್ತಿದ್ದ ಸ್ವಾತಂತ್ರ್ಯ ಸೇನಾನಿಗಳ ಸ್ಫೂರ್ತಿಗೀತೆಯಿದು. ಇದು ಸ್ವಾತಂತ್ರ್ಯ ಪೂರ್ವದಲ್ಲಷ್ಟೇ ಅಲ್ಲದೆ ಸ್ವಾತಂತ್ರ್ಯಾ ನಂತರದಲ್ಲೂ ದೇಶದ ಮೈ-ಮನಗಳನ್ನೂ ಆವರಿಸಿಕೊಂಡಿರುವ ಶಕ್ತಿಗೀತೆಯಾಗಿದೆ. ಈ ಕ್ಷಣಕ್ಕೂ ಈ ಗೀತೆ ಕಿವಿಗೆ ತಾಕಿದರೆ ಸಾಕು ನರ-ನಾಡಿಗಳಲ್ಲೂ, ಧಮನಿ ಧಮನಿಗಳಲ್ಲೂ ದೇಶ ಪ್ರೇಮದ ಮಹಾ ಚೈತನ್ಯ ಮೈದಾಳಿ ಪುಟಿಯುತ್ತದೆ. ಆಗಸ್ಟ್ ಹದಿನೈದರ ದಿನವಂತೂ ಈ ಗೀತೆ ಭಾರತೀಯರೆಲ್ಲರ ನಾಲಿಗೆಯಲ್ಲಿ ನಲಿಯುತ್ತದೆ.

ಆಗಸ್ಟ್ ಹದಿನೈದು ಭಾರತೀಯರ ಪಾಲಿಗೆ ಎಂದೂ ಮರೆಯಲಾಗದ ಪರಮ ಪವಿತ್ರದಿನ. ಈ ದಿನವನ್ನು ನೆನಸಿಕೊಂಡರೆ ಸಾಕು ಸಮಸ್ತ ಭಾರತೀಯರ ಮನಸ್ಸುಗಳೂ ಮಲ್ಲಿಗೆಯಾಗಿ ಅರಳುತ್ತದೆ. ಇನ್ನು ಈ ದಿನ ಬಂದೇ ಬಿಟ್ಟಿತೆಂದರೆ ಆ ಸಂಭ್ರಮಕ್ಕೆ, ಸಂತೋಷಕ್ಕೆ, ಉಲ್ಲಾಸಕ್ಕೆ ಪಾರವೇ ಇರುವುದಿಲ್ಲ. ಅಂಥ ಅವಿನಾಭಾವ ಸಂಬಂಧ, ಅವ್ಯಕ್ತ ಆನಂದ ಆಗಸ್ಟ್ ಹದಿನೈದರ ದಿನಕ್ಕೂ ಹಾಗೂ ಭಾರತೀಯರಿಗೂ ಉಂಟು. ಅಂಥ ಭವ್ಯದಿನ ಇದು. ಈ ದಿನದ ವಿಶೇಷವೇ ಅಂಥಾದ್ದು. ತಾಯಿ ಭಾರತಿ ಪರಕೀಯರ ಬಂಧನದಿಂದ ಬಿಡುಗಡೆಗೊಂಡ ಭಾಗ್ಯದ ದಿನವಿದು.ಅದೇ ಭಾರತದ ಸ್ವಾಂತಂತ್ರ್ಯದಿನ.ಭಾರತೀಯರ ಮಹಾಸುದಿನ.ಅಂದು ಹಳ್ಳಿಯಿಂದ ದಿಲ್ಲಿಯತನಕ ಹರ್ಷಧಾರೆಯ ಸ್ವಾತಂತ್ರ್ಯಾಮೃತ ಸಿಂಚನ. ಎಲ್ಲೆಲ್ಲೂ ತ್ರಿವರ್ಣ ಧ್ವಜಗಳ ಹಾರಾಟ. ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ಯುವ ಜನತೆಯಿಂದ ವೃದ್ಧರ ತನಕ ಎಲ್ಲರಲ್ಲೂ ಸ್ವಾತಂತ್ರ್ಯೋತ್ಸವ ಸಡಗರ. ಸ್ವಾತಂತ್ರ್ಯೋತ್ಸವ ಕುರಿತು ಭಾಷಣಗಳು, ಹಾಡುಗಳು, ದೇಶಭಕ್ತಿಗೀತೆಗಳು, ರೂಪಕಗಳು, ನೃತ್ಯಗಳು, ನಾಟಕಗಳು .....ಹೀಗೆ ಎಲ್ಲವೂ ಮೇಳೈಸಿ ದೇಶಾದ್ಯಂತ ಭಾರತೀಯರಒಂದು ಸಾಂಸ್ಕೃತಿಕ ಲೋಕವೇ ತೆರೆದುಕೊಳ್ಳುತ್ತದೆ. ಹೇಳಿ ಕೇಳಿ ನಮ್ಮ ಭಾರತ ಬಹುಸಂಸ್ಕೃತಿಯ ಭವ್ಯ ಪರಂಪರೆಯ ದೇಶ. ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿರುವ ವಿಶ್ವದ ಬಹು ಅಪರೂಪದ ರಾಷ್ಟ್ರ. ಹಾಗಾಗಿ ಎಲ್ಲಾ ರೀತಿಯ ಸಾಂಸ್ಕೃತಿಕ ಉತ್ಸವಗಳೂ ಎಲ್ಲರೊಂದಾಗಿ ಸ್ವಾತಂತ್ರ್ಯದ ಹೆಸರಿನಲ್ಲಿ ಭಾರತ ಮಾತೆಗೆ ಸಲ್ಲಲ್ಪಡುತ್ತದೆ. ಆಗಸ್ಟ್ ಹದಿನೈದರ ಮಹತ್ವ ಮತ್ತು ಅಂದಿನ ಹರ್ಷವೇ ಅದ್ಭುತವಾದದ್ದು. ■



**ಮಹಾತ್ಮಗಾಂಧೀಜಿಯವರ ಸಾರಥ್ಯದಲ್ಲಿ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸಿ ಸ್ವಾತಂತ್ರ್ಯಗಳಿಸಿದ್ದು ಈ ಸ್ವಾತಂತ್ರ್ಯದ ಮಹಾಕಾವ್ಯದ ಮಹತ್ತರ ಅಧ್ಯಾಯ. ಆದರೆ, ಇಂಥ ಸ್ವಾತಂತ್ರ್ಯ ಇವತ್ತು ದೇಶದಲ್ಲಿ ಯಾವ ಸ್ಥಿತಿಯನ್ನು ತಲುಪಿದೆ ಎನ್ನುವುದರತ್ತ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ, ಕ್ರಾಂತಿವೀರರ, ಶಾಂತಿದೂತರ ಅಪೇಕ್ಷೆ ಏನಾಗಿತ್ತೆಂಬುದನ್ನೂ ಅರಿತು, ಅವರುಗಳ ಕನಸುಗಳೆಂತಹದ್ದೆಂದು ತಿಳಿದು ಅದನ್ನೆಲ್ಲವನ್ನೂ ಸಾಕಾರಗೊಳಿಸುವತ್ತ ನಾವು ಸಾಗಬೇಕಾಗಿದೆ.**



Downloaded From: www.kpscvaani.com



# ರೋಗ ನಿರೋಧಕ ಶಕ್ತಿಗೆ ಆಹಾರವೇ ಬಲ

ವೆಂಕಟೇಶ ಪ್ರಸಾದ್ ಬಿ.ಎಸ್.

ಜಗತ್ತಿನಲ್ಲೆಲ್ಲಾ ಹರಡಿರುವ ಕೊರೊನಾ ಸೋಂಕು ಜನಜೀವನದಲ್ಲಿ "ಅತ್ತ ದರಿ ಇತ್ತ ಪುಲಿ" ಎಂಬಂತಹ ಪರಿಸ್ಥಿತಿಯನ್ನು ಉಂಟುಮಾಡಿದೆ. ತಜ್ಞರ ಪ್ರಕಾರ, ಸದ್ಯದ ಮಟ್ಟಿಗೆ ಕೊರೊನಾ ವೈರಸ್ ಹಿಮ್ಮೆಟ್ಟುವ ಲಕ್ಷಣ ಕಾಣಿಸುತ್ತಿಲ್ಲ. ಲಸಿಕೆ ಅಭಿವೃದ್ಧಿ ಮಾತುಗಳು ಕೆಲವೆಡೆ ಕೇಳಿಬರುತ್ತಿದ್ದರೂ ವೈದ್ಯಕೀಯ ನೀತಿಸಂಹಿತೆಗಳಿಗೆ ಒಳಪಟ್ಟು ಅದು ದೃಢಪಡಲು ಕನಿಷ್ಟ ಐದಾರು ತಿಂಗಳು ಹಿಡಿಯುತ್ತದೆ ಎನ್ನಲಾಗಿದೆ. "ಕೊರೊನಾ ವೈರಸ್ ನೊಟ್ಟಿಗೇ ಬದುಕುವುದನ್ನು ರೂಢಿಸಿಕೊಳ್ಳಬೇಕು." ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೆಲವು ದಿನಗಳ ಹಿಂದೆಯೇ ಹೇಳಿದ್ದರು. ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೂ, "ಎಲ್ಲಾ ವ್ಯವಸ್ಥೆಗಳನ್ನು ಏರ್ಪಾಟು ಮಾಡಿದ ನಂತರವೂ ವೈರಸ್ ನೊಟ್ಟಿಗೇ ಬದುಕುವ ಪರಿಸ್ಥಿತಿ ಇದೆ" ಎಂಬರ್ಥದ ಮಾತುಗಳನ್ನು ಆಡಿದ್ದಾರೆ.

ಹಾಗಾದರೆ, ದೇಹದ ರೋಗ ನಿರೋಧ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ?– ಎಂಬ ಪ್ರಶ್ನೆ ಮೂಡುತ್ತದೆ. "ಸೂಕ್ತ ಆಹಾರ ಸೇವನೆಯೇ ಇದಕ್ಕಿರುವ ಮಾರ್ಗೋಪಾಯ. ಅಂದರೆ, ಸಮತೋಲಿತ ಆಹಾರ ಕ್ರಮ ರೂಢಿಸಿಕೊಳ್ಳಲು ಹಾಗೂ ಔಷಧೀಯ ಗುಣಗಳಿರುವ ಆಹಾರ ಪದಾರ್ಥಗಳನ್ನು ಉಪಯೋಗಿಸಲು ಒತ್ತು ಕೊಡಬೇಕಾಗುತ್ತದೆ. ಸಮತೋಲಿತ ಆಹಾರ ಎಂದರೆ ನಾವು ಸೇವಿಸುವ ಆಹಾರವು ವಿಟಮಿನ್, ಪ್ರೋಟೀನ್, ಖನಿಜಾಂಶಗಳು ಇವೆಲ್ಲವುಗಳಿಂದ ಕೂಡಿರಬೇಕು" ಎನ್ನುತ್ತಾರೆ ಆಯುರ್ವೇದ ವೈದ್ಯೆ ಡಾ.ವಸುಂಧರಾ ಭೂಪತಿ.

ಇದನ್ನು ರೂಢಿಸಿಕೊಳ್ಳಲು ಹೆಚ್ಚೇನೂ ತಲೆಕೆಡಿಸಿಕೊಳ್ಳಬೇಕಿಲ್ಲ. ನಮ್ಮ ಸಾಂಪ್ರದಾಯಿಕ ಅಡುಗೆ ಪದ್ಧತಿಯಲ್ಲೇ ಇವು ಸೇರಿಕೊಂಡಿವೆ. ಆಯುರ್ವೇದ ವೈದ್ಯರು ಹಾಗೂ ಆಹಾರ ತಜ್ಞರು ಹೇಳುವ ಪ್ರಕಾರ, ರೋಗ ಪ್ರತಿರೋಧಕ ಹೆಚ್ಚಿಸಿಕೊಳ್ಳಲು ಬಳಸಬಹುದಾದ ಆಹಾರಗಳು ಈ ಕೆಳಂಕಂಡಂತಿವೆ:

**ನುಗ್ಗೇಸೊಪ್ಪು:** ಇದರಲ್ಲಿ ಪೋಷಕಾಂಶಗಳು ಹೆಚ್ಚಾಗಿವೆ, ವಿಟಮಿನ್ ಎ, ಡಿ, ಕ್ಯಾಲ್ಸಿಯಂ, ಕಬ್ಬಿಣದ ಅಂಶಗಳು ಇರುತ್ತವೆ. ವಾರದಲ್ಲಿ ಎರಡು ಮೂರು ಸಲವಾದರೂ ಪಲ್ಯ, ಸಾರು ಮಾಡಿ ತಿನ್ನಬೇಕು.

**ಹಸಿ ಶುಂಠಿ:** ಇದರ ತುಂಡೊಂದನ್ನು ಸುಮಾರು ಒಂದು ಲೀಟರ್‌ನಷ್ಟು ನೀರಿಗೆ ಹಾಕಿ ಕುದಿಸಬೇಕು. ಆಮೇಲೆ ಆ ನೀರನ್ನು ಇಡೀ ದಿನ ಆಗಾಗ ಕುಡಿಯಲು ಬಳಸಬೇಕು. ಅಥವಾ ಇದನ್ನು ಕುಡಿಯುವ ನೀರಿಗೆ ಒಂದಷ್ಟು ಪ್ರಮಾಣದಲ್ಲಿ ಸೇರಿಸಿ ಅದರೊಟ್ಟಿಗೆ ಕುಡಿಯಬೇಕು. ಒಣಶುಂಠಿಯನ್ನು ಕುಟ್ಟಿ ಬೆಲ್ಲದ ಜೊತೆ ಮಿಶ್ರಣ ಮಾಡಿ ಅದನ್ನು ಚಪ್ಪರಿಸುವ ಮೂಲಕವೂ ಸೇವಿಸಬಹುದು. ಇದು ದೇಹದ ಉಷ್ಣತೆಯನ್ನು ಕಾಪಾಡುತ್ತದೆ, ಜೊತೆಗೆ ಕಫ ಕಟ್ಟದಂತೆ ಹಾಗೂ ಉಬ್ಬಸದಿಂದ ತೊಂದರೆಗಳಾಗದಂತೆ ರಕ್ಷಣೆ ಕೊಡುತ್ತದೆ.

**ಕರಿಮೆಣಸು:** ಮೆಣಸಿನ ಸಾರು, ಮಸಾಲೆ ಸಾರು, ಆಹಾರದಲ್ಲಿ ಚಟ್ನಿಗೆ ಕೂಡ ಬಳಸಬಹುದು. ಖಾರಾ ಪೊಂಗಲ್ ನಂತಹ ತಿಂಡಿಗೆ ಹಾಕಬಹುದು. ಇದು ಕೂಡ ಹಸಿ ಶುಂಠಿಯಂತೆಯೇ ದೇಹದ ಉಷ್ಣತೆ ಕಾಪಾಡಿ ಕಫದ ತೊಂದರೆಗಳಾಗದಂತೆ ನೋಡಿಕೊಳ್ಳುತ್ತದೆ. ಹಾಗಾಗಿ ಸಾಧ್ಯವಾಗುವ ಎಲ್ಲಾ ಅಡುಗೆಯಲ್ಲೂ ಬಳಸಬೇಕು.

**ಚಕ್ರಮುನಿ ಸೊಪ್ಪು:** ಇದು ಮಲ್ಟಿವಿಟಮಿನ್ ಸೊಪ್ಪು, ಇದನ್ನು ವಿಟಮಿನ್‌ಗಳ ಕಣಜ ಎಂದೇ ಕರೆಯಲಾಗುತ್ತದೆ, ತರಕಾರಿ ಸಲಾಡ್‌ನೊಂದಿಗೆ. ಸಾರು, ತೊವ್ವೆ ಇತ್ಯಾದಿ ರೂಪದಲ್ಲಿ ಸೇವಿಸುವುದು ಸೂಕ್ತ.

**ಮಜ್ಜಿಗೆ ಹುಲ್ಲು (ಲೆಮನ್ ಗ್ರಾಸ್):** ಇದನ್ನು ಕಾಫಿ, ಟೀ ಗೆ ಹಾಕಿ ಕುಡಿಯುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಸಹಕಾರಿಯಾಗಲಿದೆ.

**ತುಳಸಿ:** ನೀರನ್ನು ಕಾಯಿಸುವಾಗ ಅದು ಕುದಿಯಲು ಆರಂಭವಾದ ಹಂತದಲ್ಲಿ ಮೂರ್ನಾಲ್ಕು ತುಳಸಿ ಎಲೆಗಳನ್ನು ಹಾಕಬೇಕು. ನಂತರ, ಆ ನೀರನ್ನು ಕುಡಿಯುವುದರಿಂದ ರೋಗ ಪ್ರತಿರೋಧಕ ಶಕ್ತಿ ಜಾಸ್ತಿಯಾಗುತ್ತದೆ. (ಇಲ್ಲಿ ಗಮನ ನೀಡಬೇಕಾದ ಅಂಶವೆಂದರೆ, ತುಳಸಿ ಎಲೆಗಳನ್ನು ಹೆಚ್ಚು ಕಾಲ





Downloaded From: www.kpscvaani.com

> ಸಮತೋಲಿತ ಆಹಾರ ಕ್ರಮ ರೂಢಿಸಿಕೊಳ್ಳುವುದು ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಪೂರಕ. ಆದರೆ ಸಮತೋಲಿತ ಆಹಾರ ಮಾತ್ರದಿಂದಲೇ ಪ್ರತಿರೋಧ ಶಕ್ತಿಯು ದೇಹಕ್ಕೆ ಪೂರ್ಣ ಪ್ರಮಾಣದಲ್ಲಿ ದಕ್ಕಿಬಿಡುವುದಿಲ್ಲ. ಇದು ಸಾಧ್ಯವಾಗಬೇಕಾದರೆ ಮಾನಸಿಕ ಸ್ಥಿತಿ ಕೂಡ ಅಷ್ಟೇ ಮುಖ್ಯ.
>
> –**ವಸುಂಧರಾ ಭೂಪತಿ,** ಖ್ಯಾತ ಆಯುರ್ವೇದ ವೈದ್ಯರು



ಕುದಿಸಬಾರದು. ಅದನ್ನು ನೀರು ಕುದಿಯುವ ಹಂತದಲ್ಲಷ್ಟೇ ಸೇರಿಸಬೇಕು)

**ತುಳಸಿ ಬೀಜ:** ಇದನ್ನು ಒಂದು ಲೋಟ ನೀರಿಗೆ ಸೇರಿಸಿ ಒಂದಷ್ಟು ಹೊತ್ತು ಬಿಟ್ಟರೆ ಅದು ಅರಳುತ್ತದೆ. ಆಮೇಲೆ ಇದನ್ನು ಹಣ್ಣಿನ ಜೊತೆ ತಿನ್ನಬಹುದು ಅಥವಾ ಮಜ್ಜಿಗೆ ಜೊತೆ ಕುಡಿಯಬಹುದು.

**ನೆಲ್ಲಿಕಾಯಿ:** ಇದರಲ್ಲಿ ಔಷಧೀಯ ಗುಣದ ಜೊತೆಗೆ ವಿಟಮಿನ್ ಸಿ ಸಮೃದ್ಧವಾಗಿರುತ್ತದೆ. ನೆಲ್ಲಿಕಾಯಿ ಚಟ್ನಿ, ಉಪ್ಪಿನಕಾಯಿ ರೂಪದಲ್ಲಿ ತಿನ್ನಬಹುದು. ಹಸಿ ನೆಲ್ಲಿಕಾಯಿ ಸಿಗದಿದ್ದರೆ ಒಣಗಿದ ನೆಲ್ಲಿಯನ್ನು ನೀರಿಗೆ ಹಾಕಿ ನೆನೆಸಿ ನಂತರ ಸಾರು ಮಾಡಲು ಬಳಸಬಹುದು. ಇಲ್ಲದಿದ್ದರೆ, ಒಂದು ಚಮಚದಷ್ಟು ನೆಲ್ಲಿಪುಡಿಯನ್ನು ನೀರಿಗೆ ಹಾಕಿಕೊಂಡು ಖಾಲಿ ಹೊಟ್ಟೆಗೆ ಸೇವಿಸಬಹುದು. ಹುಳಿಯಂಶವಿರುವ ನಿಂಬೆ, ಕಿತ್ತಳೆ, ಮೋಸಂಬಿಗಳು ಕೂಡ ತುಂಬಾ ಉಪಯುಕ್ತ.

**ನಿಂಬೆಹಣ್ಣು:**ನಿಂಬೆಹಣ್ಣಿನಲ್ಲಿ ಅಧಿಕವಾಗಿ ಸಿಟ್ರಿಕ್ ಆಸಿಡ್ ಇರುತ್ತದೆ. ಹಾಗೂ ವಿಟಮಿನ್ ಸಿ ಪೆಕ್ಟಿನ್ ಫೈಬರ್ ವಿಟಮಿನ್ ಎ ಹೆಚ್ಚು ಪ್ರಮಾಣದಲ್ಲಿರುತ್ತದೆ. ಆಯುರ್ವೇದದಲ್ಲಿ ನಿಂಬೆಹಣ್ಣನ್ನು ಬಹಳಷ್ಟು ಔಷಧಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬೆಳಿಗ್ಗೆ ಎದ್ದ ಕೂಡಲೇ ಬೆಚ್ಚಗಿನ ನೀರಿಗೆ ಒಂದು ಹೋಳು ನಿಂಬೆರಸವನ್ನು ಜೇನುತುಪ್ಪದೊಂದಿಗೆ ತೆಗೆದುಕೊಳ್ಳಬಹುದು.

**ಅರಿಶಿನ:**ಅಡುಗೆ ಅರಿಶಿನವು ಮಸಾಲಾ ಪದಾರ್ಥವೂ ಹೌದು, ಹಾಗೂ ಔಷಧೀಯ ಪದಾರ್ಥವೂ ಹೌದು. ಅರಿಶಿನವು ನಂಜುನಿರೋಧಕ ಮತ್ತು ಪ್ರತಿಜೀವಕ ಗುಣಗಳನ್ನು ಹೊಂದಿದೆ. ಅರಶಿನ ಬಳಕೆಯು ರಕ್ತವನ್ನು ಶುದ್ಧೀಕರಿಸುತ್ತದೆ. ರಕ್ತದಲ್ಲಿ ಕಂಡುಬರುವ ವಿಷಕಾರಿ ವಸ್ತುಗಳನ್ನು ನಾಶಪಡಿಸುವ ಮೂಲಕ ರಕ್ತ ಪರಿಚಲನೆ ಸುಗಮವಾಗುವಂತೆ ಮಾಡುತ್ತದೆ. ರಾತ್ರಿ ಹೊತ್ತು ಬೆಚ್ಚಗಿನ ಹಾಲಿಗೆ ಅರ್ಧ ಚಮಚ ಅರಿಶಿಣ ಹಾಕಿ ಕುಡಿಯುವುದರಿಂದ ಕಫಾ ಆಗುವುದನ್ನು ತಡೆಯಬಹುದು.

**ಬೇಳೆಗಳು:** ಬೇಳೆಗಳ ವಿಷಯಕ್ಕೆ ಬಂದರೆ ವಾರವಿಡೀ ಬರೀ ತೊಗರಿ ಬೇಳೆ ಒಂದನ್ನೇ ಬಳಸಬಾರದು. ಕಡಲೇಬೇಳೆ, ಹೆಸರು ಬೇಳೆ ಹೀಗೆ ಬೇರೆ ಬೇರೆ ಬೇಳೆಗಳನ್ನೂ ಬಳಸಬೇಕು. ಮೊಳಕೆ ಕಟ್ಟಿದ ಹೆಸರು ಕಾಳು, ಹಲಸಂದೆ ಕಾಳು, ಮಡಕೆ ಕಾಳುಗಳಲ್ಲಿ ಪ್ರೋಟೀನ್‌ಗಳು ಹೇರಳವಾಗಿ ಇರುತ್ತವೆ.

**ಪಾಲಿಷ್ ರಹಿತ ಧಾನ್ಯಗಳು:** ಪಾಲಿಷ್ ಮಾಡಿದ ಅಕ್ಕಿ, ಬೇಳೆಗಳಲ್ಲಿ ವಿಟಮಿನ್ ನಷ್ಟವಾಗಿರುತ್ತದೆ. ಪಾಲಿಷ್ ರಹಿತ ಧಾನ್ಯಗಳನ್ನು ಅವುಗಳಲ್ಲಿರುವ ಹೊಟ್ಟಿನ ಸಮೇತ ಅಡುಗೆ ಮಾಡಿದಾಗ ದೇಹಕ್ಕೆ ವಿಟಮಿನ್ ಸಿಗುತ್ತದೆ.

**ಸೂರ್ಯಕಿರಣ/ಬಿಸಿಲು:** ಮನುಷ್ಯರಿಗೆ ಮೈಮೇಲೆ ಸೂರ್ಯಕಿರಣ/ಬಿಸಿಲು ಬೀಳುವುದು ಕೂಡ ತುಂಬಾ ಮುಖ್ಯ. ಇಂದಿನ ಜೀವನಶೈಲಿಯ ಕಾರ್ಯಗಳಲ್ಲಿ ಮುಳುಗಿರುವಾಗ ಬಹುತೇಕ ಜನರಿಗೆ ಮೈಯನ್ನು ಬಿಸಿಲಿಗೆ ಒಡ್ಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಬಿಸಿಲಿನ ಸ್ಪರ್ಶದ ಕೊರತೆಯಿಂದ ವಿಟಮಿನ್ ಡಿ ಕೊರತೆ ಇರುವವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಮನೆಯಲ್ಲೇ ಟ್ರೆಡ್ ಮಿಲ್ ಇತ್ಯಾದಿ ಸಾಧನಗಳನ್ನು ಬಳಸಿ ವ್ಯಾಯಾಮ ಮಾಡಿದರೂ ಮೈಮೇಲೆ ಸೂರ್ಯನ ಬಿಸಿಲು/ಬೆಳಕು ಬೀಳುವುದು ಮುಖ್ಯ. ಹೀಗೆ ಹೊರಗಿನ ವಾತಾವರಣದಲ್ಲಿ ಮೈಯನ್ನು ಬಿಸಿಲಿಗೆ ಒಡ್ಡಿಕೊಳ್ಳುವುದರಿಂದ ದೇಹಕ್ಕೆ ಲಭ್ಯವಾಗುವ ಆಮ್ಲಜನಕದ ಗುಣಮಟ್ಟ ಕೂಡ ಉತ್ತಮವಾಗಿರುತ್ತದೆ. ಬಿಸಿಲು ಬಿದ್ದ ಮಾತ್ರಕ್ಕೆ ಚರ್ಮಕ್ಕೆ ಹಾನಿಯಾಗಿಬಿಡುತ್ತದೆ ಎಂದು ಭಯ ಬೀಳಬೇಕಿಲ್ಲ. ಎಲ್ಲೋ ಕೆಲವರಿಗೆ ಮಾತ್ರ ಬಿಸಿಲಿಗೆ ಚರ್ಮ ಕೆಂಪಾಗುವ ಅಲರ್ಜಿ ಇರುತ್ತದೆ. ಅಂಥವರು ಕೂಡ ಛತ್ರಿ ಹಿಡಿದಾದರೂ ಬಿಸಿಲಿಗೆ ಹೋಗುವುದನ್ನು ರೂಢಿಸಿಕೊಳ್ಳಬೇಕು.

ಮನಸ್ಸು ಉಲ್ಲಾಸದಿಂದ ಇರುವುದು ಬಹಳ ಮುಖ್ಯ. ಸಾಹಿತ್ಯ, ಸಂಗೀತ, ಚಿತ್ರಕಲೆ, ಅಭಿನಯದ ಅಭಿರುಚಿಗಳು ಮಾನಸಿಕ ಸಂತೋಷವನ್ನು ತಂದುಕೊಡುತ್ತವೆ. ಮನಸ್ಸು ಆಂತರಿಕ ಒತ್ತಡದಿಂದ ಮುಕ್ತವಾಗಿದ್ದು ಸಮತೋಲಿತ ಆಹಾರ ಕ್ರಮವನ್ನು ರೂಢಿಸಿಕೊಂಡಿದ್ದಾಗ ದೇಹದ ಬಿಳಿರಕ್ತ ಕಣಗಳು ಶಕ್ತಿಯುತವಾಗಿರುತ್ತವೆ. ಆಗ ಯಾವುದೇ ವೈರಾಣು ದೇಹವನ್ನು ಹೊಕ್ಕರೂ ಅವು ಸಶಕ್ತವಾಗಿ ಹೋರಾಡಿ ಹಿಮ್ಮೆಟ್ಟಿಸುತ್ತವೆ. ವೈರಸ್‌ಗಳು ಜಗತ್ತಿಗೆ ಹೊಸದೇನೂ ಅಲ್ಲ. ಅವು ಹಿಂದಿನಿಂದಲೂ ಇವೆ. ಹೀಗಾಗಿ, ಅವುಗಳ ವಿರುದ್ಧ ಹೋರಾಡಲು ದೇಹವನ್ನು ಸಜ್ಜುಗೊಳಿಸಲು ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಗಮನ ನೀಡಬೇಕು ಎಂಬುದು ಆಯುರ್ವೇದ ವೈದ್ಯರು ಮತ್ತು ಆಹಾರ ತಜ್ಞರ ಸಲಹೆಯಾಗಿದೆ. ■



Downloaded From: www.kpscvaani.com



# ಕೋವಿಡ್ ಆಸ್ಪತ್ರೆಯಾದ ಕಂದಾಯ ಭವನ

**ಕಂದಾಯ ಭವನವನ್ನೇ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿದ ಹಿರಿಮೆ ರಾಮನಗರ ಜಿಲ್ಲೆಯದ್ದು. ಇಡೀ ರಾಜ್ಯದಲ್ಲೇ ಮೊದಲ ಬಾರಿ ಆರೋಗ್ಯ ಸಮೀಕ್ಷೆ ನಡೆಸಿದ ಕೀರ್ತಿ ಜಿಲ್ಲೆಯದ್ದು. ತುರ್ತು ಸಂದರ್ಭದಲ್ಲಿ ತ್ವರಿತವಾಗಿ ಖಾಲಿ ಇದ್ದ ಸರ್ಕಾರಿ ಕಟ್ಟಡವನ್ನೇ ಆಸ್ಪತ್ರೆಯನ್ನಾಗಿಸಿದ ಈ ನಡೆ ರಾಜ್ಯದ ಇತರೆ ಜಿಲ್ಲೆಗಳಿಗೆ ಮಾದರಿಯಾಗಿದೆ.**

ಸಿ. ಆರ್. ನವೀನ್

**ಬೆಂ**ಗಳೂರಿಗೆ ಅಂಟಿಕೊಂಡಿರುವ ರಾಮನಗರ ಎಲ್ಲದಕ್ಕೂ ರಾಜಧಾನಿಯನ್ನೇ ಅವಲಂಬಿಸಿದೆ. ರೇಷ್ಮೆ ನಗರಿ ಎಂಬ ಹಿರಿಮೆ ಇದ್ದರು ಇನ್ನುಳಿದ ಎಲ್ಲಾ ಸೌಲಭ್ಯಗಳಿಗೂ ಇಲ್ಲಿನವರು ಸಾಮಾನ್ಯವಾಗಿ ಬೆಂಗಳೂರಿಗೆ ತೆರಳುತ್ತಾರೆ. ಇನ್ನೂ ಆಸ್ಪತ್ರೆಯ ವಿಷಯಕ್ಕೆ ಬಂದರೆ ಇಲ್ಲಿನವರಿಗೆ ಸಿಲಿಕಾನ್‌ಸಿಟಿಯೇ ಹೆಚ್ಚು ಆಪ್ತ. ಹಣ ಉಳಿಕೆಗೆ ಕೆಲವರು ಮೈಸೂರನ್ನು ಆಯ್ದುಕೊಳ್ಳುತ್ತಾರೆ. ಹೀಗಾಗಿ ವೈದ್ಯಕೀಯ ರಂಗಕ್ಕೆ ರಾಮನಗರ ಹೆಚ್ಚು ತೆರೆದುಕೊಂಡಿಲ್ಲ ಎನ್ನುವುದು ಅಷ್ಟೇ ಸತ್ಯ.

ಇಂತಹ ರಾಮನಗರ ಕೋವಿಡ್ ವಿಷಯದಲ್ಲಿ ಅಪರೂಪದ ಸಾಧನೆ ಮಾಡಿದೆ. ಜಿಲ್ಲೆಗೆ ವೈದ್ಯಕೀಯ ಕಾಲೇಜು ಇನ್ನೂ ದೂರದಲ್ಲೇ ಇದೆ. ಜಿಲ್ಲಾ ಆಸ್ಪತ್ರೆ ಇನ್ನೂ ಉದ್ಘಾಟನೆಯಾಗಬೇಕಿದೆ. ಇಂತಹ ಪರಿಸ್ಥಿತಿಯಲ್ಲೇ ಜಿಲ್ಲೆಯಲ್ಲಿ 250ಕ್ಕೂ ಹೆಚ್ಚು ಮಂದಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿ ಕೋವಿಡ್ ನಿಂದ ಗುಣಪಡಿಸಲಾಗಿದೆ. (2020ರ ಜುಲೈ ತಿಂಗಳ ಮಧ್ಯಂತರಕ್ಕೆ). ಭಾರತಕ್ಕೆ ಮೆಲ್ಲಗೆ ಕಾಲಿಡಲು ಆರಂಭಿಸಿ ಕೊರೊನಾಕ್ಕೆ ಚಿಕಿತ್ಸೆ ನೀಡಲು ಎಲ್ಲಾ ಜಿಲ್ಲೆಗಳು ಸಜ್ಜಾಗ ತೊಡಗಿದ್ದಾಗ, ರಾಮನಗರ ಜಿಲ್ಲಾಡಳಿತ ಆಸ್ಪತ್ರೆಗಾಗಿ ಹುಡುಕಾಟ ಆರಂಭಿಸಿತ್ತು. ಜಿಲ್ಲೆಯಲ್ಲಿರುವ ಜಿಲ್ಲಾ ಆಸ್ಪತ್ರೆ ಇತರ ರೋಗಗಳಿಗೆ ಚಿಕಿತ್ಸೆ ನೀಡಲು ಮೀಸಲಾಗಿತ್ತು. ಹೀಗಾಗಿ ಪರ್ಯಾಯ ಆಸ್ಪತ್ರೆ ಜಿಲ್ಲೆಗೆ ಅನಿವಾರ್ಯವಾಗ ತೊಡಗಿತ್ತು. ಆಗಲೇ ಕಣ್ಣಿಗೆ ಬಿದ್ದಿದ್ದು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಕಳೆದ ಎರಡು ವರ್ಷಗಳಿಂದ ಖಾಲಿ ಇದ್ದ ಕಂದಾಯ ಭವನ.



Downloaded From: www.kpscvaani.com

ಬಹುತೇಕ ಖಾಲಿಯಾಗಿದ್ದ ಕಂದಾಯ ಭವನವನ್ನು ಕೋವಿಡ್ ಆಸ್ಪತ್ರೆಯನ್ನಾಗಿಸುವ ಬಗ್ಗೆ ಸಭೆಗಳು ನಡೆಯುತ್ತಿದ್ದವು. ಅದೇ ಹೊತ್ತಿನಲ್ಲಿ ದೇಶದ ಮೊದಲ ಕೋವಿಡ್ ಸಾವು ಕಲಬುರಗಿಯಲ್ಲಿ ಸಂಭವಿಸಿತು. ಸಮಸ್ಯೆ ಇನ್ನಷ್ಟು ಜಟಿಲವಾಗ ತೊಡಗಿತ್ತು. ಸಮಯ ಕೈಮೀರುತ್ತಿತ್ತು. ಇತ್ತಕಡೆ ಕೋವಿಡ್ ಪ್ರಕರಣಗಳ ಸಂಖ್ಯೆ ನಿಧಾನಕ್ಕೆ ಏರತೊಡಗಿತ್ತು. ಜಿಲ್ಲಾಡಳಿತ ಅನಿವಾರ್ಯವಾಗಿ ಮುಂದಿನ ಸಮಸ್ಯೆಯನ್ನು ಎದುರಿಸಲು ತುರ್ತಾಗಿ ಆಸ್ಪತ್ರೆಯನ್ನು ಸ್ಥಾಪಿಸುವ ಸಂದಿಗ್ಧತೆಯಲ್ಲಿ ಸಿಲುಕಿತ್ತು. ದೇಶದಲ್ಲಿ ಮೊದಲ ಹಂತದ ಲಾಕ್‌ಡೌನ್ ಘೋಷಣೆಯಾಗುತ್ತಿದ್ದ ಹೊತ್ತಿಗೆ ಕಂದಾಯ ಭವನ 80 ಹಾಸಿಗೆಯುಳ್ಳ ಕೋವಿಡ್–19 ರೆಫರಲ್ ಆಸ್ಪತ್ರೆಯಾಗಿ ಬದಲಾಗಿತ್ತು.

ಖಾಲಿ ಕಟ್ಟಡವನ್ನು ಆಸ್ಪತ್ರೆಯನ್ನಾಗಿಸಿದ ಅನುಭವ ಜಿಲ್ಲಾಡಳಿತಕ್ಕೆ ಹೊಸ ಪಾಠವನ್ನು ಕಲಿಸಿಕೊಟ್ಟಿತು. ಇತರ ಜಿಲ್ಲೆಗಳು ಇದ್ದ ಆಸ್ಪತ್ರೆಗಳನ್ನು ಕೋವಿಡ್ ಆಸ್ಪತ್ರೆಯನ್ನಾಗಿಸಿಕೊಂಡಿದ್ದವು. ಏನೂ ಇಲ್ಲದ ಕಟ್ಟಡದಲ್ಲಿ ಆಸ್ಪತ್ರೆಯನ್ನಾಗಿಸಿದ ಅನುಭವ ರಾಮನಗರಕ್ಕೆ ವರದಾನವಾಗಿತ್ತು. ಏನೂ ಸೌಲಭ್ಯಗಳಿಲ್ಲದ ಹಾಸ್ಟೆಲ್ ಇಲ್ಲವೆ ಕಲ್ಯಾಣ ಮಂಟಪಗಳನ್ನು ಆಸ್ಪತ್ರೆಯನ್ನಾಗಿಸುವ ಅನುಭವ ಈಗ ರಾಮನಗರಕ್ಕೆ ಸುಲಭವಾಗಿ ಒಲಿದಿದೆ.

ಸರಿಸುಮಾರು 14 ಲಕ್ಷ ಜನಸಂಖ್ಯೆ ಹೊಂದಿರುವ ರಾಮನಗರದಲ್ಲಿ ಶೇ. 10 ರಷ್ಟು ಅಂದರೂ 14 ಸಾವಿರ ರೋಗಿಗಳಿಗೆ ಚಿಕಿತ್ಸೆ ನೀಡಲು ಜಿಲ್ಲಾಡಳಿತ ಸಜ್ಜಾಗಬೇಕಿತ್ತು. ಇದನ್ನೇ ಸವಾಲಾಗಿ ಸ್ವೀಕರಿಸಿದ ಜಿಲ್ಲಾಡಳಿತವು ಮಾಗಡಿ, ಚನ್ನಪಟ್ಟಣ, ಕನಕಪುರ, ಮತ್ತು ರಾಮನಗರದಲ್ಲಿ ಇರುವ ಕಲ್ಯಾಣ ಮಂಟಪ ಮತ್ತು ವಸತಿ ಶಾಲೆಗಳನ್ನೂ ಸಹ ಆಸ್ಪತ್ರೆಗಳನ್ನಾಗಿಸುವ ಮತ್ತು ಇರುವ ಆಸ್ಪತ್ರೆಗಳನ್ನು ಉನ್ನತ ದರ್ಜೆಗೇರಿಸುವ ನೀಲ ನಕ್ಷೆಯನ್ನು ಸಿದ್ಧಪಡಿಸಿಕೊಂಡಿದೆ.

**ಕೋವಿಡ್ ಕೇರ್ ಸೆಂಟರ್:** ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳು ಹೆಚ್ಚೆಂದರೆ 50 ಹಾಸಿಗೆಗಳಿಗೆ ಸೀಮಿತವಾಗಿದ್ದವು. ಇದನ್ನು ಗಮನಿಸಿದ ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಪ್ರತಿ ಜಿಲ್ಲೆಯಲ್ಲೂ 500 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್ ಅನ್ನು ತೆರೆಯುವಂತೆ ಜಿಲ್ಲಾಡಳಿತಕ್ಕೆ ಸಲಹೆ ನೀಡಿದ್ದರು. ಜಿಲ್ಲಾ ಕೇಂದ್ರದಲ್ಲಿ ಮಾಡಿದ ಪ್ರಯೋಗವನ್ನೇ ಜಿಲ್ಲಾಡಳಿತ ತಾಲ್ಲೂಕುಗಳಿಗೂ ವಿಸ್ತರಿಸಿತ್ತು. ಕೇವಲ ಎರಡು ವಾರಗಳಲ್ಲಿ 1000 ಹಾಸಿಗೆಗಳ ಕೇಂದ್ರಗಳು ನಾಲ್ಕು ತಾಲ್ಲೂಕುಗಳಲ್ಲಿ ಸಿದ್ಧವಾಗಿತ್ತು. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಇದರ ಪ್ರಮಾಣವನ್ನು ಪ್ರತಿ ತಾಲ್ಲೂಕಿನಲ್ಲಿ 500 ರಿಂದ 600 ಹಾಸಿಗೆಗಳ ವರೆಗೆ ಜಿಲ್ಲಾಡಳಿತ ವಿಸ್ತರಿಸುತ್ತಿದೆ.

ರಾಜ್ಯದಲ್ಲಿ ಕೋವಿಡ್‌ನ ಗ್ರಾಫ್ ಏರುತ್ತಿದ್ದರೂ ರಾಮನಗರದಲ್ಲಿ ಮೊದಲ ಪ್ರಕರಣವೂ ದಾಖಲಾಗಿರಲಿಲ್ಲ. ಸಜ್ಜುಗೊಂಡಿದ್ದ ತಾತ್ಕಾಲಿಕ ಆಸ್ಪತ್ರೆಯನ್ನು ಪರೀಕ್ಷೆಗೆ ಒಳಪಡಿಸುವ ಪ್ರಮೇಯವೇ ಎದುರಾಗಿರಲಿಲ್ಲ. ಅಂತೂ ಇಂತೂ ಎನ್ನುವಂತೆ ರಾಜ್ಯದಲ್ಲಿ ಬಾಕಿ ಉಳಿದಿದ್ದ ಕೊನೆ ಎರಡು ಜಿಲ್ಲೆಗಳ ಪೈಕಿ ರಾಮನಗರದಲ್ಲಿ ಮೊದಲ ಪ್ರಕರಣ ಕಳೆದ ಮೇ ತಿಂಗಳ ಅಂತ್ಯದಲ್ಲಿ ದಾಖಲಾಗಿತ್ತು. ಚೆನ್ನೈನಿಂದ ಬಂದಿದ್ದ ಎರಡು ವರ್ಷದ ಮಗುವಿಗೆ ಸೋಂಕು ಇರುವುದು ದೃಢಪಟ್ಟಿತ್ತು. ಮಗುವನ್ನು ಬೆಂಗಳೂರಿನ ಕೆಂಗೇರಿಯಲ್ಲಿರುವ ರಾಜ ರಾಜೇಶ್ವರಿ ನಗರಕ್ಕೆ ದಾಖಲಿಸಲಾಗಿತ್ತು.

ಒಂದೊಂದೇ ಪ್ರಕರಣಗಳು ಜಿಲ್ಲೆಯಲ್ಲಿ ವರದಿಯಾಗುತ್ತಿದ್ದಂತೆ ತಾತ್ಕಾಲಿಕವಾಗಿ ಸಿದ್ಧಗೊಂಡಿದ್ದ ಕೋವಿಡ್ ಆಸ್ಪತ್ರೆಗೆ ಹೊಸ ಸವಾಲುಗಳು ಎದುರುಗೊಂಡಿದ್ದವು. ನೋಡ ನೋಡುತ್ತಿದ್ದಂತೆಯೇ 50 ಕ್ಕೂ ಹೆಚ್ಚು ಮಂದಿ ಈ ಆಸ್ಪತ್ರೆಗೆ ದಾಖಲಾಗಿದ್ದರು. 200 ಹಾಸಿಗೆ ಸಾಮರ್ಥ್ಯದ ಈ ಆಸ್ಪತ್ರೆಯಲ್ಲಿ ಜುಲೈ ಅಂತ್ಯದ ಹೊತ್ತಿಗೆ 150 ಜನರು ಭರ್ತಿಯಾಗಿದ್ದರು. ಈ ಕೇಂದ್ರದಲ್ಲಿ ಯಶಸ್ವಿಯಾಗಿ ಚಿಕಿತ್ಸೆ ನೀಡಿದ ಫಲವಾಗಿ ಮೊದಲ ಹಂತದಲ್ಲಿ 14 ಮಂದಿ ಬಿಡುಗಡೆಯಾಗಿದ್ದರು. ಜುಲೈ ಅಂತ್ಯದ ವೇಳೆಗೆ ಇಲ್ಲಿಂದ 205 ಕ್ಕೂ ಹೆಚ್ಚು ಜನರು ಯಶಸ್ವಿಯಾಗಿ ಗುಣಮುಖರಾಗಿ ಈ ಆಸ್ಪತ್ರೆಯಿಂದ ಹೊರ ನಡೆದಿದ್ದಾರೆ.

ಆರಂಭದಲ್ಲಿ 80 ಹಾಸಿಗೆಯ ಸಾಮರ್ಥ್ಯದೊಂದಿಗೆ ಆರಂಭಗೊಂಡ ಈ ಆಸ್ಪತ್ರೆಯು ಈಗ 250 ಹಾಸಿಗೆಗಳನ್ನು ಹೊಂದಿದೆ. 8 ಐಸಿಯು ಘಟಕಗಳಿವೆ. ಜೊತೆಗೆ, 2 ವೆಂಟಿಲೇಟರ್ ಸಹಿತ ಐಸಿಯು ಇದೆ. ಮುಂದಿನ ದಿನಗಳಲ್ಲಿ ಪರಿವರ್ತನೆಗೊಂಡಿರುವ ಕೋವಿಡ್ ಆಸ್ಪತ್ರೆಯನ್ನೇ ವಿಸ್ತರಿತ ಆಸ್ಪತ್ರೆಯ್ನನಾಗಿಸುವ ಉದ್ದೇಶವಿದೆ. ಈಗ ಇಲ್ಲಿ ಕಲ್ಪಿಸಿರುವ ಚಿಕಿತ್ಸಾ ಸೌಲಭ್ಯಗಳು ಮುಂದಿನ ದಿನಗಳಲ್ಲೂ ರೋಗಿಗಳಿಗೆ ಬಳಕೆಯಾಗಲಿ ಎನ್ನುವ ಸದುದ್ದೇಶ ಜಿಲ್ಲಾಡಳಿತದ್ದಾಗಿದೆ. ಒಟ್ಟಾರೆಯಾಗಿ ಕಂದಾಯ ಭವನವನ್ನೇ ವಿಸ್ತರಿತ ಜಿಲ್ಲಾ ಆಸ್ಪತ್ರೆಯನ್ನಾಗಿಸಿ ವಿವಿಧ ರೀತಿಯ ರೋಗಗಳಿಗೆ ಚಿಕಿತ್ಸೆ ನೀಡಲು ಮುಂದಾಗಿದೆ.

**ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ:** ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡುವ ಸಲುವಾಗಿ ಲಭ್ಯವಿರುವ ಎಲ್ಲಾ ಆಯ್ಕೆಗಳನ್ನು ಪರಿಶೀಲಿಸಿದ್ದ ಜಿಲ್ಲಾಡಳಿತ ಈ ಸಂಬಂಧವಾಗಿ ಖಾಸಗಿ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಕೆಂಗೇರಿ ಸಮೀಪದಲ್ಲಿರುವ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನೊಂದಿಗೆ 600 ಹಾಸಿಗೆಗಳನ್ನು ಮೀಸಲಿಡಲು ಒಪ್ಪಂದ ಮಾಡಿಕೊಂಡಿದೆ. ಹಾಗೆಯೇ ಕನಕಪುರ ರಸ್ತೆಯಲ್ಲಿರುವ ದಯಾನಂದ್ ಸಾಗರ್ ಆಸ್ಪತ್ರೆಯೊಂದಿಗೆ 300 ಹಾಸಿಗೆಗಳನ್ನು ಮೀಸಲಾಗಿಟ್ಟುಕೊಳ್ಳಲು ಒಪ್ಪಂದ ಮಾಡಿಕೊಂಡಿದೆ.


**ಆರೋಗ್ಯ ಸಮೀಕ್ಷೆ:** ಕೋವಿಡ್ ಅನ್ನು ಎದುರಿಸಲು ಮೊದಲ ಹಂತದಲ್ಲಿ ಜಿಲ್ಲಾಡಳಿತ ಜಿಲ್ಲೆಯಲ್ಲಿರುವ ಜನರ ಆರೋಗ್ಯ ಸಮೀಕ್ಷೆಯನ್ನು ನಡೆಸಲು ನಿರ್ಧರಿಸಿತ್ತು. ಕೊರೊನಾಕ್ಕೆ ಸಾಮಾನ್ಯವಾಗಿ ತುತ್ತಾಗಿರುವ ಪೈಕಿ ಅಧಿಕ ರಕ್ತದೊತ್ತಡ ಮತ್ತು ಮಧುಮೇಹಿಗಳೇ ಹೆಚ್ಚು. ಇವರೇ ಅಧಿಕ ಅಪಾಯಕ್ಕೆ ಒಳಗಾಗುತ್ತಾರೆ. ಹೃದಯ ಸಂಬಂಧಿ ಸಮಸ್ಯೆಗಳು, ಮೂತ್ರಪಿಂಡ ಸಮಸ್ಯೆ, ಡಯಾಲಿಸಿಸ್‌ಗೆ ಒಳಗಾಗುತ್ತಿರುವವರು ಹೀಗೆ ವಿವಿಧ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವವರ ಸಮೀಕ್ಷೆಯನ್ನು ನಡೆಸಿತು.

ಜಿಲ್ಲಾಡಳಿತ ಈ ಕ್ರಮ ಇತರ ಜಿಲ್ಲೆಗಳಿಗೂ ಮಾದರಿಯಾಗಿದೆ. ಎಲ್ಲಾ ರೀತಿಯಲ್ಲೂ ಕೋವಿಡ್‌ನ ಸಮಸ್ಯೆಯನ್ನು ಎದುರಿಸುವುದರ ಜೊತೆಗೆ ಅದನ್ನು ತಡೆಹಿಡಿಯುವ ಮಾರ್ಗಗಳಲ್ಲೂ ಗಮನ ನೀಡಿತ್ತು. ಹೀಗಾಗಿಯೇ ಜಿಲ್ಲೆಯಲ್ಲಿ ಕೊರೊನಾ ತಡವಾಗಿ ಕಾಣಿಸಿತ್ತು. ಕೊರೊನಾ ಚಿಕಿತ್ಸೆಗೆ ಮತ್ತು ನಿಯಂತ್ರಣಕ್ಕೆ ರಾಮನಗರ ಜಿಲ್ಲಾಡಳಿತ ಕೈಗೊಂಡ ಕ್ರಮಗಳು ಜಿಲ್ಲೆಯ ಜನತೆಯಲ್ಲಿ ಸುರಕ್ಷತೆಯ ಭಾವನೆಯನ್ನು ಮೂಡಿಸಿದೆ. ■



Downloaded From: www.kpscvaani.com

# ಪದಬಂಧ-9




ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

3. ತಿರುಗಿ ಚಿಂತನೆ ಮಾಡುವಿಕೆ (3)
5. ದೇವತೆಗಳ ಭಾಷೆ ಅಥವಾ ಸಂಸ್ಕೃತ (5)
7. ಶ್ರೀ ಗಂಧ ತೇಯ್ದು ಮಾಡಿದ ಗಂಧವಿಲ್ಲಿ ದೀರ್ಘವಾಗಿದೆ (3)
8. ಅತ್ತಿತ್ತ ನೋಡುವಾಗ ಕಾಣಿಸಿದ ಮೊಟ್ಟೆ (2)
10. ನೆನಪಿನಿಂದ ಮಾಸದ ತಿಂಗಳು! (2)
12. ಸಮುದ್ರದೊಳಗೆ ಚಾಚಿಕೊಂಡಿರುವ ಭೂ ಭಾಗ (3)
14. ಕೆಲಸ ಮಾಡಲು ಬೇಕಾದ ಸಾಧನ (5)
15. ಕತ್ತಲು ಇಲ್ಲಿದೆ (3)

**ಮೇಲಿಂದ ಕೆಳಕ್ಕೆ**

1. ಹಸುವಿನ ಬಳಿಯಿರುವ ಎಳೆಮಗು (4)
2. ಬೆಳಗಿನ ಕಾಲ (2)
4. ರಾಷ್ಟ್ರೀಯ ಕ್ರೀಡಾದಿನಾಚರಣೆಯನ್ನು ಇವರ ಜನ್ಮದಿನದಂದು ಆಚರಿಸಲಾಗುತ್ತದೆ (4)
5. ಕೇಂದ್ರ ಸಾಹಿತ್ಯ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ಮಹಿಳಾ ಸಾಹಿತಿ (7)
6. ಇದು ನಮ್ಮ ದೇಶ (3)
9. ಗತಿಯಲ್ಲಿ ಕೊನೆಗೊಂಡಿರುವ ಇಯತ್ತೆ! (4)
11. ಹತ್ತಿರಕ್ಕೊಂದು ಪರ್ಯಾಯ ಪದ (3)
13. ನಡುವೆ ಕರವನ್ನಿಟ್ಟ ಘಟನೆ(4)
14. ಮಾತು ಅಥವಾ ಹೇಳಿಕೆ(2)

**ಉತ್ತರ**

**ಮೇಲಿಂದ ಕೆಳಕ್ಕೆ**

1.ಹಸುಗೂಸು 2.ಉಷೆ 4.ಧ್ಯಾನ್ ಚಂದ್ 5.ಗೀತಾನಾಗಭೂಷಣ 6.ಭಾರತ 9.ತರಗತಿ 11.ಸಮೀಪ 13.ಪ್ರಕರಣ 14.ಉಕ್ತಿ

**ಎಡದಿಂದ ಬಲಕ್ಕೆ**

1.ಸುನಿಧ್ಯಾ 5.ಗೀರ್ವಾಣಭಾಷೆ 7.ಚಂದನಾ 8.ತತ್ತಿ 10.ಮಾಸ 12.ಭೂಶಿರ 14.ಉಪಕರಣ 15.ತಿಮಿರ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : S N Siddaramappa, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Downloaded From: www.kpscvaani.com




ಜುಲೈ 13 ರಂದು ಕೋವಿಡ್–19, ಮಳೆ ಪರಿಸ್ಥಿತಿ ಹಾಗೂ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವೀಡಿಯೋ ಸಂವಾದ ನಡೆಸುತ್ತಿರುವುದು



ಜುಲೈ 14 ರಂದು ಮುಖ್ಯಮಂತ್ರಿಗಳ ಕೋವಿಡ್ 19 ಪರಿಹಾರ ನಿಧಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ವತಿಯಿಂದ 2 ಕೋಟಿ ರೂಗಳ ದೇಣಿಗೆಯ ಚೆಕ್ ಅನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್ ಅವರು ಹಸ್ತಾಂತರ ಮಾಡುತ್ತಿರುವುದು.

Downloaded From: www.kpscvaani.com

RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From: www.kpscvaani.com